ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರ ಅಧ್ಯಕ್ಷತೆಯಲ್ಲಿ ದಿನಾಂಕ 12-08-2014 ರಂದು ಬೆಳಗ್ಗೆ 11.00 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು :

*******

ಹಾಜರಿ : ಹಾಜರಾತಿ ವಹಿಯಲ್ಲಿದ್ದಂತೆ.

*******

ಸಭೆಯ ಆರಂಭದಲ್ಲಿ ಉಪಕಾರ್ಯದರ್ಶಿ(ಆಡಳಿತ)ಯವರು ಮಾತನಾಡಿ, ಸಭೆಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ವಿಧಾನಸಭಾ ಸದಸ್ಯರು, ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳು, ತಾಲ್ಲೂಕು ಪಂಚಾಯತ್ ಅಧ್ಯಕ್ಷರುಗಳು, ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಪತ್ರಿಕಾ ಮಾಧ್ಯಮದವರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು, ಹಾಗೂ ಮಾನ್ಯ ಅಧ್ಯಕ್ಷರು ಸಭೆಯ ಕಾರ್ಯ ಕಲಾಪಗಳನ್ನು ನಡೆಸಿ ಕೊಡಬೇಕೆಂದು ವಿನಂತಿಸಿದರು.

ಮೊದಲಿಗೆ ಮಾನ್ಯ ಸದಸ್ಯರಾದ ಶ್ರೀ ರವಿ ಹೆಬ್ಬಾಕ ರವರು, ಇಂದಿನ ದಿನಮಾನಗಳಲ್ಲಿ ಲ್ಯಾಂಡ್ ಡೆವಲಪರ್ ಗಳು ನಿಯಮಬಾಹಿರವಾಗಿ ಬಡಾವಣೆ(ಲೇಔಟ್)ಗಳನ್ನು ಮಾಡಿ ಅಕ್ರಮ ಹಣ ಗಳಿಕೆಯಲ್ಲಿ ತೊಡಗಿದ್ದಾರೆ; ಭೂ ಪರಿವರ್ತನೆ ನಿಯಮಗಳ ಪ್ರಕಾರ 10% ಸಿ.ಎ., 30 ಮೀಟರ್ ರಸ್ತೆ ಮತ್ತು 9 ಮೀಟರ್ ಪಾರ್ಕ್ ಇರಲೇಬೇಕೆಂದಿದೆ; ಇಲ್ಲವಾದಲ್ಲಿ ಪೈಪ್ ಲೈನ್ ಮಾಡಲು ಮತ್ತು ಮೇಲು ತೊಟ್ಟಿಗಳನ್ನು ನಿರ್ಮಿಸಲು ಸಾಧ್ಯವೇ ಇಲ್ಲ; ನಗರ ಭಾಗಗಳಲ್ಲಿ ಬಡಾವಣೆ ಅನುಮೋದನೆ ಪಡೆಯಲು ಭೂ ಮಾಲೀಕರು 50% ಕ್ಕಿಂತ ಹೆಚ್ಚು ಭೂಮಿಯನ್ನು ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಡಬೇಕಾಗುತ್ತದೆ; ಆದರೆ ಈಗ ತುಮಕೂರು ನಗರದ ಮತ್ತು ಸುತ್ತ ಮುತ್ತಲ ಗ್ರಾಮ ಪಂಚಾಯಿತಿಗಳಲ್ಲಿ ಪಿ.ಡಿ.ಓ.ಗಳು, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಕಾರ್ಯದರ್ಶಿಗಳು ಷಾಮೀಲಾಗಿ ಊರುಕೆರೆ, ಅರಕೆರೆ ಸುತ್ತ-ಮುತ್ತ ಸುಮಾರು 500 ಎಕರೆಯಷ್ಟು ಭೂಮಿ ಲೇಔಟ್ ಆಗಿದ್ದು, ಈ ಪೈಕಿ ನಿಯಮಾನುಸಾರ ಸರ್ಕಾರಕ್ಕೆ ಗಿಫ್ಟ್ ಡೀಡ್ ಆಗಿ ಒಂದು ಕುಂಟೆ ಜಾಗವನ್ನೂ ಬಿಡದೆ, ಟೂಡಾ ಮತ್ತು ಟೌನ್ ಪ್ಲಾನಿಂಗ್ ಅನುಮತಿ ಇಲ್ಲದೆ ಅಕ್ರಮ ಖಾತೆಗಳಿಗೆ ಅನುಮತಿ ನೀಡಿ ಲೇಔಟ್ ಗಳನ್ನು ಮಾಡಿ ನಿಯಮ ಉಲ್ಲಂಘಿಸಿ ನಿವೇಶನದಾರರಿಗೆ ಬೇಕಾಬಿಟ್ಟಿ ಖಾತೆಗಳನ್ನು ನೀಡಿ ಸರ್ಕಾರಕ್ಕೆ ನಷ್ಟವುಂಟು ಮಾಡಿದ್ದಾರೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು, ಭೂ ಪರಿವರ್ತನೆಯಾದ ನಿವೇಶನಗಳಿಗೆ ನಮೂನೆ 9 ಮತ್ತು 11ನ್ನು ನೀಡುವ ಅಧಿಕಾರ ಗ್ರಾಮ ಪಂಚಾಯಿತಿಗೆ ಇದೆ; ನಿಯಮಬಾಹಿರವಾಗಿ ಲೇಔಟ್ ಗಳಿಗೆ ಖಾತೆ ಮಾಡಿ, ಕಾನೂನು ಮೀರಿ ನಮೂನೆ 9 ಮತ್ತು 11ನ್ನು ನೀಡಿದ್ದರೆ ಅಂತಹ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕಾಗುತ್ತದೆ ಎಂದು ತಿಳಿಸಿದರು; ಊರುಕೆರೆ ಗ್ರಾಮ ಪಂಚಾಯಿತಿಯಲ್ಲಿ ಸುಮಾರು 600ಕ್ಕೂ ಹೆಚ್ಚು ಈ ರೀತಿ ರಾತ್ರೋ-ರಾತ್ರಿ ನಮೂನೆ 9 ಮತ್ತು11ನ್ನು ವಿತರಿಸಿರುತ್ತಾರೆ ಎಂದು ಮಾನ್ಯ ಸದಸ್ಯರಾದ ಶ್ರೀ ರವಿ ಹೆಬ್ಬಾಕ ರವರು ತಿಳಿಸಿದ ಮೇರೆಗೆ, ಮಾನ್ಯ ಅಧ್ಯಕ್ಷರು ತನಿಖಾ ಸಮಿತಿ ರಚನೆ ಮಾಡಿ ದೂರು ಬಂದಿರುವ ಎಲ್ಲ ಪ್ರಕರಣಗಳನ್ನು ಸದರಿ ಸಮಿತಿ ವತಿಯಿಂದ ತನಿಖೆಗೆ ಆದೇಶ ನೀಡಿದರು. ಅದರಂತೆ ಕ್ರಮವಹಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್. ಉಮೇಶ್ ರವರು, ಟೌನ್ ಪ್ಲಾನಿಂಗ್ ಅನುಮೋದನೆ ಪಡೆದ ನಂತರ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಕರ (ಟ್ಯಾಕ್ಸ್) ತುಂಬಿ ಗ್ರಾಮ ಪಂಚಾಯಿತಿಯ ಅನುಮತಿ ಪಡೆಯಬೇಕಾ

ಗುತ್ತದೆ; ಗ್ರಾಮ ಪಂಚಾಯಿತಿಯವರೇ ಅನುಮತಿ ನೀಡಬೇಕು; ಈ ಬಗ್ಗೆ ಪರಿಶೀಲಿಸಿ ವ್ಯವಸ್ಥೆ ಮಾಡಿಕೊಡಬೇಕು ಎಂದು ಕೋರಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಗ್ರಾಮಠಾಣಾ ಜಾಗಕ್ಕೆ ಮಾತ್ರ ಗ್ರಾಮ ಪಂಚಾಯಿತಿಗೆ ಹಕ್ಕಿದೆ; ಈ-ಸ್ವತ್ತು ನಲ್ಲಿ ತಾಲ್ಲೂಕಿನ ಸರ್ಕಾರಿ ಸರ್ವೇಯರ್ ನಕ್ಷೆ ನಿಗಧಿ ಮಾಡಿದ್ದಕ್ಕೆ ಮಾತ್ರ ನೊಂದಣಿಗಾಗಿ ನಮೂನೆ 9-11ನ್ನು ನಿಡಲು ಗ್ರಾಮ ಪಂಚಾಯಿತಿಗೆ ಅಧಿಕಾರ ನೀಡಲಾಗಿದೆ; ಖಾತೆ ನೀಡಲು ಯಾವುದೇ ಕಾರಣಕ್ಕೂ ಗ್ರಾಮ ಪಂಚಾಯಿತಿಗೆ ಅಧಿಕಾರವಿಲ್ಲ; ರಾತ್ರೋ-ರಾತ್ರಿ ಸಾವಿರಾರು ಸಂಖ್ಯೆಯಲ್ಲಿ ಫಾರಂ 9 ಮತ್ತು 11 ನ್ನು ಫೀಡ್ ಮಾಡುವುದಾದರೆ ಕಂದಾಯ ಇಲಾಖೆಯವರು ಇದರಲ್ಲಿ ಷಾಮೀಲಾಗಿದ್ದಾರೆಯೇ? ಎಂದು ಪ್ರಶ್ನಿಸಿದರು; ಹಕ್ಕು ಬದಲಾವಣೆಗಾಗಿ ಸಾಕಷ್ಟು ಶೋಷಣೆಯಾಗುತ್ತಿದೆ; ಇದನ್ನು ತಪ್ಪಿಸಲು ತನಿಖೆಯಾಗಲೇಬೇಕು ಎಂದು ಒತ್ತಾಯಿ ಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಫಾರಂ 9 ಮತ್ತು 11ರ ಸಂಬಂಧ ಅವ್ಯವಹಾರ ತಡೆಯಲು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ರಿಜಿಸ್ಟ್ರೇಷನ್ ನ್ನು ತಡೆಹಿಡಿದಿದ್ದರೂ ಈ ರೀತಿ ಮುಂದುವರಿದರೆ ಮುಂದೆ ಸಾಕಷ್ಟು ತೊಂದರೆಯಾಗುತ್ತದೆ; ಫಾರಂ 9 ಮತ್ತು 11ಕ್ಕೂ ನಮಗೂ ಸಂಬಂಧವಿಲ್ಲ ಎಂದು ತಹಶೀಲ್ದಾರ್ ರವರು ಹೇಳುತ್ತಾರೆ, ಆದುದರಿಂದ ಕಂದಾಯ ಇಲಾಖೆಯವರನ್ನು ಈ ಸಭೆಗೆ ಕರೆಸಬೇಕು; ಗ್ರಾಮಠಾಣಾ ಹಸ್ತಾಂತರವಾಗದಿರುವ ಕಡೆ ಪಂಚಾಯಿತಿವಾರು ಭೂಮಿ ಗುರುತಿಸಿ ತಹಶೀಲ್ದಾರ್ ರವರಿಂದ ನಕ್ಷೆ ಮಾಡಿಸಿಟ್ಟುಕೊಳ್ಳಬೇಕು; ಆಗ ಆನ್ ಲೈನ್ ಮೂಲಕ ಫಾರಂ 9 ಮತ್ತು 11ನ್ನು ಪಡೆಯಬಹುದು; ಲೇ-ಔಟ್ ಗಳನ್ನು ಅನುಮೋದಿಸಿ 9-11ನ್ನು ನಿಯಮಾನುಸಾರ ಅನುಮತಿ ನೀಡಲು ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ಬೇಕು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ರವಿಶಂಕರ್(ಹೆಬ್ಬಾಕ) ರವರು, ಕೃಷಿಯೇತರ ಸ್ವತ್ತುಗಳಲ್ಲಿ ಪ್ಲಾನನ್ನು ಗ್ರಾಮ ಪಂಚಾಯಿತಿಗೆ ಕಳುಹಿಸುತ್ತಾರೆ; ಅದಕ್ಕೆ ಕರ ನಿರ್ಧರಿಸಿ ನೋಟೀಸ್ ಬೋರ್ಡ್ ನಲ್ಲಿ ಪ್ರಕಟಿಸುವುದಷ್ಟೇ ಗ್ರಾಮ ಪಂಚಾಯಿತಿ ಕೆಲಸ; ಆದರೆ ಟೂಡಾ ಮತ್ತು ಟೌನ್ ಪ್ಲಾನಿಂಗ್ ನಲ್ಲಿ ಹಿಂದೆ ಇದ್ದ ಅಧ್ಯಕ್ಷರು(ಗ್ರಾ.ಪಂ)ಗಳ ಸಹಿ ಪಡೆದು ಅವ್ಯವಹಾರ ಮಾಡುತ್ತಿದ್ದಾರೆ; ಈ ದಂಧೆಯಿಂದಾಗಿ ಈಗ ಪಂಚಾಯಿತಿಗಳಲ್ಲಿ ಕುಡಿಯುವ ನೀರು, ರೇಷನ್ ಕಾರ್ಡ್ ಬಗ್ಗೆ ಯಾರೂ ಗಮನಹರಿಸುತ್ತಿಲ್ಲ, ಆದರೆ ಅಕ್ರಮ ಲೇ-ಔಟ್ ಗಳಿಗೆ ಅನುಮತಿ ನೀಡಲು ಎಲ್ಲರೂ ಶಾಮೀಲಾಗುತ್ತಾರೆ, ಈ ಬಗ್ಗೆ ತನಿಖೆಯಾಗಲೇಬೇಕು ಎಂದು ಒತ್ತಾಯಿಸಿದರು.

ಮಾನ್ಯ ಅಧ್ಯಕ್ಷರು, ಊರುಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಜೈಲಿಗೆ ಹೋಗಿ ಬಂದಿದ್ದಾರೆ; ಅದೇ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಂದ ಪ್ರಕರಣ ದಾಖಲಾಗಿದೆ; ಈ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉಪ ಕಾರ್ಯದರ್ಶಿ(ಅಭಿವೃದ್ಧಿ) ಮತ್ತು ಕಾರ್ಯನಿರ್ವಾಹಕ ಅಧಿಕಾರಿಯವರು ಗಳೊಂದಿಗೆ ಸಮಾಲೋಚಿಸಿದ್ದೇನೆ; ಮೊಬೈಲ್ ನಲ್ಲಿ ನಡೆಸಿರುವ ಸಂಭಾಷಣೆ ಕೂಡ ಕೇಳಿದ್ದೇನೆ; ಸಂಭಾಷಣೆಯಲ್ಲಿ ಅಂತಹ ಯಾವುದೇ ಮಹತ್ವದ ಚರ್ಚೆಯಾಗಿಲ್ಲ; ಆದರೂ ಗ್ರಾಮ ಪಂಚಾಯಿತಿ ಅಧ್ಯಕ್ಷರು ರಾತ್ರಿ 11 ಗಂಟೆ ಸಮಯದಲ್ಲಿ ಮಾತನಾಡುವ ಅವಶ್ಯಕತೆ ಇರಲಿಲ್ಲ ಎಂದು ತಿಳಿಸಿ, ಈ ಕುರಿತು ಈಗಾಗಲೇ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಕ್ರಮವಹಿಸಿದ್ದು, ಹೆಚ್ಚಿನ ತನಿಖೆಗಾಗಿ ಒಂದು ಸಮಿತಿ ರಚಿಸಿ ತನಿಖೆ ನಡೆಸಿ ವರದಿ ಬಂದ ನಂತರ ಸದರಿ ವರದಿಯನ್ನಾಧರಿಸಿ ನಿಯಮಾನುಸಾರ ಅಗತ್ಯ ಕ್ರಮವಹಿಸಲಾಗುವುದು ಎಂದು ಸಭೆಗೆ ಭರವಸೆಯಿತ್ತರು.

ಮಾನ್ಯ ಸದಸ್ಯರಾದ ಶ್ರೀ ಉಗ್ರಯ್ಯನವರು, ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದಲ್ಲಿ180 ಫಲಾನುಭವಿಗಳಿಗೆ ಸಾಲ ನೀಡಲು ಗುರಿ ನಿಗಧಿಯಾಗಿದೆ; ಮಾರ್ಗಸೂಚಿಯಲ್ಲಿ ಸ್ಥಳೀಯ ಶಾಸಕರ ವಿವೇಚನೆಗೆ ಬಿಟ್ಟಿದ್ದು ಎಂದು ನಮೂದಾಗಿರುತ್ತದೆ; ಪತ್ರಿಕಾ ಪ್ರಕಟಣೆಯ ಮೇರೆಗೆ ತುರುವೇಕೆರೆ ತಾಲ್ಲೂಕಿನಲ್ಲಿ 1200 ಅರ್ಜಿಗಳು ಬಂದಿರುತ್ತವೆ; ಗುರಿ ಮೀರಿ ಅರ್ಜಿಗಳನ್ನು ಅಹ್ವಾನಿಸಿದರೆ, ನಿಗಮಕ್ಕೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅರ್ಜಿದಾರರು ಅಗತ್ಯ ದಾಖಲೆಗಳನ್ನು ಪಡೆಯಲು ಸುಮಾರು ರೂ. 1,500/-ಗಳನ್ನು ಖರ್ಚು ಮಾಡಬೇಕಾಗುತ್ತದೆ, ಇದರಿಂದಾಗಿ ಬಡ ಫಲಾನುಲಭವಿಗಳಿಗೆ ಅನಾವಶ್ಯಕ ಖರ್ಚಾಗುತ್ತದೆ; ಆದುದರಿಂದ ನಿಯಮಗಳ ಪ್ರಕಾರ ಗುರಿಗೆ ತಕ್ಕಂತೆ ಅರ್ಜಿ ಪಡೆಯಲು ಸಂಬಂಧಪಟ್ಟವರಿಗೆ ಸೂಕ್ತ ಸೂಚನೆ ನೀಡಬೇಕು ಎಂದು ತಿಳಿಸಿದರು. ನಂತರ ಎಲ್ಲೆಡೆ ದಲ್ಲಾಳಿಗಳ ಹಾವಳಿ ಹೆಚ್ಚಾಗಿದೆ; ತುರುವೇಕೆರೆ ತಾಲ್ಲೂಕು ಮಂತ್ರಿಕೆನ ಹಳ್ಳಿ ಗೊಲ್ಲರಹಟ್ಟಿಯಲ್ಲಿ ಕೊಳವೆಬಾವಿ ಕೊರೆಸಲು ಮಧ್ಯವರ್ತಿಗಳಿಗೆ ಹಣ ನೀಡಬೇಕಿದೆ; ಆದುದರಿಂದ ಕಛೇರಿಗೆ ಇಂತಿಷ್ಟು ಎಂದು ಕಮಿಷನ್ ನಿಗಧಿ ಮಾಡಿಸಿಬಿಡಿ ಎಲ್ಲರೂ ಕೊಟ್ಟು ಶ್ರೀಮಂತರು ಅನುಕೂಲ ಪಡೆಯಲಿ ಎಂದರು. ನಂತರ ಗಂಗಾ ಕಲ್ಯಾಣ ಯೋಜನೆಯಡಿ ಕಳಪೆ ಸಾಮಗ್ರಿಗಳನ್ನು ನೀಡಲಾಗಿದೆ ಮತ್ತು ಈ ಎಲ್ಲ ಅವ್ಯವಹಾರಗಳಿಗೆ ಲೋಕಾಯುಕ್ತ ತನಿಖೆಯಾಗಲೇಬೇಕು ಎಂದು ಸಭೆಯಲ್ಲಿ ಒತ್ತಾಯಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಮಂಗಳಗೌರಮ್ಮನವರು, ತೋವಿನಕೆರೆ ಗ್ರಾಮದಲ್ಲಿಯೂ ಇದೇ ರೀತಿಯಾಗಿದೆ; ರಂಗಸ್ವಾಮಿ ಬಿನ್ ಸೋಬಾನ ರಂಗಯ್ಯ ಇವರ ಹೆಸರಿಗೆ ಮಂಜೂರಾಗಿರುವ ಕೊಳವೆಬಾವಿಯನ್ನು ಮತ್ತೊಬ್ಬ ರಂಗಸ್ವಾಮಿಯ ಹೆಸರಿನಲ್ಲಿ ಕೊರೆದಿರುತ್ತಾರೆ ಎಂದು ತಿಳಿಸಿ, ತನಿಖೆಗೆ ಆಗ್ರಹಿಸಿದರು.

ಮಾನ್ಯ ಅಧ್ಯಕ್ಷರು, ಈ ಕುರಿತು ಪರಿಶೀಲಿಸಿ ತುರುವೇಕೆರೆ ತಾಲ್ಲೂಕು ಡೆವಲಪ್ ಮೆಂಟ್ ಆಫೀಸರ್ ರವರಿಂದ ತನಿಖೆ ಮಾಡಿಸಿ ಈ ಸಂಜೆಯೊಳಗೆ ವರದಿ ನೀಡುವಂತೆ ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಅರುಣ್ ಕುಮಾರ್ ರವರು, ಎಲ್ಲಾ ನಿಗಮಗಳಿಂದ (ಎಸ್.ಸಿ/ಎಸ್.ಟಿ/ಬಿ.ಸಿ.ಎಂ. & ಮೈನಾರಿಟಿ) ಕ್ರಿಯಾ ಯೋಜನೆಯ ಬಗ್ಗೆ ಈ ವರೆಗೆ ಯಾವುದೇ ಮಾಹಿತಿ ನೀಡುತ್ತಿಲ್ಲ; ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಸಭೆಯಲ್ಲಿ ನಿರ್ಧಿಷ್ಟ ಆದೇಶ ನೀಡಬೇಕು ಎಂದರು.

ಮಾನ್ಯ ಅಧ್ಯಕ್ಷರು, ಎಲ್ಲ ನಿಗಮದವರು ಕ್ರಿಯಾ ಯೋಜನೆಯ ಬ್ರೋಚರ್ ನ ಪ್ರತಿಯನ್ನು ಎಲ್ಲ ಮಾನ್ಯ ಸದಸ್ಯರುಗಳಿಗೆ ತಲುಪಿಸಬೇಕು; ಬ್ರೋಕರ್ಸ್ ಸಂಪರ್ಕವಿರುವುದು ಕಂಡು ಬಂದರೆ ತಕ್ಕ ಶಾಸ್ತಿಯಾಗುತ್ತದೆ; ನೇರವಾಗಿ ಫಲಾನುಭವಿಗಳನ್ನು ಸಂಪರ್ಕಿಸಿ ಅವರಿಗೆ ಅನುಕೂಲ ಮಾಡಿಕೊಡದೆ ಮಧ್ಯವರ್ತಿಗಳನ್ನು ಇಟ್ಟುಕೊಂಡು ಕೆಲಸ ಮಾಡಿದರೆ ತಕ್ಕ ಶಾಸ್ತಿಯಾಗುತ್ತದೆ ಎಂದು ನಿಗಮಗಳ ಜಿಲ್ಲಾ ವ್ಯವಸ್ಥಾಪಕರುಗಳನ್ನು ಎಚ್ಚರಿಸಿದರು.

ಮಾನ್ಯ ಸದಸ್ಯರಾದ ಶ್ರೀ ಪಂಚಾಕ್ಷರಿಯವರು, ಜಿಲ್ಲಾ ಪಂಚಾಯಿತಿ ಸದನಕ್ಕೆ (Board) ಪರಮಾಧಿಕಾರ ವಿರುವುದರಿಂದ, ನಿಗಮಗಳಲ್ಲಿನ ಬ್ರೋಕರ್ಗಳ ವ್ಯವಹಾರವನ್ನು ತಪ್ಪಿಸಲು ಕ್ರಮವನ್ನು ಈ ಸಭೆಯಲ್ಲಿಯೇ ಪ್ರಕಟಿಸಬೇಕು ಎಂದು ಒತ್ತಾಯಿಸಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ನಿಖರ ದೂರು ಬಂದಲ್ಲಿ ಖಂಡಿತಾ ಕ್ರಮವಹಿಸುವುದಾಗಿ ಭರವಸೆಯಿತ್ತರು.

(ಕ್ರಮ : ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮ , ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಜಿಲ್ಲಾ ಪರಿಶಿಷ್ಠ ವರ್ಗಗಳ ಕಲ್ಯಾಣಾಧಿಕಾರಿಗಳು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ತುಮಕೂರು)

ಮಾನ್ಯ ಶಾಸಕರು, ಪಾವಗಡ ತಾಲ್ಲೂಕಿನಲ್ಲಿ ಎಸ್.ಸಿ.,/ಎಸ್.ಟಿ ಫಲಾನುಭವಿಗಳೂ ಸೇರಿ ಒಟ್ಟು 12,000 ಅರ್ಜಿಗಳು ಬಂದಿವೆ; ಈಗ ಒಮ್ಮೆ ಅರ್ಜಿ ಸಲ್ಲಿಸಿ, ಸಾಲ ಸಿಗದಿದ್ದರೂ ಮುಂದಿನ ಐದು ವರ್ಷಗಳವರೆಗೆ ಮತ್ತೆ-ಮತ್ತೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ, ಅದೇ ಅರ್ಜಿ ಗಣನೆಗೆ ಬರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಅಧ್ಯಕ್ಷರು, ಸ್ಥಳೀಯ ಶಾಸಕರು ಮತ್ತು ನಿಗಮದ ವ್ಯವಸ್ಥಾಪಕರೊಂದಿಗೆ ಮಾತನಾಡಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆಸಿ ನಂತರ ಮುಂದಿನ ಕ್ರಮವಹಿಸಲಾಗುವುದು ಎಂದು ಸಭೆಗೆ ಭರವಸೆಯಿತ್ತರು.

ಮಾನ್ಯ ಸದಸ್ಯರಾದ ಶ್ರೀಮತಿ ಸಿ.ಆರ್.ಮಂಜುಳ ರವರು, ಗಂಗಾ ಕಲ್ಯಾಣ ಯೋಜನೆಯಡಿ ಸಾಲಕ್ಕೆ ಅರ್ಜಿ ಸಲ್ಲಿಸಲು ಅಗತ್ಯ ದಾಖಲಾತಿಗಳನ್ನು ಪಡೆಯಲು ಸುಮಾರು ರೂ. 1,000/-ದಿಂದ ರೂ.2,000ದ ವರೆಗೆ ಹಣ ಖರ್ಚಾಗುತ್ತದೆ; ಅಲ್ಲಿಯೂ ಸಹ ನಿಗಧಿತ ಗುರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬಂದಿವೆ; ಕಳೆದ ಸಾರಿ ಸಾಲ ಮನ್ನಾಆಗಿದೆ ಎಂದು ತಿಳಿದು ಸುಮಾರು 300-400 ಅರ್ಜಿಗಳನ್ನು ಕೊಟ್ಟಿದ್ದಾರೆ; ಹಾಗೆಯೇ, ಸ್ವ-ಸಹಾಯ ಸಂಘಗಳಿಗೂ ಸಹ ಕೆಲವು ಸಂಘಗಳಿಗೆ ಕೊಟ್ಟಿದ್ದಾರೆ ಕೆಲವು ಸಂಘಗಳಿಗೆ ಅರ್ಜಿಗಳನ್ನು ಕೊಟ್ಟಿಲ್ಲ ಎಂದು ಸಭೆಗೆ ತಿಳಿಸಿದರು.

ಪಾವಗಡ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು, ಒಂದು ಸಾರಿ ಸಾಲ-ಸವಲತ್ತು ನೀಡಿದ ಕುಟುಂಬಗಳಿಗೆ ಮುಂದಿನ ಐದು ವರ್ಷಗಳವರೆಗೆ ಮತ್ತೊಮ್ಮೆ ಸಾಲ ನೀಡಬಾರದು ಎಂದು ಸುತ್ತೋಲೆ ಇದೆ; ಆದುದರಿಂದ ಕಳೆದ ಸಾಲಿನ ಸಾಲ ಮನ್ನಾ ಪಟ್ಟಿ ತರಿಸಿಕೊಂಡು ಪ್ರಸಕ್ತ ಸಾಲಿನ ಪಟ್ಟಿಯೊಂದಿಗೆ ಪರಿಶೀಲಿಸಿ, ಮರು ಮಂಜೂರಾತಿ ಆಗಿರುವ ಪ್ರಕರಣಗಳನ್ನು ರದ್ದುಪಡಿಸಬಹುದೆಂದು ಸಲಹೆಯಿತ್ತರು.

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು ಮಾನ್ಯ ಅಧ್ಯಕ್ಷರನ್ನು ಕುರಿತು, ಹಿಂದಿನ ಅಧ್ಯಕ್ಷರುಗಳ ಕಾಲಾವಕಾಶ ಕಡಿಮೆ ಇತ್ತು, ಆದರೆ ನಿಮಗೆ ಒಳ್ಳೆಯ ಅವಕಾಶ ಸಿಕ್ಕಿದೆ, ಆದುದರಿಂದ ನೆನಪಿನಲ್ಲಿ ಉಳಿಯುವಂತಹ ಕೆಲಸ ಮಾಡಬೇಕು ಎಂದು ಹಾರೈಸಿದರು. ನಂತರ, ನಿಗಮಗಳಲ್ಲಿ ಅರ್ಜಿಗಳ ನಿಗಧಿಯ ಕುರಿತು ಪ್ರಕಟ ಮಾಡಿದರೆ ಯೋಜನೆಗೆ ತಕ್ಕಂತೆ ಅರ್ಜಿ ಸಲ್ಲಿಸಲು ಅನುಕೂಲವಾಗುತ್ತದೆ; ಅರ್ಜಿ ಪಡೆದು ಆಯ್ಕೆಯಾದ ನಂತರ ದಾಖಲೆಗಳನ್ನು ಒದಗಿಸುವಂತೆ ಫಲಾನುಭವಿಗಳಿಗೆ ತಿಳಿಸಿದರೆ ಖರ್ಚು ಕಡಿಮೆಯಾಗಿ ಹಣ ಉಳಿತಾಯವಾಗುತ್ತದೆ; ಕೊಳವೆಬಾವಿಗಳಿಗೆ ಮಳೆ ನೀರು ಮರುಪೂರಣ ಯೋಜನೆಗೆ ಒತ್ತು ನೀಡಬೇಕು; ನಿರಂತರ ಜ್ಯೋತಿಗೆ ಪವನ ಮತ್ತು ಸೌರ ವಿದ್ಯುತ್ ಯೋಜನೆ ಅನುಷ್ಠಾನಗೊಳಿಸಬೇಕು ಎಂದು ಸಭೆಗೆ ತಿಳಿಸಿದರು. ನಂತರ, ಮಧುಗಿರಿ ತಾಲ್ಲೂಕಿನಲ್ಲಿ ಸಾಕಷ್ಟು ಕಡೆ ಫ್ಲೋರೈಡ್ ಹಾವಳಿ ಇದೆ; ಇನ್ನೂ ಹೆಚ್ಚಿನ ಗ್ರಾಮಗಳಲ್ಲಿ ಡೀ-ಫ್ಲೋರೈಡೇಷನ್ ಪ್ಲಾಂಟ್ ಗಳನ್ನು ಅಳವಡಿಸಬೇಕು; ಗ್ರಾಮ ಪಂಚಾಯಿತಿಗಳಲ್ಲಿ ಬೀದಿ ದೀಪಗಳಿಗೆ ಸ್ವಯಂ ಚಾಲಿತ ಸ್ವಿಚ್ ಗಳನ್ನು ಅಳವಡಿಸಿದರೆ ವಿದ್ಯುತ್ ಪೋಲಾಗುವುದು ತಪ್ಪುತ್ತದೆ; ಇಂಜಿನಿಯರ್ ಗಳು ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದ್ದಾರೆ, ಆದರೂ ಫ್ಲೋರೈಡ್ ನಿಯಂತ್ರಣಕ್ಕೆ ಹೆಚ್ಚಿನ ಒತ್ತು ಕೊಡಬೇಕು; ಗ್ರಾಮ ಪಂಚಾಯಿತಿಗಳಲ್ಲಿ ಹಣಕಾಸಿನ ಮುಗ್ಗಟ್ಟು ಇರುವುದರಿಂದ ಟ್ಯಾಂಕರ್ ಗಳ ಮೂಲಕ ನೀರು ಸರಬರಾಜು ಮಾಡುವ ವ್ಯವಸ್ಥೆಗೆ ಒತ್ತು ನೀಡುವುದು ಬೇಡ; ಅದಕ್ಕೆ ಬದಲಾಗಿ ಕೊಳವೆಬಾವಿಗಳು ದೂರದಲ್ಲಿದ್ದರೂ ಸರಿಪಡಿಸಿ ಪೈಪ್-ಲೈನ್ ಮಾಡಿಸಿ ನೀರಿಗೆ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಕೃಷಿ ಮತ್ತು ತೋಟಗಾರಿಕೆ ಬೆಳೆ ಹಾನಿ ಸಂಬಂಧ ರೈತರಿಗೆ Input subsidy ವಿತರಿಸಿರುವ ಕುರಿತು ಕಂದಾಯ ಇಲಾಖೆಯ ಅಧಿಕಾರಿಗಳಿಂದ ಸಭೆಗೆ ಮಾಹಿತಿ ಒದಗಿಸಬೇಕು ಎಂದು ಕೋರಿದರು. ಅದರಂತೆ ಸಭೆಯಲ್ಲಿ ಹಾಜರಿದ್ದ ಕಂದಾಯ ಇಲಾಖೆಯ ಅಧಿಕಾರಿಗಳು, 2013-14ನೇ ಸಾಲಿಗೆ ಜಿಲ್ಲೆಗೆ ರೂ. 2521.21 ಲಕ್ಷ ಬೇಡಿಕೆ ಇದ್ದು, ಈ ವರೆಗೆ 1357.41ಲಕ್ಷಗಳನ್ನು RTGS ಮೂಲಕ ಹಂಚಿಕೆ ಮಾಡಲಾಗಿದ್ದು, 54% ಹಂಚಿಕೆಯಾಗಿರುತ್ತದೆ, ಹಾಗೂ ಇನ್ನೂ ರೂ. 1162.80 ಲಕ್ಷ ಬಾಕಿ ಇರುತ್ತದೆ; ಈ ಸಂಬಂಧ ಖಾತೆಯಲ್ಲಿ ಹಣ ಸಂಗ್ರಹವಾದಂತೆ RTGS ಮೂಲಕ ಹಂಚಿಕೆ ಮಾಡಲಾಗುವುದು ಎಂದು ಸಭೆಗೆ ವಿವರಿಸಿದರು. ಪ್ರತಿಯಾಗಿ ಮಾನ್ಯ ಸದಸ್ಯರು ಇದು ಸತ್ಯಕ್ಕೆ ದೂರವಾದ ವಿಷಯ ಎಂದು ಆಪಾದಿಸಿದರು.

ಮಾನ್ಯ ಅಧ್ಯಕ್ಷರು, 15 ದಿನಗಳಲ್ಲಿ ಆಯಾ ತಾಲ್ಲೂಕು ತಹಶೀಲ್ದಾರ್ ಗಳಿಗೆ ಜವಾಬ್ದಾರಿ ನೀಡಿ ಬಾಕಿ ಹಣ ಸಂಬಂಧಪಟ್ಟ ರೈತರ ಕೈ ಸೇರಲು ವ್ಯವಸ್ಥೆಗೊಳಿಸುವಂತೆ ತಿಳಿಸಿದರು.

(ಕ್ರಮ : ಅಪರ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು )

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, RTGS ಮೂಲಕ ಅಧಿಕಾರಿಗಳಿಗೆ ದುಡ್ಡು ಹೊಡೆಯಲು ಆಗುತ್ತಿಲ್ಲ; ಚೆಕ್ ಮೂಲಕ ಪರಿಹಾರಧನ ನೀಡುವುದಾದರೆ ರೈತರ ಮನೆ ಬಾಗಿಲಿಗೆ ಹೋಗಿ ಚೆಕ್ ನೀಡಿ ಅವರಿಂದ ರೂ.500/- ವಸೂಲಿ ಮಾಡಿಕೊಂಡು ಬರುತ್ತಿದ್ದರು ಎಂದು ದೂರಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಆಗಲೂ ಸಹ 20%ನಷ್ಟು ಹಣ ವಿತರಣೆಯಾಗುತ್ತಿರಲಿಲ್ಲ, ಆದುದರಿಂದಲೇ ಸರ್ಕಾರದಿಂದ RTGS ವ್ಯವಸ್ಥೆಯಾಗಿದೆ ಎಂದು ಸ್ಪಷ್ಟಪಡಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಕುಣಿಗಲ್ ತಾಲ್ಲೂಕಿನಲ್ಲಿ ಅತ್ಯಂತ ಕಡಿಮೆ ಬೇಡಿಕೆ ಇದೆ, ಆದುದರಿಂದ ಪರಿಹಾರಧನ ಬಟವಾಡೆ ಮಾಡುವಲ್ಲಿ ಭೌತಿಕ ಗುರಿ ಎಷ್ಟಿದೆ?, ಎಷ್ಟು ಮೊತ್ತ ವಿತರಿಸಲಾಗಿದೆ? ಎಂದು ಪ್ರಶ್ನಿಸಿದರು. ಪ್ರತಿಯಾಗಿ ತಹಶೀಲ್ದಾರ್ ರವರು, ಕುಣಿಗಲ್ ತಾಲ್ಲೂಕಿನದು ಕೇವಲ ತೋಟಗಾರಿಕೆ ಕಾಂಪೊನೆಂಟ್, ಕೃಷಿ ಕಾಂಪೊನೆಂಟ್ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ರೈತರಿಗೆ ಬೆಳೆನಷ್ಟ ಪರಿಹಾರ ನೀಡುವಲ್ಲಿ ಖಾತೆದಾರ ಮೃತಪಟ್ಟಿರುವ ಪ್ರಕರಣಗಳಲ್ಲಿ (25%) ಹಣ ಸರ್ಕಾರಕ್ಕೆ ವಾಪಸ್ ಹೋಗುತ್ತಿದೆ; ಈ ಕುರಿತು ಪರಿಶೀಲಿಸಿ ಮೃತ ಖಾತೆದಾರರ ಕುಟುಂಬ ಸದಸ್ಯರ ಹೆಸರಿಗೆ ಹಣ ನೀಡುವ ವ್ಯವಸ್ಥೆ ಮಾಡಬೇಕು ಎಂದರು. ಪ್ರತಿಯಾಗಿ ತಹಶೀಲ್ದಾರ್ ರವರು, ಖಾತೆದಾರ ಮೃತಪಟ್ಟ ಪ್ರಕರಣದಲ್ಲಿ ಅವರ ವಂಶವೃಕ್ಷ ಪಡೆದು ಪರಿಶೀಲಿಸಿ ಅವರ ಕುಟುಂಬ ಸದಸ್ಯರ ಹೆಸರಿಗೆ RTGS ಮೂಲಕ ಹಣ ನೀಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ನಂತರ ಮಾನ್ಯ ಸದಸ್ಯರು, 70,759 ರೈತರು 43,000 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಮಾಡಿ ರೂ.6.80 ಕೋಟಿ ಮೊತ್ತದ ಬೆಳೆ ನಷ್ಟವಾಗಿದೆ; ನಷ್ಟದ ಅಂದಾಜು ಮಾಡಿದ್ದು, ಕಳೆದ ಸಾಲಿನ ಬೆಳೆವಿಮೆ ಮೊತ್ತ ರೂ.113.65 ಕೋಟಿ ಬಾಕಿ ಇದೆ; ಮುಂಗಾರು ಪ್ರಾರಂಭದಲ್ಲಿ ಕಳೆದ ಸಾಲಿನ ಬೆಳೆವಿಮೆ ಬಿಡುಗಡೆಯಾಗ ಬೇಕಾಗಿತ್ತು, ಆದರೆ ಈ ವರೆಗೆ ಬಿಡುಗಡೆಯಾಗಿಲ್ಲ ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಉಪಾಧ್ಯಕ್ಷರು, ಬೆಳೆ ಅಂದಾಜು ಸಮಿತಿಯವರು ಸ್ಥಳಕ್ಕೆ ಭೇಟಿ ನೀಡದೆ ಹೋಟೆಲ್ ಗಳಲ್ಲಿ ಕುಳಿತು ಅಂದಾಜು ಮಾಡಿದ್ದಾರೆ; ಪಾವಗಡ ತಾಲ್ಲೂಕಿಗೆ ಸೈಕ್ಲೋನ್ ಸಮಯದಲ್ಲಿ ಭೇಟಿ ನೀಡಿ ಅಂದಾಜು ಲೆಕ್ಕಾಚಾರ ಮಾಡಿಕೊಂಡು ಬರೆದುಕೊಂಡು ಹೋಗಿ ಬಹಳಷ್ಟು ಅನ್ಯಾಯ ಮಾಡಿರುತ್ತಾರೆ, ಈ ಲೋಪದೋಷವನ್ನು ಸರಿಪಡಿಸಿ ಪುನ: ಹೊಸದಾಗಿ ವಿಮೆ ನಿಗಧಿಪಡಿಸಬೇಕು ಎಂದು ಸಭೆಯಲ್ಲಿ ಒತ್ತಾಯಿಸಿದರು.

ಪಾವಗಡ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು, Crop Compensation billing experts ಕಳೆದ ಸಾಲಿನಲ್ಲಿ ಅನ್ಯಾಯ ಮಾಡಿದ್ದಾರೆ; ಇಡೀ ಜಿಲ್ಲೆಯಲ್ಲಿ ಕೃಷಿ ನೇತೃತ್ವದ ತಂಡಗಳಿಂದ ತಪಾಸಣೆ ಮಾಡಿ ಜುಲೈ-ಆಗಸ್ಟ್ ಮಾಹೆಯಲ್ಲಿ ಅನೌನ್ಸ್ ಮಾಡಿದ್ದಾರೆ; ಮಾಹಿತಿ ಪ್ರಕಾರ ಮಾರ್ಚ್ ಅಂತ್ಯಕ್ಕೆ ಅನೌನ್ಸ್ ಮಾಡಬೇಕು; ಪ್ರಸ್ತುತ ಕೇವಲ 10 ಗ್ರಾಮ ಪಂಚಾಯಿತಿಗಳಿಗೆ ಮಾತ್ರ ಕೊಟ್ಟಿರುತ್ತಾರೆ; ಇದು ಅಧಿಕಾರಿಗಳ ನಿರ್ಲಕ್ಷ್ಯ ಎಂದು ಆಪಾದಿಸಿ, ಕಾಲ-ಕಾಲಕ್ಕೆ ಇಂತಿಷ್ಟೇ ಬೆಳೆ ಬೆಳೆಯಬೇಕೆಂದು ತೀರ್ಮಾನ ಮಾಡಬೇಕೆಂದು ಈ ಸಭೆಯಲ್ಲಿ ಆದೇಶ ಮಾಡಬೇಕು ಎಂದು ಒತ್ತಾಯಿಸಿದರು.

ಪಾವಗಡ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಬೆಳೆ ವಿಚಾರದಲ್ಲಿ ಇಳುವರಿಯನ್ನು ಮಳೆಯ ಆಧಾರದಲ್ಲಿ ಪರಿಗಣಿಸಬಾರದು, ಬಿತ್ತನೆ ಆಧರಿಸಿ ಪರಿಗಣಿಸಬೇಕು; ಕೆಲವೊಮ್ಮೆ ಅತಿವೃಷ್ಠಿಯಾದರೆ ಶೇಂಗಾ ಬೆಳೆ ಕೊಳೆತು ಹೋಗುತ್ತದೆ; ಅದನ್ನು ಗಮನಿಸಿ ಅಧಿಕಾರಿಗಳು ಬೆಳೆವಿಮೆ ನಿರ್ಧರಿಸಬೇಕು ಎಂದು ಸಲಹೆಯಿತ್ತರು.

ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು, RTGS ಮೂಲಕ ರೈತರ ಖಾತೆಗೆ ಹಣ ಜಮೆ ಮಾಡಿದರೂ ಸಹ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕೆಲವು ಗ್ರಾಮ ಲೆಕ್ಕಿಗರು ಸಂಬಂಧಪಟ್ಟ ರೈತರನ್ನು ತಮ್ಮ ಮನೆ ಬಾಗಿಲಿಗೆ ಕರೆಸಿಕೊಂಡು ಅವರಿಗೆ ಚೆಕ್ ನೀಡಿ ರೂ.1,000/-ಕ್ಕೆ ಒಂದು ನೂರು ರೂಪಾಯಿಗಳಂತೆ ಅವರಿಂದ ಹಣ ವಸೂಲು ಮಾಡುವ ದಂಧೆ ನಡೆಯುತ್ತಿದೆ; ಈ ಕುರಿತು ಪರಿಶೀಲಿಸಿ ರೈತರಿಗೆ ಅನ್ಯಾಯವಾಗದಂತೆ ಅಗತ್ಯ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ಜಂಟಿ ಕೃಷಿ ನಿರ್ದೇಶಕರು, ರಾಷ್ಟ್ರೀಯ ಬೆಳೆ ವಿಮೆ ಯೋಜನೆಯಡಿ ಕಂತು ನಿಗಧಿಯಂತೆ ಹಣವನ್ನು ಪಾವತಿಸುತ್ತಾರೆ; ಆದರೆ ಕಳೆದ ಐದು ವರ್ಷಗಳ ಸರಾಸರಿ ಇಳುವರಿ (7 ವರ್ಷದ ಸರಾಸರಿ ಇಳುವರಿ-2 ವಿಪತ್ತೊದಗಿದ ವರ್ಷಗಳನ್ನು(2011-12 ಮತ್ತು 2012-13)ಹೊರತುಪಡಿಸಿ) ಆಧಾರಿಸಿ threshold yield ನ್ನು ಆಧಾರವಾಗಿಟ್ಟುಕೊಂಡು ಅದಕ್ಕಿಂತ ಕಡಿಮೆ ಇಳುವರಿ ತೆಗೆದರೆ ಪರಿಹಾರ ನೀಡುತ್ತಾರೆ; ಈ ನಿಟ್ಟಿನಲ್ಲಿ ವಾಸ್ತವಿಕ ಇಳುವರಿಯು ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಗ್ರಾಮ ಪಂಚಾಯಿತಿ/ಹೋಬಳಿ ಮಟ್ಟದಲ್ಲಿ ಪಾಲ್ಗೊಂಡ ರೈತರೆಲ್ಲರೂ ಬೆಳೆನಷ್ಟ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಉಪಾಧ್ಯಕ್ಷರು, ಐದು ವರ್ಷಗಳ ಸರಾಸರಿಗೆ ಬದಲಾಗಿ ಆಯಾ ವರ್ಷದ ಬೆಳೆಯನ್ನು ಪರಿಗಣಿಸಿ ನಷ್ಟ ಪರಿಹಾರ ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿ ಜಿಲ್ಲಾ ಪಂಚಾಯಿತಿಯಿಂದ ಠರಾವು ಮಾಡಿ ಸರ್ಕಾರಕ್ಕೆ ಕಳುಹಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜಂಟಿ ಕೃಷಿ ನಿರ್ದೇಶಕರು, 2009-10ನೇ ಸಾಲಿನಲ್ಲಿ ರೂ.22.00 ಕೋಟಿ, 2010-11ನೇ ಸಾಲಿನಲ್ಲಿ ರೂ. 7.30 ಕೋಟಿ, 2011-12ನೇ ಸಾಲಿನಲ್ಲಿ ರೂ. 13.27 ಕೋಟಿ, 2012-13ನೇ ಸಾಲಿನಲ್ಲಿ ರೂ. 36.23 ಕೋಟಿ ಮತ್ತು 2013-14ನೇ ಸಾಲಿಗೆ ರೂ. 4.90 ಕೋಟಿ ಬಿಡುಗಡೆಯಾಗಿದೆ; 2013-14ನೇ ಸಾಲಿನಲ್ಲಿ

ಇಡೀ ಜಿಲ್ಲೆಯಲ್ಲಿ ರೂ.113.00 ಕೋಟಿ ಮೊತ್ತಕ್ಕೆ ಬೆಳೆ ವಿಮೆ ಮಾಡಿಸಿದ್ದು, ಒಟ್ಟು 20,788 ರೈತರು (ಚಿ.ನಾ.ಹಳ್ಳಿ – 116, ಗುಬ್ಬಿ -01 , ಕೊರಟಗೆರೆ – 30, ಕುಣಿಗಲ್ – 99, ಮಧುಗಿರಿ – 533, ಪಾವಗಡ – 15706, ತಿಪಟೂರು –18, ತುಮಕೂರು -228, ಶಿರಾ - 3378, ಮತ್ತು ತುರುವೇಕೆರೆ – 679 = 20,788) ರೂ. 6.81 ಕೋಟಿ ವಿಮಾ ಕಂತು ಪಾವತಿಸಿದ್ದು, ಈ ವರೆಗೆ ಕೇವಲ ರೂ. 4.90 ಕೋಟಿ ಪರಿಹಾರ ಧನ ಬಿಡುಗಡೆಯಾಗಿರುತ್ತದೆ ಎಂದು ಸಭೆಗೆ ವಿವರಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಪ್ರತಿ ಹೆಕ್ಟೇರ್ ಗೆ 150 ಕೆ.ಜಿ. ಬೀಜ ಹಾಕಿ 200 ಕೆ.ಜಿ.ಗಿಂತ ಕಡಿಮೆ ಫಸಲು ಬಂದರೆ ಮಾತ್ರ ಬೆಳೆ ನಷ್ಟ ಪರಿಹಾರ ನೀಡಲಾಗುವುದು ಎಂದು ಹೇಳುತ್ತೀರಿ; ಈ ಮಾಹಿತಿಗಳನ್ನು feed ಮಾಡುವವರು ಯಾರು? Assess ಮಾಡುವವರು ಯಾರು? ಅಧಿಕಾರಿಗಳ ಹಂತದಲ್ಲಿ ಏಕೆ ಕ್ರಮವಹಿಸಿಲ್ಲ ಎಂದು ಪ್ರಶ್ನಿಸಿದರು. ಪ್ರತಿಯಾಗಿ ಜಂಟಿ ಕೃಷಿ ನಿರ್ದೇಶಕರು ಕೃಷಿ, ತೋಟಗಾರಿಕೆ, ಜಲಾನಯನ ಮತ್ತು ಕಂದಾಯ ಇಲಾಖೆಗಳಿಂದ ಮಾಹಿತಿ ಪಡೆದು Statistical Department ನವರು ಅಪ್ ಲೋಡ್ ಮಾಡುತ್ತಾರೆ ಎಂದು ತಿಳಿಸಿದರು.

ಪಾವಗಡ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು, ಪಾವಗಡ ತಾಲ್ಲೂಕು ನಾಗಲಮಡಿಕೆ ಹೋಬಳಿಯಲ್ಲಿ ಕಳೆದ ವರ್ಷ ಬೆಳೆಯೇ ಆಗಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ವಾಹನ ಅಪಘಾತಗಳಾದಲ್ಲಿ damage ಪ್ರಮಾಣಕ್ಕನುಗುಣ ವಾಗಿ ವಿಮೆ ಹಣ ಮಂಜೂರು ಮಾಡುವ ನಿಟ್ಟಿನಲ್ಲಿ ಬರಗಾಲ ಹೆಚ್ಚಾದರೆ ರೈತರಿಗೆ ಹೆಚ್ಚಿನ ಪರಿಹಾರ ಹಣ ನೀಡಬೇಕಾಗುತ್ತದೆ; ಆದರೆ ಪರಿಹಾರ ಕಡಿಮೆಯಾಗುತ್ತಿದೆ, ಇದು ಅವೈಜ್ಞಾನಿಕ ವಿಧಾನ ಎಂದು ಸಭೆಗೆ ತಿಳಿಸಿದರು. ಸದಸ್ಯೆ ಶ್ರೀಮತಿ ಜಾನಮ್ಮನವರು, ಕೆಲವೆಡೆ ಬೆಳೆ ನಷ್ಟ ಪರಿಹಾರ ಘೋಷಣೆಯಾಗಿದ್ದರೂ ಪರಿಹಾರ ಹಣ ನೀಡಿರುವುದಿಲ್ಲ ಹಾಗೂ ಈ ಕುರಿತು ಅಧಿಕಾರಿಗಳು ಮಾಹಿತಿಯನ್ನೂ ನೀಡುತ್ತಿಲ್ಲ ಎಂದು ಆಪಾದಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಸರ್ಕಾರಿ ಮಾರ್ಗಸೂಚಿಯ ಪ್ರಕಾರ ಸರ್ಕಾರ ಕಾನೂನು ಮಾಡಬೇಕು; ಅದರ ಪ್ರಕಾರ ಕ್ರಮವಹಿಸಬೇಕು, ಆದುದರಿಂದ ಈ ಕುರಿತು ಠರಾವು ಮಾಡಿ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಸಲಹೆಯಿತ್ತರು.

ಮಾನ್ಯ ಅಧ್ಯಕ್ಷರು, ಮಾರ್ಗಸೂಚಿಯ ಇಕ್ಕಟ್ಟಿನಿಂದ ಹೆಚ್ಚು ಬೆಳೆ ನಷ್ಟವಾಗಿರುವ ರೈತರಿಗೆ ಪರಿಹಾರ ನಷ್ಟವಾಗಿದೆ, ಆದುದರಿಂದ ಬೆಳೆ ನಷ್ಟದ ಬಗ್ಗೆ ಠರಾವು ಮಾಡಿ ಮುಂದಿನ ಕ್ರಮವಹಿಸಲಾಗುವುದು ಎಂದು ತಿಳಿಸಿದರು. ಬೆಳೆ ನಷ್ಟ ಪರಿಹಾರ ನಿಗಧಿಗೆ ಒಂದು ಸಮಿತಿ ರಚಿಸಿ ಠರಾವು ಮಾಡಿ ಸರ್ಕಾರಕ್ಕೆ ಕಳುಹಿಸುವಂತೆ ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಕೋರಿದ್ದರ ಮೇರೆಗೆ ಪ್ರತಿಯಾಗಿ ಮಾನ್ಯ ಉಪಾಧ್ಯಕ್ಷರು, ಆಂಧ್ರ ರಾಜ್ಯದ ಮಾದರಿಯಲ್ಲಿ ಬೆಳೆ ವಿಮೆ ಯೋಜನೆಯನ್ನು ಅಳವಡಿಸಲು ಕೋರಿ ಸರ್ಕಾರಕ್ಕೆ ಠರಾವು ಕಳುಹಿಸಬೇಕು ಎಂದು ಕೋರಿದರು.

ಮಾನ್ಯ ಅಧ್ಯಕ್ಷರು, ಜಂಟಿ ನಿರ್ದೇಶಕರು ಟಿಪ್ಪಣಿ ಸಿದ್ಧಪಡಿಸಿ ಠರಾವು ಲಗತ್ತಿಸಿ ಸಲ್ಲಿಸಿದ ನಂತರ ಮುಂದಿನ ಕ್ರಮವಹಿಸುವುದಾಗಿ ತಿಳಿಸಿದರು, ಹಾಗೂ ಕೂಡಲೇ ಪರಿಹಾರ ಹಣ ಬಿಡುಗಡೆ ಮಾಡುವಂತೆ ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಿದರು. ಪಾವಗಡ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು, ಈ ಕುರಿತು ಈಗಾಗಲೇ ಇಲಾಖಾ

ಸಚಿವರಿಗೆ ಮನವಿ ಸಲ್ಲಿಸಲಾಗಿದ್ದು, ತತ್ಸಂಬಂಧ ಪರಿಶೀಲಿಸುವಂತೆ ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಸೂಚನೆ ಬಂದಿರಬಹುದು ಎಂದು ತಿಳಿಸಿ ಆ ಬಗ್ಗೆ ಪರಿಶೀಲಿಸಿ ಇಲಾಖಾಧಿಕಾರಿಗಳಿಗೆ ಮಾನ್ಯ ಜಿಲ್ಲಾಧಿಕಾರಿಯವರಿಂದ ಸೂಕ್ತ ಸೂಚನೆ ಕೊಡಿಸುವಂತೆ ಸಲಹೆಯಿತ್ತರು.

ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮ ಮಹಲಿಂಗಪ್ಪನವರು, ಬೆಳೆವಿಮೆ ಪಾವತಿಗೆ ಇರುವ ಕಾಲಾವಕಾಶದ ಕುರಿತು ಜಂಟಿ ನಿರ್ದೇಶಕರು ಮಾಹಿತಿ ನೀಡಬೇಕು ಎಂದು ತಿಳಿಸಿ, ಆಂಧ್ರ ರಾಜ್ಯದಲ್ಲಿ ಪ್ರತಿ ಎಕರೆಗೆ ರೂ.1,000/-ದಂತೆ ಹಾಗೂ ಐದು ಎಕರೆಗೆ ಮೇಲ್ಪಟ್ಟು ರೂ.10,000/-ದಂತೆ ಏಪ್ರಿಲ್ ಮಾಸಾಂತ್ಯದಲ್ಲಿ ಪರಿಹಾರಧನ ಬಿಡುಗಡೆಯಾಗಿದೆ; ನಮ್ಮಲ್ಲಿಯೂ ಅದೇ ರೀತಿ ಏಕೆ ಮಾಡಿಲ್ಲ? ಎಂದು ಪ್ರಶ್ನಿಸಿದರು. ಪ್ರತಿಯಾಗಿ ಜಂಟಿ ಕೃಷಿ ನಿರ್ದೇಶಕರು, ರೈತರು ಬಿತ್ತನೆ ಮಾಡಿರಲಿ-ಮಾಡಿಲ್ಲದಿರಲಿ ಬೆಳೆ ವಿಮೆಗೆ ಜುಲೈ ಮಾಸಾಂತ್ಯದವರೆಗೆ ಕಾಲಾವಕಾಶ ನಿಗಧಿಯಾಗಿದೆ; ಈ ಕುರಿತು ಸಾಕಷ್ಟು ಪ್ರಚಾರವನ್ನೂ ಮಾಡಲಾಗಿದೆ, ಕಳೆದ ವರ್ಷಕ್ಕಿಂತ ಈ ವರ್ಷ ಪ್ರತಿ ತಾಲ್ಲೂಕಿನಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಬೆಳೆವಿಮೆ ಮಾಡಿಸಿದ್ದಾರೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು, ಗ್ರಾಮ ಸಭೆಗಳಿಗೆ ಇಲಾಖಾ ಅಧಿಕಾರಿಗಳು ಹೋಗಿ ಪ್ರಚಾರ ಸಾಮಗ್ರಿಗಳನ್ನು ನೀಡಬೇಕು ಎಂದರು. ಸದಸ್ಯೆ ಶ್ರೀಮತಿ ಪ್ರೇಮ ಮಹಲಿಂಗಪ್ಪನವರು ಅನುವುಕಾರರ ಮೂಲಕ ರೈತರಲ್ಲಿ ತಿಳುವಳಿಕೆ ಮೂಡಿಸಬೇಕು ಎಂದರು. ಈ ಮೇರೆಗೆ ಜಂಟಿ ಕೃಷಿ ನಿರ್ದೇಶಕರು, ವ್ಯಾಪಕ ಪ್ರಚಾರದ ಮೂಲಕ ರೈತರಲ್ಲಿ ಅರಿವು ಮೂಡಿಸಲಾಗಿದೆ ಹಾಗೂ ಡಿ.ಸಿ.ಸಿ.ಬ್ಯಾಂಕ್ ಮುಖೇನ ಸಹ ಪ್ರಚಾರ ಮಾಡುತ್ತಿದ್ದಾರೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಪ್ರಚಾರದ ಕೊರತೆಯಿಂದಾಗಿ ಈಗ ಬಲಾಢ್ಯರಿಗೆ ಮಾತ್ರ ಸೌಲಭ್ಯ ದೊರಕುತ್ತಿದೆ; ಆದುದರಿಂದ ಪ್ರತಿ ಹೋಬಳಿಗೆ ಕನಿಷ್ಟ 150 ರೈತರು ಬೆಳೆವಿಮೆ ಮಾಡಿಸಿ, ಅವರುಗಳು ಕನಿಷ್ಟ ರೂ. 500/-ರಂತೆ ವಿಮಾ ಕಂತು ಪಾವತಿಸಲೇಬೇಕು ಎಂದು ಸಿಬ್ಬಂದಿಗೆ ಜವಾಬ್ದಾರಿ ನಿಗಧಿಪಡಿಸಿ ಪ್ರಚಾರಕ್ಕೆ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

(ಕ್ರಮ : ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತುಮಕೂರು)

ಮಾನ್ಯ ಸದಸ್ಯರಾದ ಶ್ರೀಮತಿ ಮಂಗಳಗೌರಮ್ಮನವರು, ವಸತಿ ಯೋಜನೆಯಡಿ ಹಿಂಡಿಸ್ಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶ್ರೀಮತಿ ಮಹಾಲಕ್ಷ್ಮಮ್ಮ ಎಂಬುವವರಿಗೆ ಕಳೆದ ಹತ್ತು ವರ್ಷಗಳ ಹಿಂದೆ ಮನೆ ಮಂಜೂರು ಮಾಡಿದ್ದು, ಕಳೆದ ವರ್ಷ ಆಕೆಗೆ ನೀಡಲಾಗಿದ್ದ ರೂ. 5,000/-ಗಳನ್ನು ವಾಪಸ್ ಕಟ್ಟುವಂತೆ ಹೇಳುತ್ತಿದ್ದಾರೆ, ವಸತಿ ರಹಿತ ಬಡ ಮಹಿಳೆ ಮನೆ ಕೇಳಲು ಹೋದರೆ ಅಲ್ಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಆಕೆಯ ಅರ್ಜಿಯನ್ನೇ ಸ್ವೀಕರಿಸಿರುವುದಿಲ್ಲ ಎಂದು ಆಪಾದಿಸಿದರು. ಮಾನ್ಯ ಅಧ್ಯಕ್ಷರು, ಅರ್ಜಿ ನೀಡಿದಲ್ಲಿ ಪರಿಶೀಲಿಸುವುದಾಗಿ ಭರವಸೆಯಿತ್ತರು.

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಚೇಳೂರು ಜಿ.ಪಂ.ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ 4 ಮೇಲುತೊಟ್ಟಿಗಳ ಪೈಕಿ ಕೇವಲ ಒಂದು ಕಾಮಗಾರಿ ಮಾತ್ರ ಪ್ರಾರಂಭವಾಗಿರುತ್ತದೆ; ಉಳಿದ ಕಾಮಗಾರಿಗಳನ್ನು ಕೂಡಲೇ ಪ್ರಾರಂಭ ಮಾಡದಿದ್ದಲ್ಲಿ ಸಂಬಂಧ ಗುತ್ತಿಗೆದಾರರುಗಳನ್ನು ಕಪ್ಪು ಪಟ್ಟಿಗೆ ಸೇರಿಸುವುದಾಗಿ AEE ರವರು ತಿಳಿಸಿದ್ದಾಗ್ಯೂ ಸಹ ಗುತ್ತಿಗೆದಾರರು ಮುಂದೆ ಬರುತ್ತಿಲ್ಲ; ಅಲ್ಲದೆ, ಈ ಬಾರಿ ಕೊಟ್ಟಿರುವ ಯಾವ ಮೇಲು ತೊಟ್ಟಿ ನಿರ್ಮಾಣ ಕೆಲಸವನ್ನೂ ಪ್ರಾರಂಭ ಮಾಡಿಲ್ಲ; ಆದುದರಿಂದ ಸಂಬಂಧಪಟ್ಟ

ಟೆಂಡರ್ ದಾರರನ್ನು ಈ ಕೂಡಲೇ ಕಪ್ಪು ಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಿದರು. AEEರವರು, ಸಂಬಂಧಪಟ್ಟ ಗುತ್ತಿಗೆದಾರರನ್ನು ಕರೆಸಿ, ಜೂನ್ ಎರಡನೆ ವಾರದಲ್ಲಿ ಅಗ್ರಿಮೆಂಟ್ ಮಾಡಲಾಗಿರುತ್ತದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು, ಅಂದಾಜು ಸಿದ್ಧಪಡಿಸಿ ಟೆಂಡರ್ ಕರೆದು, ಅನುಮೋದನೆ ಪಡೆಯಲು ತಡಮಾಡುತ್ತೀರಿ; ನಂತರ ಟೆಂಡರ್ ದಾರ ಕೆಲಸ ಪ್ರಾರಂಭಿಸಲು 6 ತಿಂಗಳು ತಡ ಮಾಡುತ್ತಾನೆ; ಆದುದರಿಂದ ಕೂಡಲೇ ಕಾರ್ಯೋನ್ಮುಖರಾಗಿ ಸಕಾಲಿಕವಾಗಿ ಟೆಂಡರ್ ಪ್ರಕ್ರಿಯೆ ಮುಗಿಸಲು ತುರ್ತು ಅಗತ್ಯ ಕ್ರಮವಹಿಸಬೇಕು; ಎಲ್ಲಾ AEEಗಳು ಜನಪರವಾಗಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ವಿಷಯ ಸೂಚಿ 01 :- ತಾಲ್ಲೂಕುವಾರು ಕುಡಿಯುವ ನೀರು ಸರಬರಾಜು ನಿರ್ವಹಣೆ ಕುರಿತು ಪರಿಶೀಲನೆ.

ಪಾವಗಡ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು, ಪಾವಗಡ ತಾಲ್ಲೂಕಿನಾದ್ಯಂತ 150 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗಿದ್ದು, ಈ ಪೈಕಿ 50% ಕೂಡ ಕೆಲಸ ನಿರ್ವಹಿಸುತ್ತಿಲ್ಲ; ಕಳೆದ ವರ್ಷ 75 ಆರೋ ಪ್ಲಾಂಟ್ ಗಳು ದುರಸ್ತಿಯಾಗಿದ್ದು ಈ ವರೆಗೆ ಸಂಪರ್ಕ ನೀಡಿರುವುದಿಲ್ಲ; ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ತಿಳಿಸಿದ್ದಾಗ್ಯೂ ಸಹ ಈ ವರೆಗೆ ಕೇವಲ 22 ಆರೋ ಪ್ಲಾಂಟ್ ಗಳಿಗೆ ಮಾತ್ರ ಸಂಪರ್ಕ ಕಲ್ಪಿಸಲಾಗಿರುತ್ತದೆ; ಇದರಿಂದಾಗಿ ಸರ್ಕಾರದ ಚಿಂತನೆ ಸಫಲವಾಗಿಲ್ಲ; ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಜನರಿಗೆ ತೊಂದರೆಯಾಗುತ್ತಿದೆ, ಆದುದರಿಂದ ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಚಿಂತನೆ ಮಾಡಿ ಮಾಹಿತಿ ಪಡೆದು ಸಂಬಂಧಪಟ್ಟವರಿಗೆ ಸೂಕ್ತ ಸೂಚನೆ ನೀಡಿ ಜನರಿಗೆ ಒಂದು ವಾರದೊಳಗೆ ಸಮರ್ಪಕ ಕುಡಿಯುವ ನೀರು ಒದಗಿಸಲು ವ್ಯವಸ್ಥೆ ಮಾಡಬೇಕು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಇದು ಇಡೀ ಜಿಲ್ಲೆಯ ಸಮಸ್ಯೆಯಾಗಿದೆ; ಕಟ್ಟಡ(ರೂಂ) ಕಟ್ಟಲು ಭೂ ಸೇನಾ ನಿಗಮದವರಿಗೆ ಅನುಮತಿ ನೀಡಿದವರು ಯಾರು? ಕೊಳವೆಬಾವಿ ಕೊರೆದವರು ಯಾರು? ಕೊಳವೆಬಾವಿಗೆ ಮೆಷಿನ್ ಕೂರಿಸಿದವರು ಯಾರು? ಆರೋ ಪ್ಲಾಂಟ್ ಗೆ ಗುತ್ತಿಗೆ ನೀಡಿದವರು ಯಾರು? ಇದರಲ್ಲಿ ಯಾರ Co-ordination ಇಲ್ಲದೆ ಜಿಲ್ಲಾ ಪಂಚಾಯಿತಿಗೆ ಮಾಹಿತಿ ಇಲ್ಲದೆ ಈ ರೀತಿ ಮಾಡಿದರೆ ಹೇಗೆ? ಎಂದು ಪ್ರಶ್ನಿಸಿ, ಉದ್ದೇಶ ಒಳ್ಳೆಯದಿದೆ ಈ ಬಗ್ಗೆ ತಕರಾರಿಲ್ಲ ಆದರೆ ಅಧಿಕಾರಿಗಳು ಸ್ಪಷ್ಟ ಮಾಹಿತಿ ನೀಡಬೇಕು ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಉಪ ಕಾರ್ಯದರ್ಶಿ(ಅಭಿವೃದ್ಧಿ)ಯವರು, ಇದು ಜಿಲ್ಲಾ ಪಂಚಾಯಿತಿಯಿಂದ ಪ್ರೋಸೆಸ್ ಆಗಿಲ್ಲವಾದ್ದರಿಂದ ಈ ಕುರಿತು ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು/ ಮಧುಗಿರಿ ಇವರುಗಳೇ ಮಾಹಿತಿ ಒದಗಿಸಬೇಕಾಗುತ್ತದೆ ಎಂದು ಉತ್ತರಿಸಿದರು.

ಪಾವಗಡ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು, ಈ ಬಗ್ಗೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಸಂಬಂಧಪಟ್ಟವರಿಗೆ ಸೂಕ್ತ ಸೂಚನೆ ನೀಡುವಂತೆ ಸಲಹೆಯಿತ್ತರು. ನಂತರ, ತಾಲ್ಲೂಕು ಪಂಚಾಯಿತಿಗಳಲ್ಲಿ ಸಿಬ್ಬಂದಿ ಕೊರತೆಯಿರುವುದಾಗಿ ಸಭೆಯ ಗಮನಕ್ಕೆ ತಂದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಜಿಲ್ಲೆಯ 5313 ಗ್ರಾಮಗಳಲ್ಲಿನ ಎಲ್ಲಾ 14100 ಕೊಳವೆಬಾವಿಗಳ ನೀರಿನ ಸ್ಯಾಂಪಲ್ ಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷಿಸಲಾಗುತ್ತಿದೆ; ಆ ಪ್ರಕಾರ ಪ್ರತಿ ವರ್ಷ ಡಿಸೆಂಬರ್ ಮಾಸಾಂತ್ಯದಲ್ಲಿ ನೀರಿನ ಸ್ಯಾಂಪಲ್ ಸಂಗ್ರಹ ಮಾಡಿ ನೀರು ಪರೀಕ್ಷೆ ಮಾಡುತ್ತಾರೆ; ಈ ಹಳ್ಳಿಗಳಲ್ಲಿ 31-03-2013ಕ್ಕೆ 13 ಡೀ-ಫ್ಲೋರೈಡೇಷನ್ ಘಟಕಗಳನ್ನು ಅಳವಡಿಸಲಾಗಿದೆ; ಫ್ಲೋರೈಡ್/ ಐಯೋಡಿನ್/ಆರ್ಸೆನಿಕ್ ಅಂಶ ಜಾಸ್ತಿ ಇರುವೆಡೆ ಮೊದಲು ಪಾವಗಡ ತಾಲ್ಲೂಕಿನಲ್ಲಿ 2003-04ನೇ ಸಾಲಿನಲ್ಲಿ

26 ಡೀ-ಫ್ಲೋರೈಡೇಷನ್ ಪ್ಲಾಂಟ್ ಗಳನ್ನು ಅಳವಡಿಸಲಾಯಿತು(Reverse biases); ರಾಜವಂತಿ ಗ್ರಾಮ ಪಂಚಾಯಿತಿಯೊಂದನ್ನು ಹೊರತುಪಡಿಸಿ ಉಳಿದೆಡೆಗಳಲ್ಲಿ ಸದರಿ ಘಟಕಗಳು ಈಗಲೂ ಸಮರ್ಪಕವಾಗಿ ಕೆಲಸ ಮಾಡುತ್ತಿವೆ; ಮೊದಲು ಹಾಕಲಾದ ಪ್ಲಾಂಟ್ ಗಳು 6-8 ತಿಂಗಳುಗಳಲ್ಲಿ ಡೀ-ಫಂಕ್ ಆದ ನಂತರ ಸರ್ಕಾರ ಈ ರೀತಿ ಮಾಡಿದೆ; ಇವುಗಳ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿಗಳೇ ಮಾಡಬೇಕು; ಆದರೆ ಗ್ರಾಮ ಪಂಚಾಯಿತಿಗಳಲ್ಲಿ ಹಣದ ಕೊರತೆ, ಚೈತನ್ಯವಿಲ್ಲ, ತಾಂತ್ರಿಕ ದೋಷ ಇವುಗಳಿಂದಾಗಿ ಪಾವಗಡ ತಾಲ್ಲೂಕಿನಲ್ಲಿ ಕೆಲಸ ಮಾಡಿಲ್ಲ, ಆದುದರಿಂದ ಘಟಕಗಳಲ್ಲಿ ಏನೇ ತೊಂದರೆಯಾದರೂ ಡೀ-ಫ್ಲೋರೈಡೇಷನ್ ಪ್ಲಾಂಟ್ಸ್, ವಾಟರ್ ಪ್ಯೂರಿಫಿಕೇಷನ್ ಘಟಕಗಳನ್ನು ಸರಬರಾಜು ಮಾಡುವವರೇ 10 ವರ್ಷಗಳ ವರೆಗೆ ನಿರ್ವಹಣೆ ಮಾಡಬೇಕು ಎಂದು ಸರ್ಕಾರ ಆದೇಶ ನೀಡಿದೆ; ಹಿಂದಿನ 25 ಪ್ಲಾಂಟ್ ಗಳ (ರಾಜವಂತಿ ಬಿಟ್ಟು) ಜೊತೆಗೆ ಕಳೆದ ವರ್ಷ ರಾಜ್ಯ ಸರ್ಕಾರ 112 ಪ್ಲಾಂಟ್ ಗಳನ್ನು ನೀಡಿತ್ತು; 1.5ಗ್ರಾಂ ಗಿಂತ ಹೆಚ್ಚಿನ ಪ್ರಮಾಣದಲ್ಲಿ ಫ್ಲೋರೈಡ್ ಅಂಶ ಇರುವ ಗ್ರಾಮಗಳ ಕುರಿತು ಸರ್ಕಾರಕ್ಕೆ ಮಾಹಿತಿ ನೀಡುತ್ತಿರುವ ಮೇರೆಗೆ ಈಗ 149 ಪ್ಲಾಂಟ್ ಗಳು ಬಂದಿವೆ, ಅವುಗಳನ್ನು ಶೀಘ್ರವಾಗಿ ಅಳವಡಿಸಿ ತುರ್ತಾಗಿ ಶುದ್ಧ ಕುಡಿಯುವ ನೀರು ಒದಗಿಸುವ ಸದುದ್ದೇಶದಿಂದ ಕರ್ನಾಟಕ ಭೂ ಸೇನಾ ನಿಗಮದವರಿಗೆ ಕಟ್ಟಡ ಕಾಮಗಾರಿ(ರೂಂ) ಗುತ್ತಿಗೆ ವಹಿಸಲಾಗಿದೆ; ರಾಜ್ಯ ಸರ್ಕಾರದ ಹಂತದಲ್ಲಿ ಟೆಂಡರ್ ಮಾಡಿ ಈ ಜಿಲ್ಲೆಗೆ ಇಬ್ಬರು ಗುತ್ತಿಗೆದಾರರಿಗೆ ಆದೇಶ ನೀಡಲಾಗಿದೆ; ಪ್ಲಾಂಟ್ ಗಳನ್ನು ಅಳವಡಿಸುವಾಗ KRIDL(ಭೂ ಸೇನಾ ನಿಗಮ)ನವರು ರೂಂ ಕಟ್ಟುತ್ತಾರೆ, ಪಂಚಾಯತ್ ರಾಜ್ ಇಂಜಿನಿಯರಿಂಗ ವಿಭಾಗದವರು ಬೆಸ್ಕಾಂನವರ ಸಹಕಾರದೊಂದಿಗೆ ಘಟಕಗಳನ್ನು ಅಳವಡಿಸುತ್ತಾರೆ; ಈ ಸಂಬಂಧ ಕಾರ್ಯ ನಿರ್ವಾಹಕ ಅಧಿಕಾರಿ/ ಬೆಸ್ಕಾಂನ ಕಾರ್ಯಪಾಲಕ ಇಂಜಿನಿಯರ್ ಗಳೊಡಗೂಡಿ ಎಲ್ಲ 149 ಪ್ಲಾಂಟ್ ಗಳನ್ನು ಪರಿಶೀಲಿಸಲಾಗಿದೆ; 10 ಕಡೆ ಜಾಗದ ಸಮಸ್ಯೆ ಇದ್ದು, ಉಳಿದ 139 ಕಡೆಗಳಲ್ಲಿ ಪ್ಲಾಂಟ್ ಗಳನ್ನು ಅಳವಡಿಸಲಾಗಿದೆ; ಹಾಗೂ ಜಾಗದ ಸಮಸ್ಯೆಯ ಕುರಿತು ಮಾನ್ಯ ಸಚಿವರ ಗಮನಕ್ಕೆ ತರಲಾಗಿದೆ; ಹೊಸ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಇಡೀ ಜಿಲ್ಲೆಗೆ 280 ಪ್ಲಾಂಟ್ ಗಳನ್ನು ಅಳವಡಿಸಲು ಅನುಮೋದನೆಯಾಗಿದ್ದು, ಈ ಪೈಕಿ ಈ ವರೆಗೆ 239 ಪ್ಲಾಂಟ್ ಗಳನ್ನು ಅಳವಡಿಸಿದ್ದು, ಇನ್ನೂ 44 ಪ್ಲಾಂಟ್ ಗಳನ್ನು ಅಳವಡಿಸಬೇಕಾಗಿರುತ್ತದೆ ಎಂದು ಸಭೆಗೆ ವಿವರಿಸಿದರು. ಪ್ರತಿಯಾಗಿ ಪಾವಗಡ ತಾಲ್ಲೂಕಿನ ಮಾನ್ಯ ಶಾಸಕರು, ಅಧಿಕಾರಿಗಳು ತಪ್ಪು ಮಾಹಿತಿ ನೀಡಿದ್ದಾರೆ, ಕೇವಲ 22-23 ಪ್ಲಾಂಟ್ ಗಳನ್ನು ಮಾತ್ರ ಅಳವಡಿಸಲಾಗಿರುತ್ತದೆ ಈ ಬಗ್ಗೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರೇ ಖುದ್ದು ಪರಿಶೀಲಿಸಿ ಸಂಬಂಧಪಟ್ಟವರ ವಿರುದ್ಧ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು. ಉತ್ತರವಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ತಪ್ಪು ಮಾಹಿತಿ ನೀಡಿದವರಿಗೆ ಎಚ್ಚರಿಕೆ ನೀಡಲಾಗುತ್ತದೆ; ಪ್ಲಾಂಟ್ ಗಳನ್ನು ಅಳವಡಿಸುವ ಜವಾಬ್ದಾರಿಯನ್ನು ಸರ್ಕಾರ ನಿಗಧಿಪಡಿಸಿರುವುದರಿಂದ ಅದನ್ನು ಅಧಿಕಾರಿಗಳು ಮಾಡಲೇಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಮಧುಗಿರಿ ಇವರು, ಅವು 2012-13ನೇ ಸಾಲಿಗೆ ಸಂಬಂಧಿಸಿದ್ದು, ಅವುಗಳನ್ನು KRIDLಗೆ ನೀಡಿದ್ದು 50% ಅಳವಡಿಸಲಾಗಿದೆ, ಬೆಸ್ಕಾಂನವರು ಸಂಪರ್ಕ ಕೊಡಬೇಕು ಆದರೆ ವೋಲ್ಟೇಜ್ ಸಮಸ್ಯೆ ಇರುವುದರಿಂದ ವಿಳಂಬವಾಗಿದ್ದು ಈ ಕುರಿತು ಸಂಬಂಧಪಟ್ಟವರ ಗಮನಕ್ಕೆ ತರಲಾಗಿದೆ ಎಂದು ಸಭೆಗೆ ಸ್ಪಷ್ಟಪಡಿಸಿದರು. ಜಿ.ಪಂ.ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸ್ಥಳ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಅಗತ್ಯ ಕ್ರಮವಹಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಅದರಂತೆ ಮಾನ್ಯ ಅಧ್ಯಕ್ಷರು, ದಿನಾಂಕ 21-08-2014ರಂದು ಪಾವಗಡ ತಾಲ್ಲೂಕಿಗೆ ಭೇಟಿ ನೀಡಿ ಪರಿಶೀಲಿಸಲು ದಿನಾಂಕ ನಿಗಧಿಪಡಿಸಿದರು ಹಾಗೂ ಸದರಿ ದಿನಾಂಕದಂದು ಕಾರ್ಯಪಾಲಕ

ಇಂಜಿನಿಯರ್ ಬೆಸ್ಕಾಂ ಮಧುಗಿರಿ, ಉಪ ನಿರ್ದೇಶಕರು KRIDL, ಕಾರ್ಯನಿರ್ವಾಹಕ ಅಧಿಕಾರಿ ಪಾವಗಡ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂ.ರಾ.ಇಂ.ಉಪ ವಿಭಾಗ ಪಾವಗಡ ಇವರುಗಳು ಸದರಿ ದಿನಾಂಕದಂದು ಪಾವಗಡ ಕೇಂದ್ರಸ್ಥಾನದಲ್ಲಿ ಹಾಜರಿರುವಂತೆ ತಿಳಿಸಿದರು.

(ಕ್ರಮ : ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಪಾವಗಡ)

ಮಾನ್ಯ ಸದಸ್ಯರಾದ ಡಾ: ರವಿಯವರು, ಅಧಿಕಾರಿಗಳು ಎಲ್ಲೋ ಕುಳಿತು ಕೆಲಸ ಮಾಡುತ್ತಾರೆ; ಆರ್.ಆರ್.ನಂಬರುಗಳನ್ನು ನೀಡುತ್ತಾರೆ ಆದರೆ, ಉದ್ದೇಶ ಈಡೇರುತ್ತಿದೆಯೇ? ಎಂದು ನೋಡುವುದಿಲ್ಲ; ಪ್ರಸ್ತುತ ಹಣಕ್ಕೆ ಕೊರತೆ ಇಲ್ಲ ಸರ್ಕಾರ ರೂ. 21.00 ಕೋಟಿ ಹಣ ನೀಡಿದೆಯಾದರೂ ಅದು ಸದ್ಬಳಕೆಯಾಗುತ್ತಿಲ್ಲ; ಪಂ.ರಾ.ಇಂ.ವಿಭಾಗದ ಇಂಜಿನಿಯರ್ ರವರು ಕೊಳವೆಬಾವಿ ಕೊರೆಯದೆ ಬೆಸ್ಕಾಂ ನವರು ಕೆಲಸ ಮಾಡಲಾಗುವುದಿಲ್ಲ, ಇದರಿಂದ ಘಟಕದವರು ಪ್ಲಾಂಟ್ ಅಳವಡಿಸುವುದಿಲ್ಲ, ಇಲ್ಲಿ ಯಾರಿಗೂ ಬದ್ಧತೆ ಇಲ್ಲ ಎಂದು ಆಪಾದಿಸಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, Custodian of the project is EO ಆದುದರಿಂದ ಜವಾಬ್ದಾರಿ ಕೊಡಲಿ ಬಿಡಲಿ ಅದನ್ನು ಗಮನಿಸುವುದು ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿ ಎಂದು ತಿಳಿಸಿ, ಕಾಮಗಾರಿ ಅನುಷ್ಠಾನ ಲೆಕ್ಕದಲ್ಲಿ ಕೊಟ್ಟಿದ್ದಾರೆ ಸಾರ್ವಜನಿಕರಿಗೆ ಪ್ರಯೋಜನ ಸಿಗುತ್ತಿಲ್ಲ ಎಂಬುದು ಮಾನ್ಯ ಶಾಸಕರ ಆರೋಪ ಎಂದು ಸಭೆಗೆ ಸ್ಪಷ್ಟಪಡಿಸಿದರು. ಮಾನ್ಯ ಸದಸ್ಯರಾದ ಶ್ರೀಮತಿ ನಳಿನಿಯವರು, ಅವರಿಗೆ ಯಾರೂ ಮಾಹಿತಿ ನೀಡುವುದಿಲ್ಲ ಎಂದು ಆರೋಪ ವ್ಯಕ್ತಪಡಿಸಿದ್ದರ ಮೇರೆಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಪಾವಗಡ ಇವರು, ಸ್ಪಷ್ಟ ಮಾಹಿತಿ ಒದಗಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ದಿನಾಂಕ 21-08-2014ರಂದು ಪಾವಗಡ ತಾಲ್ಲೂಕಿಗೆ ಭೇಟಿ ನೀಡುವ ವೇಳೆಗೆ ಒಟ್ಟಾರೆ 108 ಆರೋ ಪ್ಲಾಂಟ್ ಗಳನ್ನು ಉದ್ಘಾಟಿಸಲು ಅನುವಾಗುವಂತೆ ಮಾನ್ಯ ಶಾಸಕರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ದಿನಾಂಕ ನಿಗಧಿಪಡಿಸಿಕೊಳ್ಳುವಂತೆ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದರು.

ಪಾವಗಡ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು, ಗ್ರಾಮ ಪಂಚಾಯಿತಿಗಳಲ್ಲಿ ಕಳೆದ 10 ವರ್ಷಗಳಿಂದ ವಿದ್ಯುತ್ ಬಿಲ್ ಪಾವತಿಸಿರುವುದಿಲ್ಲ, ಅದನ್ನು ಯಾರು ಪಾವತಿಸಬೇಕು? ಒಂದು ಪಂಚಾಯಿತಿಯಿಂದ ಸುಮಾರು ರೂ. 2,80,000/- ಪಾವತಿಗೆ ಬಾಕಿ ಇದೆ, ಈ ಕುರಿತು ಯಾರಲ್ಲಿ ಚರ್ಚಿಸಬೇಕು ಎಂದು ಪ್ರಶ್ನಿಸಿ ಬಾಕಿ ಬಿಲ್ ಪಾವತಿಸಲು ಕ್ರಮವಹಿಸಿ disconnected plants ನ್ನು connect ಮಾಡಿಸಿ ಜನರಿಗೆ ನೀರು ಪೂರೈಸಲು ವ್ಯವಸ್ಥೆಗೊಳಿಸಬೇಕೆಂದು ಮಾನ್ಯ ಮುಖ್ಯ ಕಾರ್ಯಾನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು, ಕುಡಿಯುವ ನೀರಿಗೆ ಸಮಸ್ಯೆ ಇರುವುದರಿಂದ ವಿದ್ಯುತ್ ಬಿಲ್ ಪಾವತಿಸದಿದ್ದರೂ ಸಹ ಕುಡಿಯುವ ನೀರಿನ ಪ್ಲಾಂಟ್ ಗಳನ್ನು disconnect ಮಾಡಬಾರದೆಂದು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು.

(ಕ್ರಮ : ಅಧೀಕ್ಷಕ ಇಂಜಿನಿಯರ್, ಬೆಸ್ಕಾಂ, ತುಮಕೂರು ವೃತ್ತ)

ಮಾನ್ಯ ಉಪಾಧ್ಯಕ್ಷರು, ಶಿರಾ ತಾಲ್ಲೂಕು ಮುದ್ದಗಾನಹಳ್ಳಿ, ನ್ಯಾಯದಗುಂಟೆ, ವದನಕಲ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕ್ಯಾತಗಾನಹಳ್ಳಿ ಎಸ್.ಸಿ., ಕಾಲೋನಿ ಇತ್ಯಾದಿ ಕಡೆಗಳಲ್ಲಿ ಕಾಮಗಾರಿ ಪೂರ್ಣಗೊಳ್ಳದೆ ಸಂಬಂಧಿಸಿದ ಗುತ್ತಿಗೆದಾರರಿಗೆ ಬಿಲ್ ಪಾವತಿಸಿರುತ್ತಾರೆ, ಶಾಲೆ/ ಅಂಗನವಾಡಿಗಳಲ್ಲಿ ಕೊಳವೆಬಾವಿಗಳಿಗೆ ತುರ್ತಾಗಿ

ಮೋಟಾರು ಅಳವಡಿಸಿ ವಿದ್ಯುದೀಕರಣಗೊಳಿಸಿ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಬೇಕು ಎಂದು ಸಭೆಯ ಗಮನಕ್ಕೆ ತಂದರು. ಇದಕ್ಕೆ ಮಾನ್ಯ ಶಾಸಕರು ಸಹಮತ ವ್ಯಕ್ತಪಡಿಸಿದರು.

ಮಾನ್ಯ ಅಧ್ಯಕ್ಷರು, ಕಾರ್ಯಪಾಲಕ ಇಂಜಿನಿಯರ್ ಬೆಸ್ಕಾಂ ಇವರು ದಾಸ್ತಾನು ಪರಿಶೀಲಿಸಿ ತಂಡದೊಂದಿಗೆ ಸಮಾಲೋಚಿಸಿ ಲೋಪವನ್ನು ಸರಿಪಡಿಸಲು ಕ್ರಮವಹಿಸಬೇಕು; ವದನಕಲ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕ್ಯಾತಗಾನಹಳ್ಳಿ ಎಸ್.ಸಿ. ಕಾಲೋನಿ ಕಾಮಗಾರಿಯ ಕುರಿತು ಗಮನಹರಿಸಿ ಸಮಸ್ಯೆಯನ್ನು ಸರಿಪಡಿಸಬೇಕು ಎಂದು ತಿಳಿಸಿದರು.

(ಕ್ರಮ : ಅಧೀಕ್ಷಕ ಇಂಜಿನಿಯರ್, ಬೆಸ್ಕಾಂ, ತುಮಕೂರು ವೃತ್ತ)

ಮಾನ್ಯ ಸದಸ್ಯರಾದ ಶ್ರೀ ತ್ರಿಯಂಬಕರವರು, ತಿಪಟೂರು ತಾಲ್ಲೂಕು ರಂಗಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಂಕರನಹಳ್ಳಿ ಗ್ರಾಮದಲ್ಲಿ NRDWP ಯೋಜನೆಯಡಿ ಕೊಳವೆಬಾವಿ ಕೊರೆಯಲಾಗಿದ್ದು ಮಾರ್ಚ್-2014ಕ್ಕೆ ಕಾಮಗಾರಿ ಪೂರ್ಣಗೊಂಡು ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಿದ್ದರೂ ಸಹ ಕಾಮಗಾರಿ ವೆಚ್ಚ ರೂ. 4.70ಲಕ್ಷಗಳನ್ನು ಈ ವರೆವಿಗೂ ಪಾವತಿಸಿರುವುದಿಲ್ಲ, ವಿಚಾರಿಸಲಾಗಿ ಅನುದಾನ ಬಂದಿಲ್ಲವೆಂದು ಹೇಳುತ್ತಾರೆ, ಈ ಕುರಿತು ಪರಿಶೀಲಿಸಿ ತುರ್ತು ಹಣ ಪಾವತಿಗೆ ಕ್ರಮವಹಿಸಬೇಕು ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ AEE., PRESD ತಿಪಟೂರು ಇವರು, ಕಾಮಗಾರಿಗಳು ವಿಭಾಗ ಕಛೇರಿಯಲ್ಲಿ ಅನುಮೋದನೆಯಾಗುತ್ತವೆ, ಕಾಮಗಾರಿ ಮೊತ್ತವನ್ನು RTGS ಮೂಲಕ ಪಾವತಿಸಲಾಗುತ್ತದೆ; ಈ ನಿಟ್ಟಿನಲ್ಲಿ ತಿಪಟೂರು ತಾಲ್ಲೂಕಿಗೆ ಸುಮಾರು ರೂ.60-70 ಲಕ್ಷ ಪಾವತಿಯಾಗಬೇಕು ಇದಕ್ಕೆ ಸರ್ಕಾರದಿಂದ ಅನುದಾನ ಬರಬೇಕು; ಬೆಂಗಳೂರು ಸಿಂಡಿಕೇಟ್ ಬ್ಯಾಂಕಿಗೆ ಈಗಾಗಲೇ ಬಿಲ್ ಗಳನ್ನು ಸಲ್ಲಿಸಲಾಗಿದೆ, ಅನುದಾನ ಬಂದ ಕೂಡಲೇ ಹಣ ಪಾವತಿಗೆ ಕ್ರಮವಹಿಸಲಾಗುವುದು ಎಂದು ಸಭೆಗೆ ಸ್ಪಷ್ಟ ಪಡಿಸಿದರು. ಬಿಲ್ ಪಾವತಿಯಲ್ಲಿ ತಾಲ್ಲೂಕುವಾರು ತಾರತಮ್ಯ ಮಾಡಿರುವುದಾಗಿ ಮಾನ್ಯ ಸದಸ್ಯರಾದ ಡಾ: ರವಿಯವರು ಆಕ್ಷೇಪ ವ್ಯಕ್ತಪಡಿಸಿದರು, ಹಾಗೂ RTGS ಅಡಿಯಲ್ಲೇ ಎಲ್ಲ ಲೆಕ್ಕ ಶೀರ್ಷಿಕೆಗಳಿಗೂ ಹಣ ಬಿಡುಗಡೆಯಾಗುವುದು, ಆದರೆ ಸಮಸ್ಯೆಗೆ ಕಾರಣವೇನೆಂದು ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ ತುಮಕೂರು ಇವರು ಸ್ಪಷ್ಟ ಮಾಹಿತಿ ನೀಡಿದಲ್ಲಿ ನಂತರ ಸಂಬಂಧಪಟ್ಟ ಬ್ಯಾಂಕಿನವರೊಂದಿಗೆ ಚರ್ಚಿಸಬಹುದು ಎಂದು ಸಭೆಗೆ ತಿಳಿಸಿದರು. ಇದಕ್ಕೆ ಸದಸ್ಯರಾದ ಶ್ರೀ ಅರುಣ್ ಕುಮಾರ್ ರವರು ಸಹಮತ ವ್ಯಕ್ತಪಡಿಸಿದರು. ಶ್ರೀ ತ್ರಿಯಂಬಕರವರು ಮಾತನಾಡಿ ತಿಪಟೂರು ತಾ|| ಹಾಸನ ರಸ್ತೆ,ಲಿಂಗದ ಹಳ್ಳಿ ಶನೇಶ್ವರ ಕ್ಷೇತ್ರಕ್ಕೆ ಕುಡಿಯುವ ನೀರು ಸರಬರಾಜಿಗಾಗಿ ಬೋರವೆಲ್ ಕೊರೆಯಿಸಿ, ಪಂಪು ಮೋಟಾರು ಅಳವಡಿಸಲು, ಮಂಜೂರಾತಿ ನೀಡಲು ಕೋರಿದರು. ಉತ್ತರವಾಗಿ ಅಧ್ಯಕ್ಷರು, ನೀರು ಸರಬರಾಜು ಯೋಜನೆಗೆ ಮಂಜೂರಾತಿ ನೀಡಿ ಹಣ ಒದಗಿಸುವುದಾಗಿ ಭರವಸೆ ನೀಡಿದರು ಹಾಗೂ ಕ್ರಮ ವಹಿಸಲು **AEE (RWS),** ತಿಪಟೂರು ಇವರಿಗೆ ಸೂಚಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, RTGS ಮಾಡುವಲ್ಲಿ ತಾರತಮ್ಯ ನಡೆಯುತ್ತಿದೆ; ಬ್ಯಾಂಕ್ ನಲ್ಲಿ ಹಣ ಇದ್ದರೂ ಅವರು ಗುತ್ತಿಗೆದಾರರ ಹೆಸರಿಗೆ ಹಣ ಜಮೆಗೊಳಿಸುವುದಿಲ್ಲ; ಮಾರ್ಚ್ ಅಂತ್ಯಕ್ಕೆ ಸರ್ಕಾರ ಹಣ ನೀಡಿದ್ದು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ಇವರು RTGS ಮೂಲಕ ಬ್ಯಾಂಕಿಗೆ ಹಣ ಪಾವತಿಸಿದ್ದರೂ ಸಹ ಬ್ಯಾಂಕಿನವರು ಏಪ್ರಿಲ್ ಮಾಸಾಂತ್ಯದವರೆಗೆ ಹಣ ನೀಡಿರುವುದಿಲ್ಲ

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು ಇವರು, ಎಲ್ಲ ಬಿಲ್ ಗಳ ಮೊತ್ತವನ್ನು ಬ್ಯಾಂಕಿಗೆ ಕಳುಹಿಸಿದ ನಂತರ ಮಾನ್ಯ ಮುಖ್ಯ ಲೆಕ್ಕಾಧಿಕಾರಿಯವರಿಗೂ ಸಹ ಒಂದು ಪ್ರತಿಯನ್ನು ಕಳುಹಿಸಲಾಗುತ್ತಿದೆ; ಬ್ಯಾಂಕಿನವರು ಸೀನಿಯಾರಿಟಿ ಪ್ರಕಾರ ಹಣ ಬಿಡುಗಡೆ ಮಾಡುತ್ತಾರೆ ಎಂದು ಸಭೆಗೆ ಸ್ಪಷ್ಟಪಡಿಸಿದರು. ಇದನ್ನು ಒಪ್ಪದ ಮಾನ್ಯ ಸದಸ್ಯರು, ಅವರ ಪ್ರಕಾರ ಬೆಂಗಳೂರು ಸಿಂಡಿಕೇಟ್ ಬ್ಯಾಂಕಿನವರು

ರೂ. 21.00 ಕೋಟಿ ಅನುದಾನ ಬಿಡುಗಡೆಯಾಗಿದೆ ಎಂದು ತಿಳಿಸಿದ್ದು, ಯಾರಿಗೂ ಹಣ ನೀಡಿಲ್ಲ ಎಂದು ಆಪಾದಿಸಿದರು. ಪ್ರತಿಯಾಗಿ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಮಧುಗಿರಿ ಇವರು, ಐ.ಎಂ.ಐ.ಎಸ್. ಅಡಿ ಬ್ಯಾಂಕಿನಲ್ಲಿ ರೂ.21.34 ಕೋಟಿ ಹಣ ಇದ್ದು ರೂ. 10.00 ಕೋಟಿ ಖರ್ಚಾಗಿರುತ್ತದೆ; ಈ ಮಾಹಿತಿ ವೆಬ್ ಸೈಟ್ ನಲ್ಲಿ ಕಾಣುತ್ತದೆ; ಬ್ಯಾಂಕಿನಲ್ಲಿ ರೂ.8.60ಕೋಟಿ ಪಾವತಿಗೆ ಬಾಕಿ ಇರುತ್ತದೆ; ಆಡಿಟ್ ಆಗಿ ಪುನ: ರೂ.3.22 ಕೋಟಿ ಬಿಡುಗಡೆ ಮಾಡಲಾಗಿದೆ, ಹೀಗಿದ್ದೂ ಸಹ ಗುತ್ತಿಗೆದಾರರುಗಳಿಗೆ ಮಾರ್ಚ್ ಅಂತ್ಯದಿಂದ ಈ ವರೆಗೆ ಹಣ ಪಾವತಿಸಿರುವುದಿಲ್ಲ, ಬ್ಯಾಂಕ್ ನವರನ್ನು ಕೇಳಿದರೆ ಅವರು ಸರ್ಕಾರವನ್ನು ಕೇಳಿ ಎಂದು ಹೇಳುತ್ತಾರೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಕುಡಿಯುವ ನೀರಿನ ಅನುದಾನವನ್ನು ಜಿಲ್ಲಾ ಪಂಚಾಯಿತಿಯಿಂದ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡುವ ಪದ್ಧತಿ ಇಲ್ಲ; ಐ.ಎಂ.ಐ.ಎಸ್. ಯೋಜನೆಯಡಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಹೆಸರಿನಲ್ಲಿ ಖಾತೆ ಇರುತ್ತದೆ; ಬಿಲ್ ಬಂದ ಹಾಗೆ RTGS ಮೂಲಕ ಬ್ಯಾಂಕಿಗೆ ಕಳುಹಿಸುತ್ತಾರೆ; Inturn ಬ್ಯಾಂಕ್ ನವರು ಹಣ ಪಾವತಿ ಮಾಡಬೇಕು; 2013-14ನೇ ಸಾಲಿನದು ಜುಲೈ ಅಂತ್ಯದ ವರೆಗೆ ಮಾಹಿತಿ ಲಭ್ಯವಿದೆ; ಏಪ್ರಿಲ್ – ಜುಲೈ ರೂ. 19.62 ಕೋಟಿ ಹಣ ಪಾವತಿಯಾಗಿರುತ್ತದೆ; ಬ್ಯಾಂಕಿನಲ್ಲಿ ರೂ. 17.53 ಕೋಟಿ ಪಾವತಿಗೆ ಬಾಕಿ ಇದೆ; ಇನ್ನೂ ರೂ. 18.00 ಕೋಟಿ ಅನುದಾನದ ಅವಶ್ಯಕತೆ ಇದೆಯೆಂದು ಸರ್ಕಾರದ ಗಮನಕ್ಕೆ ತರಲಾಗಿದೆ; ವಿಡಿಯೋ ಕಾನ್ಫರೆನ್ಸ್ ನಲ್ಲಿ ಕೂಡ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತರಲಾಗಿದೆ; ವೆಬ್ ನಲ್ಲಿ ಹಣ ಇದೆ, ಬ್ಯಾಂಕ್ ನಲ್ಲಿ ಹಣ ಇಲ್ಲ ಎನ್ನುತ್ತಾರೆ, ಈ ಕುರಿತು ಸರ್ಕಾರದ ಜೊತೆ ಸಮಾಲೋಚಿಸಲಾಗುವುದು ಎಂದು ಸಭೆಗೆ ಭರವಸೆಯಿತ್ತರು.

ಡಾ: ರವಿಯವರು, ಲಭ್ಯ ಮಾಹಿತಿಯ ಪ್ರಕಾರ ಸರ್ಕಾರದಲ್ಲಿ ಹಣವಿಲ್ಲ ಎಂದಾಯಿತು; ಬರ ಪರಿಹಾರ ದಡಿ ಸರ್ಕಾರದಿಂದ ಪ್ರತಿ ತಾಲ್ಲೂಕಿಗೆ ರೂ. 40.00ಲಕ್ಷ ಹಣ ನೀಡಲಾಗಿದೆ, ಆದರೆ ಯವುದೇ ಹಣ ಪಾವತಿಯಾಗಿ ರುವುದಿಲ್ಲ; ಗುತ್ತಿಗೆದಾರರ ಸಮಸ್ಯೆಯನ್ನು ಬಗೆಹರಿಸಲು ಯಾರೂ ಮುಂದೆ ಬರುವುದಿಲ್ಲ, ಆದುದರಿಂದ ಆವಶ್ಯಕವಿರುವ ರೂ. 18.00 ಕೋಟಿ ಮೊತ್ತವನ್ನು ಕೂಡಲೇ ಪಾವತಿಸಲು ತುರ್ತು ಅಗತ್ಯ ಕ್ರಮವಹಿಸುವಂತೆ ಕೋರಿದರು, ಈ ಮಾತಿಗೆ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಸಹಮತ ವ್ಯಕ್ತಪಡಿಸಿದರು. ಮಾನ್ಯ ಅಧ್ಯಕ್ಷರು ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಈ ಸಭೆಯ ಮೂಲಕ ಇನ್ನೊಮ್ಮೆ ಪ್ರಸ್ತಾವನೆ ಸಲ್ಲಿಸಲು ನಿರ್ಣಯಿಸುವುದರ ಜೊತೆಗೆ ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಯವರನ್ನು ಭೇಟಿ ಮಾಡಿ ಹಣ ಪಾವತಿಗೆ ಕ್ರಮವಹಿಸುವುದಾಗಿ ಸಭೆಗೆ ಭರವಸೆಯಿತ್ತರು.

ಮಾನ್ಯ ಸದಸ್ಯರಾದ ಶ್ರೀ ಜಗದೀಶ್ ರವರು, ಐ.ಎಂ.ಐ.ಎಸ್. ಕಾರ್ಯಕ್ರಮದಡಿ ತುರುವೇಕೆರೆ ತಾಲ್ಲೂಕನ್ನು ಹೊರತುಪಡಿಸಿ ಉಳಿದೆಲ್ಲ ತಾಲ್ಲೂಕುಗಳಲ್ಲಿ ಕ್ರಿಯಾಯೋಜನೆ ಅನುಮೋದನೆಯಾಗಿದೆ; ತಾಲ್ಲೂಕಿನ ದಬ್ಬೆಘಟ್ಟ, ಕಣತ್ತೂರು, ಬಿಗಿನೇನಹಳ್ಳಿ ಇತ್ಯಾದಿ ಗ್ರಾಮ ಪಂಚಾಯಿತಿಗಳ ಬಹುಗ್ರಾಮ ಯೋಜನೆಯನ್ನು ಮೂರು ಬಾರಿ ಮುಂದೂಡಲಾಗಿದೆ, ಈ ರೀತಿಯಾದರೆ ಗುತ್ತಿಗೆದಾರರುಗಳ ಪಾಡೇನಾಗಬೇಕು ಎಂದು ಪ್ರಶ್ನಿಸಿದರು. ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ ತುಮಕೂರು ಇವರು, ತುರುವೇಕೆರೆ ತಾಲ್ಲೂಕು ಬಹುಗ್ರಾಮ ಯೋಜನೆಯಡಿ ದಬ್ಬೆಘಟ್ಟ ಗ್ರಾಮ ಪಂಚಾಯಿತಿಯ 6 ಗ್ರಾಮಗಳು ಮತ್ತು ಕಣತ್ತೂರು

ಗ್ರಾಮ ಪಂಚಾಯಿತಿ ವ್ಯಾಪ್ತಿಯ 7 ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ದಿನಾಂಕ 06-08-2014 ರಂದು ಎರಡೂ ಪಂಚಾಯಿತಿಗಳನ್ನು ಅಪ್ ಲೋಡ್ ಮಾಡಲಾಗಿರುತ್ತದೆ; ಮೊದಲಬಾರಿಗೆ ಸಿ.ಎ.ಪಿ. ಮತ್ತು ಐ.ಎಂ.ಐ. ಅಡಿ ಸೇರಿಸಲಾಗಿತ್ತು, ಆದರೆ ಎರಡನೆಯ ಬಾರಿಗೆ miss ಆಗಿರುತ್ತದೆ; ಸೇರಿಸಿಕೊಡುವುದಾಗಿ ಹೇಳಿರುತ್ತಾರೆ, ಆದುದರಿಂದ ಐ.ಎಂ.ಐ.ಎಸ್. open ಆದಾಗ ಅಪ್ ಲೋಡ್ ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಈ ಕುರಿತು ಇಲಾಖೆಯ ಮುಖ್ಯ ಇಂಜಿನಿಯರ್ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ ಗಳ ಗಮನಕ್ಕೆ ತರಲಾಗಿದೆ; ರಾಜ್ಯದ 13 ಜಿಲ್ಲೆಗಳಲ್ಲಿ ಬಹುಗ್ರಾಮ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳ ಅಪ್ ಲೋಡಿಂಗ್ ಬಾಕಿ ಇದ್ದು ಅದರಲ್ಲಿ ತುಮಕೂರು ಜಿಲ್ಲೆಯೂ ಸೇರಿರುತ್ತದೆ, ಆದುದರಿಂದ ಅಪ್ ಲೋಡಿಂಗ್ ಅವಕಾಶ ಕಲ್ಪಿಸಿಕೊಡುತ್ತಾರೆ ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಮುಖ್ಯ ಇಂಜಿನಿಯರ್ ರವರ ಸಂಪರ್ಕದಲ್ಲಿದ್ದುಕೊಂಡು ಯಾರಾದರೂ ಅಧಿಕಾರಿಗಳನ್ನು ನಿಯೋಜಿಸಿ ಫಾಲೋ ಅಪ್ ಮಾಡಿ ಸಮಸ್ಯೆಯನ್ನು ತುರ್ತಾಗಿ ಇತ್ಯರ್ಥಪಡಿಸುವಂತೆ ತಿಳಿಸಿದರು.

(ಕ್ರಮ : ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿ.ಪಂ., ತುಮಕೂರು)

ಮಾನ್ಯ ಸದಸ್ಯರಾದ ಶ್ರೀಮತಿ ಯಶೋಧ ರವರು, ಅವರ ಕ್ಷೇತ್ರ ವ್ಯಾಪ್ತಿಯ ಗುಟ್ಟೆ ಗ್ರಾಮದಲ್ಲಿ ಕುಡಿಯುವ ನೀರಿಗೆ ಅಭಾವವಿರುವುದರಿಂದ ಸೋಂದೇನಹಳ್ಳಿ ಗ್ರಾಮದಿಂದ ಗುಟ್ಟೆ ಗ್ರಾಮಕ್ಕೆ ನೀರು ಒದಗಿಸುತ್ತಿದ್ದು ಅಲ್ಲಿ ಪೈಪ್ ಲೈನ್ ಇದ್ದು ಮೋಟಾರ್ ಅಳವಡಿಸದೆ ಬಹಳಷ್ಟು ತೊಂದರೆಯಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಅಧ್ಯಕ್ಷರು, ಸದರಿ ಗ್ರಾಮಕ್ಕೆ ಈಗಾಗಲೇ ನೀರು ಕೊಡಲಾಗಿದೆ; ಆದರೂ ಈ ಕುರಿತು ಖುದ್ದು ಗಮನಹರಿಸಿ ಟ್ಯಾಂಕರ್ ನೀರು ಸರಬರಾಜನ್ನು ನಿಲ್ಲಿಸಿ ವರಮಹಾಲಕ್ಷ್ಮಿ ಹಬ್ಬದ ದಿನದಿಂದ ನೀರು ಕೊಡಲಾಗುವುದು ಎಂದು ತಿಳಿಸಿದರು. ಪೂರಕವಾಗಿ AEEರವರು, ಈಗಾಗಲೇ ನೀರು ಪೂರೈಸಲಾಗುತ್ತಿದೆ ಯಾವುದೇ ಸಮಸ್ಯೆ ಇರುವುದಿಲ್ಲ ಎಂದು ಸಭೆಗೆ ಸ್ಪಷ್ಟಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಅರುಣ್ ಕುಮಾರ್ ರವರು, ಶಾಶ್ವತ ಕುಡಿಯುವ ನೀರು ಯೋಜನೆಯಡಿ ಯಡಿಯೂರು ಹೋಬಳಿ ಮಾರ್ಕೋನಹಳ್ಳಿ ಗ್ರಾಮ ಪಂಚಾಯಿತಿಯ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ, ವಿಚಾರಿಸಲಾಗಿ AEEರವರು ಇನ್ನು ಎರಡು ತಿಂಗಳುಗಳಲ್ಲಿ ಪೂರ್ಣಗೊಳಿಸಿಕೊಡುವುದಾಗಿ ತಿಳಿಸಿದ್ದರು; ಆದರೆ ಈ ವರೆಗೆ ಕಾಮಗಾರಿ ಪೂರ್ಣಗೊಂಡಿಲ್ಲ; ಇದು ರೂ. 4.00 ಲಕ್ಷ ಮೊತ್ತದ ಯೋಜನೆಯಾಗಿದ್ದು, 2012 ಮುಕ್ತಾಯ ದಿನಾಂಕವಾಗಿದ್ದು, ಪ್ರಗತಿ ಹಂತದ ಮಾಹಿತಿ ಕೂಡ ನೀಡಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು. AEEರವರು, ಕಾಮಗಾರಿ ಪೂರ್ಣಗೊಂಡಿದೆ ಮೇಲುತೊಟ್ಟಿ ಕೆಲಸ ಆಗಬೇಕು ಇದಕ್ಕಾಗಿ ನಿವೇಶನ ಹುಡುಕುತ್ತಿದ್ದೇವೆ; ಕಳೆದ ಸಭೆಯಲ್ಲಿ ತಿಳಿಸಿದಂತೆ ಹೈದರಾಬಾದ್ ನಿಂದ ಗುತ್ತಿಗೆದಾರರನ್ನು ಕರೆಸಿದ್ದು, ಕೆಲಸ ಪ್ರಾರಂಭ ಮಾಡಿದ್ದಾರೆ ಪೂರ್ಣಗೊಳಿಸಲು ಎರಡು ತಿಂಗಳು ಬೇಕು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು, ಬಹುಗ್ರಾಮ ಯೋಜನೆ ಬಹಳ ವಿಳಂಬವಾಗಿದೆ; ಡ್ಯಾಂ ನಲ್ಲಿ ನೀರಿಲ್ಲ; ಮಾರ್ಕೋನಹಳ್ಳಿಗೆ ಹೇಮಾವತಿ ನೀರು ತರಬೇಕು; ಕೊತ್ತಗೆರೆಯ ಬಹುಗ್ರಾಮ ಯೋಜನೆ ಈ ವರೆಗೆ ಆಗಿಲ್ಲ; ಹುತ್ರಿದುರ್ಗ ಮತ್ತಿತರ ಗ್ರಾಮ ಪಂಚಾಯಿತಿಗಳ ಮಾಹಿತಿ ಇಲ್ಲ ಯಡವಾಣಿ ತಡೆ-ಅಣೆ, ಹುಲಿಯೂರುದುರ್ಗ ಟೌನ್ ಗೆ ಕುಡಿಯುವ ನೀರಿಗೆ ತಡೆ-ಅಣೆ ಪ್ರಸ್ತಾವನೆ ಏನಾಯಿತು ಎಂಬ ಬಗ್ಗೆ ಮಾಹಿತಿ ಇಲ್ಲ;

ಕುಡಿಯುವ ನೀರು ಯೋಜನೆಯಡಿ ಹೇಮಾವತಿ ನೀರು ಬಿಡದಿದ್ದರೆ ಯೋಜನೆ ಅನುಷ್ಠಾನಗೊಳಿಸಲು ಸಾಧ್ಯವೇ ಇಲ್ಲ, ಕೊತ್ತಗೆರೆ ಕುಣಿಗಲ್ ಕೆರೆಗೆ ಹೇಮಾವತಿ ನೀರು ಹರಿಸಬೇಕು ಎಂದು ಸಭೆಗೆ ತಿಳಿಸಿದರು

ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು, ಜಿಲ್ಲಾ ಪಂಚಾಯಿತಿಯಿಂದ ಕುಡಿಯುವ ನೀರು ಯೋಜನೆಯಡಿ ವಿವಿಧ ಯೋಜನೆಗಳ ಮೂಲಕ ನೀರು ಒದಗಿಸಲು ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಾಕಷ್ಟು ತೊಡಗಿಸಿಕೊಂಡರೂ ಸಹ ನಂಜುಂಡಪ್ಪ ವರದಿಯನ್ವಯ ಜನ-ಜಾನುವಾರುಗಳಿಗೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗುತ್ತಿದೆ; ಟ್ಯಾಂಕರ್ ಮೂಲಕ ನೀರು ವ್ಯವಸ್ಥೆ 15 ದಿನಗಳ ನಂತರ ಆಗುವುದಿಲ್ಲ, ಸರಬರಾಜುದಾರರನ್ನು ಕೇಳಿದರೆ ಹಣ ಬಿಡುಗಡೆಯಾಗಿಲ್ಲ ಎನ್ನುತ್ತಾರೆ; ಈಗ ಹಳ್ಳಿಗಳಲ್ಲಿ ಪ್ರತಿ ಟ್ಯಾಂಕರ್ ಗೆ ರೂ. 100/-ರಂತೆ ಹಣ ಕೊಟ್ಟು ನೀರು ಹೊಡೆಸಿಕೊಳ್ಳುತ್ತಿದ್ದಾರೆ, ಇದರಿಂದ ಸಮಸ್ಯೆಯಾಗಿದೆ; ಗಂಟೇನಹಳ್ಳಿ, ಮುದ್ದೇನಹಳ್ಳಿ, ಕಾತ್ರಿಕೆಹಾಳ್, ಎರೆಕಟ್ಟೆ ಇತ್ಯಾದಿ ಹತ್ತು-ಹಲವಾರು ಹಳ್ಳಿಗಳಲ್ಲಿ 1000ಅಡಿಗಳವರೆಗೆ ಕೊಳವೆಬಾವಿ ಕೊರೆದರೂ ನೀರು ಸಿಗುತ್ತಿಲ್ಲ ಇದಕ್ಕೆ ಪರಿಹಾರ ದೊರಕಿಸಿಕೊಡಿ ಹೇಮಾವತಿ ನೀರನ್ನು ತ್ವರಿತವಾಗಿ ಹರಿಸಿ ಚಿ.ನಾ.ಹಳ್ಳಿ ಕೆರೆಗೆ 25 ಟಿ.ಎಂ.ಸಿ ನೀರು ಹರಿದರೆ ನ್ಯಾಯ ಸಿಕ್ಕಂತಾಗುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಪಂಚಾಕ್ಷರಿಯವರು, ಎಲ್ಲರೂ ತಿಳಿಸಿದಂತೆ ಟ್ಯಾಂಕರ್ ನೀರು ಸರಬರಾಜುದಾರರಿಗೆ ಹಣ ಪಾವತಿಸಲು ಸರ್ಕಾರ ತುರ್ತು ಆದೇಶ ನೀಡಿದೆಯಾ ಎಂದು ಪ್ರಶ್ನಿಸಿ, ಕುಪ್ಪೂರು ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ರೂ. 1.75 ಲಕ್ಷ ಹಣ ಡಿಪಾಸಿಟ್ ಪಾವತಿಸಿದ್ದರೂ ಸಹ ಬೆಸ್ಕಾಂನವರು ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ನೀಡಿಲ್ಲದ ಕಾರಣ ಆ ಭಾಗದ ಜನರಿಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಅಧ್ಯಕ್ಷರು, NRDWPಯೋಜನೆಯಡಿ ಸುಮಾರು ರೂ.142.547 ಕೋಟಿ ಮೊತ್ತದ ಕ್ರಿಯಾ ಯೋಜನೆ ಅನುಮೋದನೆಯಾಗಿದೆ; ಕಾರ್ಯಪಡೆ ಮತ್ತು ಕನ್ಟಿನ್ಜೆನ್ಸಿ ಮೂಲಕ ಕೆಲಸ ನಡೆದಿದೆ; ಇಡೀ ಜಿಲ್ಲೆಯಲ್ಲಿ ಹೆಚ್ಚುವರಿ ಕ್ರಿಯಾಯೋಜನೆ ಮಾಡಿ ಸರ್ಕಾರಕ್ಕೆ ಸಲ್ಲಿಸಿ ಮಂಜೂರಾತಿ ಪಡೆಯಬೇಕು; ಹಣ ಬಿಡುಗಡೆ ಕುರಿತು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಸಮಾಲೋಚಿಸಲಾಗಿದ್ದು, ಹಣಕ್ಕೆ ಕೊರತೆ ಇಲ್ಲ ಎಂದು ತಿಳಿಸಿದರು. ಅಂತೆಯೇ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ಪಡೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

( ಕ್ರಮ : ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿ.ಪಂ., ತುಮಕೂರು)

ಮಾನ್ಯ ಸದಸ್ಯರಾದ ಶ್ರೀಮತಿ ನಿಂಗಮ್ಮನವರು, ಚಿಕ್ಕನಾಯಕನ ಹಳ್ಳಿ ಜಿ.ಪಂ.ಕ್ಷೇತ್ರ ವ್ಯಾಪ್ತಿಯ ಗಾಣದಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊನ್ನೇನಹಳ್ಳಿ, ಬೆಳ್ಳಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೊಲ್ಲರಹಟ್ಟಿ, ತರೇದಹಳ್ಳಿ ಮೊದಲಾದ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇರುವುದಾಗಿ ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಕಾರ್ಯನಿರ್ವಾಹಕ ಅಧಿಕಾರಿಯವರು, ತೊಂದರೆಯಿರುವುದರಿಂದ ಆ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಕೊಡಲಾಗುತ್ತಿದೆ; ಕೊಳವೆಬಾವಿ ಕೊರೆಸಲು AEEರವರ ಗಮನಕ್ಕೆ ತರಲಾಗಿದೆ; ಕಾಮಗಾರಿ ಇನ್ನೂ ಅನುಮೋದನೆಯಾಗಿಲ್ಲ ಎಂದು ಸಭೆಗೆ ತಿಳಿಸಿದರು. ಮಾನ್ಯ CEOರವರು, ರಾಜ್ಯದ ಇಡೀ 30 ಜಿಲ್ಲೆಗಳ ರೂ.141.00 ಕೋಟಿ ಮೊತ್ತದ ಕ್ರಿಯಾ ಯೋಜನೆ ಪೈಕಿ 13 ಜಿಲ್ಲೆಗಳ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು, ಅನುಮೋದಿತ ಕ್ರಿಯಾ ಯೋಜನೆ ಪಟ್ಟಿಯನ್ನು ಇನ್ನೂ ನೀಡಿರುವುದಿಲ್ಲ ಆದುದರಿಂದ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕ್ರಿಯಾಯೋಜನೆಯನ್ವಯ ತುರ್ತಾಗಿ ಅಂದಾಜುಪಟ್ಟಿ ತಯಾರಿಸಿ

ಕೆಲಸಗಳನ್ನು ಪ್ರಾರಂಭಿಸುವಂತೆ ಕರೆ ನೀಡಿದರು. ಪೂರಕವಾಗಿ ಮಾನ್ಯ ಅಧ್ಯಕ್ಷರು, ಕ್ರಿಯಾ ಯೋಜನೆಯು ದಿನಾಂಕ 10-07-2014ರಂದೇ ಅನುಮೋದನೆಯಾಗಿದ್ದು, ತಾತ್ಕಾಲಿಕವಾಗಿ ಒಪ್ಪಿಗೆ ನೀಡಿರು ವುದರಿಂದ ಮೇಲಧಿಕಾರಿಗಳಿಂದ ಅನುಮತಿ ಪಡೆದು ಕೆಲಸ ಪ್ರಾರಂಭಿಸುವಂತೆ ಸಭೆಗೆ ತಿಳಿಸಿದರು.

(ಕ್ರಮ : ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು/ಮಧುಗಿರಿ)

ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯನವರು, ತಮ್ಮ ಕ್ಷೇತ್ರ ವ್ಯಾಪ್ತಿಯ ಹಂದನಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಣ್ಣೆಗೆರೆ, ತಿಕ್ಕೇನಹಳ್ಳಿ, ಮೈಸೂರಪ್ಪನ ಪಾಳ್ಯ, ಕಾಮ್ಲಾಪುರ ಗ್ರಾಮಗಳಲ್ಲಿನ ಮೇಲುತೊಟ್ಟಿಗಳಲ್ಲಿ ನೀರು ನಿಲ್ಲದೆ ಕುಡಿಯುವ ನೀರಿಗೆ ತೊಂದರೆಯಾಗಿದೆ; ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿರುವವರಿಗೆ ಈ ವರೆಗೆ ಹಣ ಪಾವತಿ ಮಾಡಿರುವುದಿಲ್ಲ, ಈ ಕುರಿತು ಪರಿಶೀಲಿಸಿ ತುರ್ತಾಗಿ ಸಮಸ್ಯೆಯನ್ನು ಬಗೆಹರಿಸಿಕೊಡಬೇಕು ಎಂದು ಸಭೆಯ ಗಮನಕ್ಕೆ ತಂದರು. ಕಾರ್ಯನಿರ್ವಾಹಕ ಅಧಿಕಾರಿಯವರು, ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿರುವ ಬಾಬ್ತು ರೂ. 3.50 ಲಕ್ಷ ಬಿಲ್ ಪಾವತಿಗೆ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲಾಗಿದೆ; ಫೆಬ್ರುವರಿ-2014ರಲ್ಲಿ ನೀರು ಸರಬರಾಜು ಮಾಡಿರುವ ಬಾಬ್ತು ಸರಬರಾಜುದಾರರಿಗೆ ಹಣ ಪಾವತಿಯಾಗಿರುವುದಿಲ್ಲ; ಎಲ್ಲ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಸಭೆ ಕರೆದು ಮಾರ್ಚ್ ಅಂತ್ಯದೊಳಗಾಗಿ ಬಿಲ್ ನೀಡುವಂತೆ ತಿಳಿಸಲಾಗಿತ್ತಾದರೂ ಈ ವರೆಗೆ ಯಾರು ಬಿಲ್ ನೀಡಲಿಲ್ಲ; ಈ ಸಂಬಂಧ ಪಾವತಿಗೆ ಯಾವುದೇ ಬಿಲ್ ಬಾಕಿ ಇರುವುದಿಲ್ಲ ಎಂದು ಮಾನ್ಯ ಜಿಲ್ಲಾಧಿಕಾರಿಯವರಿಗೆ ತಿಳಿಸಲಾಗಿತ್ತು; ಆದರೆ ಸರಬರಾಜುದಾರರು ಫೆಬ್ರುವರಿಯಲ್ಲಿ ನೀರು ಸರಬರಾಜು ಮಾಡಿ ಜುಲೈನಲ್ಲಿ ಹಣ ಕೇಳಲು ಬಂದಿರುತ್ತಾರೆ; ಈ ಮೇರೆಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿರುವ ಬಾಬ್ತು ರೂ. 3.50 ಲಕ್ಷ ಬಿಲ್ ಪಾವತಿಗೆ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಪೂರಕವಾಗಿ ಮಾನ್ಯ ಅಧ್ಯಕ್ಷರು, ಈ ಕುರಿತು ಗಮನಹರಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೂಲಕ ಬಿಲ್ ಪಡೆದು ಹಣ ಪಾವತಿಗೆ ತುರ್ತು ಅಗತ್ಯ ಕ್ರಮವಹಿಸುವಂತೆ ತಿಳಿಸಿದರು.

(ಕ್ರಮ : ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಕ್ಕನಾಯಕನಹಳ್ಳಿ)

ಮಾನ್ಯ ಸದಸ್ಯರಾದ ಶ್ರೀಮತಿ ಎನ್.ಜಿ.ಮಂಜುಳರವರು, ಪೋಚಕಟ್ಟೆತಾಂಡ್ಯ, ಹುಳಿಯಾರು ಗ್ರಾಮಗಳಲ್ಲಿ ನೀರಿಗೆ ಬಹಳಷ್ಟು ತೊಂದರೆಯಿರುವುದರಿಂದ ತುರ್ತಾಗಿ ಕೊಳವೆಬಾವಿ ಕೊರೆಸಿ ನೀರಿಗೆ ವ್ಯವಸ್ಥೆ ಮಾಡಿಕೊಡಬೇಕೆಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಅಧ್ಯಕ್ಷರು, ತುರ್ತಾಗಿ ಪಾಯಿಂಟ್ ಮಾಡಿ ಕೊಳವೆಬಾವಿ ಕೊರೆಸಿಕೊಡಲು ಅಗತ್ಯ ಕ್ರಮವಹಿಸುವಂತೆ AEEರವರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಮಮತಾ ಶಿವಲಿಂಗಯ್ಯನವರು, ಹಾಗಲ್ವಾಡಿ ಕ್ಷೇತ್ರ ವ್ಯಾಪ್ತಿಯ ರಂಗಾಪುರ ಗ್ರಾಮದಲ್ಲಿ ಒಂದೇ ಒಂದು ಕೊಳವೆಬಾವಿಯಲ್ಲಿ ಮಾತ್ರ ನೀರು ಇದೆ; ಇತರೆ ಗ್ರಾಮಗಳಿಗೆ ಯಾರೂ ಟ್ಯಾಂಕರ್ ನೀರು ಕೊಡುವುದಿಲ್ಲ; ಕೊಳವೆಬಾವಿಯಲ್ಲಿಯೂ ಕಳೆದ ಆರು ತಿಂಗಳುಗಳಿಂದ ನೀರು ನಿಂತು ಕುಡಿಯುವ ನೀರಿಗೆ ಬಹಳ ಸಮಸ್ಯೆಯಾಗಿದೆ ಎಂದು ಸಭೆಗೆ ತಿಳಿಸಿದರು. AEEರವರು, ರಂಗಾಪುರದಲ್ಲಿ ಸ್ಥಳೀಯ ಶಾಸಕರ ನಿರ್ದೇಶನದ ಮೇರೆಗೆ ಕೊಳವೆ ಬಾವಿ ಕೊರೆಯಲಾಗಿದೆ; ಪಂಪು-ಮೋಟಾರ್ ಅಳವಡಿಸಲು ಐ.ಎಂ.ಐ.ಎಸ್. ಅಡಿ ಅನುಮೋದನೆಯಾಗಿದೆ; ರೂ. 7.50 ಲಕ್ಷಕ್ಕೆ ಅಂದಾಜು ಸಲ್ಲಿಸಿ ಅನುಮೋದನೆ ಪಡೆದ ನಂತರ ಟೆಂಡರ್ ಪ್ರಕ್ರಿಯೆ

ನಡೆಸಿ, ನಂತರ ಕೆಲಸ ಮಾಡಿಸಿಕೊಡುವುದಾಗಿ ಭರವಸೆಯಿತ್ತರು; ಮಾನ್ಯ ಅಧ್ಯಕ್ಷರು, ಕೂಡಲೇ ಅಂದಾಜು ಅನುಮೋದನೆಗೆ ಸಲ್ಲಿಸಿ ಕೆಲಸ ಪ್ರಾರಂಭಿಸುವಂತೆ ತಿಳಿಸಿದರು.

(ಕ್ರಮ : ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು/ಮಧುಗಿರಿ)

ಮಾನ್ಯ ಅಧ್ಯಕ್ಷರು, AEE, EO, PDO, ತಹಶೀಲ್ದಾರ್ ಇವರುಗಳು ಕನಿಷ್ಠ ವಾರಕ್ಕೊಮ್ಮೆ ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರು, AEE, EO, PDO ಇವರುಗಳು ಕನಿಷ್ಠ 2-3 ದಿನಕ್ಕೊಮ್ಮೆ ಸಂಪರ್ಕದಲ್ಲಿದ್ದು ಸಮಸ್ಯೆಯನ್ನು ಗಮನಿಸಬೇಕು; ಮಳೆಯಾದರೆ ನೀರಿನ ಸಮಸ್ಯೆಯಾಗುವುದಿಲ್ಲ, ಇಲ್ಲವಾದರೆ ನೀರಿನ ಅಭಾವ ಸಾಕಷ್ಟು ಇರುತ್ತದೆ; ಇರುವ ನೀರಿನ ಬಳಕೆ ಮಾಡಿದರೆ ಸಮಸ್ಯೆಯಾಗುವುದಿಲ್ಲ; ಇಲ್ಲವಾದಲ್ಲಿ EO, PDO, ವಾಟರ್ ಮನ್ ಗಳ ಉಸ್ತುವಾರಿ ಕೊರತೆಯಿಂದಾಗಿ ನೀರಿನ ದುರ್ಬಳಕೆಯಾಗಿ ಸಮಸ್ಯೆ ಉಂಟಾಗುತ್ತದೆ; ಆದುದರಿಂದ NRDWP, MWS ಯೋಜನೆಗಳ ಕಾಮಗಾರಿಗಳಿಗೆ ಕ್ರಿಯಾ ಯೋಜನೆಯನ್ವಯ ದಿನಾಂಕ 22-08-2014ರೊಳಗೆ ಅಂದಾಜು ಸಿದ್ಧಪಡಿಸಿ ಕಾರ್ಯಾಪಾಲಕ ಇಂಜಿನಿಯರ್ ರವರಿಗೆ ಸಲ್ಲಿಸಬೇಕು; ಕಾರ್ಯಪಾಲಕ ಇಂಜಿನಿಯರ್ ಗಳು ಸದರಿ ಕ್ರಿಯಾ ಯೋಜನೆಯನ್ನು ದಿನಾಂಕ 25-08-2014ರೊಳಗೆ ಅನುಮೋದಿಸಬೇಕು; ದಿನಾಂಕ 30-08-2014ಕ್ಕೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಬೇಕು, ಈ ತಿಂಗಳ ಅಂತ್ಯಕ್ಕೆ ಈ ಎಲ್ಲ ಪ್ರಕ್ರಿಯೆಗಳು ಕಡ್ಡಾಯವಾಗಿ ಪೂರ್ಣಗೊಳ್ಳಬೇಕು;ಶಾಲೆ ಮತ್ತು ಅಂಗನವಾಡಿಗಳಿಗೆ ಕುಡಿಯುವ ನೀರು/PWS/MWS/Revival ಕಾಮಗಾರಿಗಳಿಗೆ 15-09-2014ರೊಳಗೆ ಕಾರ್ಯಾದೇಶ ನೀಡಬೇಕು; ರೂ. 5.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ ದಿನಾಂಕ 30-09-2014ರೊಳಗೆ ಕಾರ್ಯಾದೇಶ ನೀಡಬೇಕು; 2013-14ನೇ ಸಾಲಿನ ಮುಂದುವರಿದ ಕಾಮಗಾರಿಗಳನ್ನು ದಿನಾಂಕ 15-09-2014ರೊಳಗೆ ಪೂರ್ಣಗೊಳಿಸ ಬೇಕು; 110 ಮೇಲುತೊಟ್ಟಿಗಳ ಕಾಮಗಾರಿ ಅಪೂರ್ಣವಾಗಿದ್ದು, ಈ ಪೈಕಿ 50% ನ್ನು 30-09-2014ರೊಳಗೆ ಪೂರ್ಣಗೊಳಿಸಬೇಕು, ಇಲ್ಲವಾದರೆ ಸಂಬಂಧಪಟ್ಟ EE.,/AEE.,/PDO/Tahsildarಗಳು ಸಮನ್ವಯದಿಂದ (Co-ordination) ಕೆಲಸ ಮಾಡಬೇಕು, ಇಲ್ಲವಾದಲ್ಲಿ ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್ಗಳ ವಿರುದ್ಧ ಶಿಸ್ತು ಕ್ರಮವಹಿಸಲಾಗುವುದು; ಆದುದರಿಂದ ಇರುವ ನೀರನ್ನು ಉಸ್ತುವಾರಿ ಮಾಡಿ ಜನರಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕು; ಯೋಜನೆಯನ್ನು ಸಮರ್ಪಕವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಎಚ್ಚರಿಸಿದರು.

(ಕ್ರಮ : ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು/ಮಧುಗಿರಿ)

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಕೊಳವೆಬಾವಿಗಳ ದುರಸ್ತಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಯಡಿ ಸ್ವಲ್ಪಮಟ್ಟಿನ ಅನುದಾನವನ್ನು ಮುಂಗಡವಾಗಿ ಕಾಯ್ದಿರಿಸಬೇಕು; ಟ್ಯಾಂಕರ್ ಮೂಲಕ ನೀರು ಪೂರೈಕೆಯ ಬಿಲ್ ಬಾಬ್ತು ಹಣವನ್ನು ಜಿಲ್ಲಾಧಿಕಾರಿಯವರು ನೇರವಾಗಿ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಬಿಡುಗಡೆ ಮಾಡುವಂತಾಗಬೇಕು ಎಂದು ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು, ಪ್ರತಿ ಕೊಳವೆಬಾವಿಗೆ ರೂ.1,000/- ನೀಡುವುದಾಗಿ ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ಹೇಳಿರುವುದಾಗಿ ಸಭೆಗೆ ತಿಳಿಸಿದರು. ಪ್ರತಿಯಾಗಿ ಮಾನ್ಯ ಸದಸ್ಯರು, ಅಗತ್ಯತೆ ಇರುವಷ್ಟು ಮಾತ್ರ ಕೊಡಬೇಕು; ಪ್ರತಿ ಕೊಳವೆಬಾವಿಗೆ ಎಂದರೆ ಕೆಲವೆಡೆ ಅಗತ್ಯವಿಲ್ಲದಿದ್ದರೂ ಸಹ ಪಿ.ಡಿ.ಓ., ಗಳು ಕೇಬಲ್ ಗೋ,

ಇನ್ನೊಂದಕ್ಕೋ, ಮತ್ತೊಂದಕ್ಕೋ ಎಂದು ಎಲ್ಲ ಹಣವನ್ನೂ ಖರ್ಚುಮಾಡಿಬಿಡುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು, PWS/MWS ಯೋಜನೆಗಳ ನಿರ್ವಹಣೆಗೆ ಕೇಂದ್ರ ಸರ್ಕಾರ ಮುಂಗಡ ಇಟ್ಟಿದೆ; ಅದೇ ರೀತಿ ರಾಜ್ಯ ಸರ್ಕಾರ ಕೊಳವೆಬಾವಿಗಳ ನಿರ್ವಹಣೆಗೆ ಮುಂಗಡ ಇಟ್ಟಿದೆ; ಮೊದಲು ಪ್ರತಿ ಕೊಳವೆಬಾವಿ ನಿರ್ವಹಣೆಗೆ ರೂ.600/-ನಿಗಧಿಯಾಗಿತ್ತು; ಈಗ ಅದನ್ನು ರೂ. 1,000/- ಮಾಡಿದ್ದಾರೆ; ಅನಿವಾರ್ಯ ಅಗತ್ಯತೆಯಿದೆ; ಯಾವುದೇ ಒಂದು ಗ್ರಾಮ ಪಂಚಾಯಿತಿಯಲ್ಲಿ 15 ಕೊಳವೆಬಾವಿ ಗಳು ಕಾರ್ಯನಿರ್ವಹಿಸುತ್ತಿದ್ದರೆ ನಿರ್ವಹಣೆಗಾಗಿ ಪ್ರತ್ಯೇಕ ಖಾತೆಯ ಮೂಲಕ ಆ ಗ್ರಾಮ ಪಂಚಾಯಿತಿಗೆ ರೂ. 15,000/- ಕೊಡುತ್ತಾರೆ; ಆ ಗ್ರಾಮ ಪಂಚಾಯಿತಿಗೆ ಅಷ್ಟು ಮೊತ್ತದ ಅವಶ್ಯಕತೆ ಇರಬಹುದು ಅಥವಾ ಇಲ್ಲದಿರಬಹುದು, ಸದರಿ ರೂ. 15,000/- ಮೊತ್ತವನ್ನು 4-6 ಕೊಳವೆಬಾವಿಗಳ ನಿರ್ವಹಣೆಗೆ ಬಳಸಬಹುದು ಆದರೆ ಕಛೇರಿ ಪೀಠೋಪಕರಣಗಳಿಗೆ (ಟೇಬಲ್, ಚೇರ್ ಇತ್ಯಾದಿ) ಬಳಸದಂತೆ ಸೂಚನೆ ನೀಡಿದ್ದಾರೆ; ಪೂರಕವಾಗಿ ಮಾನ್ಯ ಸದಸ್ಯರಾದ ಶ್ರೀ ಜಗದೀಶ್ ರವರು, ನಿರ್ವಹಣಾ ಅನುದಾನವನ್ನು ಕೊಳವೆಬಾವಿಗಳ ನಿರ್ವಹಣೆಗೆ ಹೊರತುಪಡಿಸಿ ಮೋಟಾರ್ ನಿರ್ವಹಣೆಗೆ ಬಳಸಬಾರದು ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು MWS ಯೋಜನೆಯಡಿ ನಿರ್ವಹಣಾ ಅನುದಾನವನ್ನು ಮೋಟಾರ್ ನಿರ್ವಹಣೆಗೆ ಬಳಸಬಹುದು, ಆದರೆ ಕೊಳವೆಬಾವಿ ನಿರ್ವಹಣಾ ಅನುದಾನದಲ್ಲಿ ಮೋಟಾರ್ ನಿರ್ವಹಣೆಗೆ ಅವಕಾಶವಿಲ್ಲ ಎಂದು ಸಭೆಗೆ ಸ್ಪಷ್ಟಪಡಿಸಿದರು.

ಮಾನ್ಯ ಉಪಾಧ್ಯಕ್ಷರು, ಪಾವಗಡ ಟೌನ್ ನಲ್ಲಿ ಟ್ಯಾಂಕರ್ ನೀರು ಸರಬರಾಜು ಬಿಲ್ ರೂ. 3.50ಲಕ್ಷ ಪಾವತಿಸಿರುವುದಿಲ್ಲ; ಹಾಸ್ಟೆಲ್ ಗಳು, ಸರ್ಕಾರಿ ಆಸ್ಪತ್ರೆಗಳಿಗೆ ನೀರು ಬೇಕು ಬಿಲ್ ಪಾವತಿಯಾಗ ದಿರುವುದರಿಂದ ನೀರಿಗೆ ತೊಂದರೆಯಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಕಂದಾಯ ಇಲಾಖೆಯ ಪರವಾಗಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಯವರು, ಪಾವಗಡ ತಾಲ್ಲೂಕಿನದು ಮಾತ್ರ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಕೊಟ್ಟು, ಉಳಿದ ತಾಲ್ಲೂಕುಗಳ ಹಣವನ್ನು ತಹಶೀಲ್ದಾರ್ ರವರಿಗೆ ಕೊಡಬೇಕು ಎಂದು ಮಾನ್ಯ ಜಿಲ್ಲಾಧಿಕಾರಿಯವರ ಸಭೆಯಲ್ಲಿ ತೀರ್ಮಾನವಾಗಿದ್ದಂತೆ ಪಾವಗಡ ತಾಲ್ಲೂಕಿಗೆ ನೀಡಿರುವ ಹಣ ರೂ.2.00 ಲಕ್ಷ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರ ಬಳಿ ಇದೆ; ನೀರು ಸರಬರಾಜುದಾರರು ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಕೇಳಿ ಹಣ ಪಡೆಯಬೇಕು ಎಂದು ತಿಳಿಸಿದರು. ಪ್ರತಿಯಾಗಿ ಮಾನ್ಯ ಉಪಾಧ್ಯಕ್ಷರು, ಇದು ಟೌನ್ ವ್ಯಾಪ್ತಿಯಾಗಿರುವುದರಿಂದ ಕಾರ್ಯ ನಿರ್ವಾಹಕ ಅಧಿಕಾರಿಯವರು ನೇರವಾಗಿ ಕೊಡಲು ಬರುವುದಿಲ್ಲ ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರಿಂದ ಪತ್ರ ತಂದಲ್ಲಿ ಪಾವತಿ ಮಾಡಬಹುದು ಎಂದು ತಿಳಿಸಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಟೌನ್ ವ್ಯಾಪ್ತಿಯ ಬಿಲ್ ಗಳನ್ನು ನಗರಸಭೆಯ ಮುಖ್ಯಾಧಿಕಾರಿಯವರಿಗೆ ಸಲ್ಲಿಸುವಂತೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಮೇಲುತೊಟ್ಟಿ ನಿರ್ಮಾಣ ಕಾಮಗಾರಿಯ ಗುತ್ತಿಗೆ ಪಡೆದಿರುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವುದಾಗಿ ತಿಳಿಸಿ/ಎಚ್ಚರಿಸಿ ಅವರುಗಳಿಂದ ಕೆಲಸ ಪ್ರಾರಂಭ ಮಾಡಿಸಿ ಎಂದ ಮಾತಿಗೆ ಸದಸ್ಯರಾದ ಶ್ರೀ ಕೃಷ್ಣಮೂರ್ತಿಯವರು, ಸದರಿ ಕಾಮಗಾರಿಗಳನ್ನು ಭೂ ಸೇನಾ ನಿಗಮಕ್ಕೆ ವಹಿಸುವಂತೆ ತಿಳಿಸಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, 2012-13ನೇ ಸಾಲಿನಲ್ಲಿ ಮಂಜೂರಾಗಿ, ಈ ವರೆಗೆ

ಬಾಕಿ ಇರುವ 110 ಮೇಲುತೊಟ್ಟಿ ಕಾಮಗಾರಿಗಳ ಸಂಬಂಧ, ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು/ಮಧುಗಿರಿ ಇವರುಗಳು ಸಂಬಂಧಪಟ್ಟ ಗುತ್ತಿಗೆದಾರರನ್ನು ಕರೆಸಿ ಕೆಲಸ ಮಾಡಿಸಬೇಕು ಹಾಗೂ ದಿನಾಂಕ 25-08-2014ರೊಳಗೆ ತೆರೆದ ಕೊಳವೆಬಾವಿಗಳನ್ನು ಮುಚ್ಚಿಸುವ ಕೆಲಸ ಆಗಬೇಕು; ಗ್ರಾಮ ಪಂಚಾಯಿತಿಗಳಲ್ಲಿ ಪಿ.ಡಿ.ಓ.ಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ ಸೂಕ್ತ ಸೂಚನೆ ನೀಡಬೇಕು ಎಂದು ಸಭೆಗೆ ತಿಳಿಸಿದ್ದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

(ಕ್ರಮ : ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು/ಮಧುಗಿರಿ)

ವಿಷಯ ಸೂಚಿ 02 :- ಬರಗಾಲದ ಈ ಪರಿಸ್ಥಿತಿಯಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತೀವ್ರ ಅಭಾವ ಪರಿಸ್ಥಿತಿ ಎದುರಿಸುತ್ತಿರುವುದರಿಂದ ಕುಡಿಯುವ ನೀರಿನ ಸರಬರಾಜುಗಾಗಿ ಇರುವ ಹೇಮಾವತಿ ಯೋಜನೆ ನೀರನ್ನು ಜಿಲ್ಲೆಗೆ ಬೇಗ ಒದಗಿಸಲು ಜಿಲ್ಲಾಡಳಿತವನ್ನು ಮತ್ತು ಇಲಾಖೆಯನ್ನು ಕೋರುವ ವಿಚಾರ.

ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮ ಮಹಲಿಂಗಪ್ಪನವರು, ಕೊರಟಗೆರೆ ತಾಲ್ಲೂಕಿನಲ್ಲಿ ನೀರಿನ ಸಮಸ್ಯೆಯಿದೆ; ನೀರು ಸರಬರಾಜುದಾರರಿಗೆ ಹಣ ಪಾವತಿಸುವ ಜವಾಬ್ದಾರಿಯನ್ನು ತಾಲ್ಲೂಕು ತಹಶೀಲ್ದಾರ್ ರವರಿಗೆ ವಹಿಸಿರುವುದರಿಂದ ಈ ರೀತಿ ಸಮಸ್ಯೆಯಾಗಿದೆ, ಈ ಜವಾಬ್ದಾರಿಯನನು ಪಿ.ಡಿ.ಓ.ಗಳಿಗೆ ವಹಿಸಿದರೆ ಅನುಕೂಲವಾಗುತ್ತದೆ; ಆದುದರಿಂದ ತಹಶೀಲ್ದಾರ್ ಕಡೆಯಿಂದ ಪಿ.ಡಿ.ಓ.ಗಳಿಗೆ ಹಣ ಬಿಡುಗಡೆ ಮಾಡಿಸಿದರೆ ಅನುಕೂಲವಾಗುತ್ತದೆ; ಆ ಭಾಗಕ್ಕೆ ಹೇಮಾವತಿ ನೀರು ಬರುತ್ತಿಲ್ಲ; ಪ್ರತಿಬಾರಿ ಹೇಮಾವತಿ ನೀರು ಬಿಡುವ ವೇಳೆಗೆ ನಾಲೆ ಒಡೆದು ಹೋಗುತ್ತದೆ; ಇನ್ನು ಒಂದು ವಾರದಲ್ಲಿ ನೀರು ಹರಿಸದಿದ್ದಲ್ಲಿ ಜಿಲ್ಲಾಧಿಕಾರಿಯವರ ಕಛೇರಿ ಮುಂದೆ ಧರಣಿ ಮಾಡಬೇಕಾಗುತ್ತದೆ; ತುಮಕೂರು ನಗರ ಸ್ಮಾರ್ಟ್ ಸಿಟಿ ಆಗುತ್ತಿರುವುದರಿಂದ ಹೇಮಾವತಿ ನೀರಿಗೆ ಅನುಕೂಲ ಮಾಡಿಕೊಟ್ಟಲ್ಲಿ ಸುತ್ತ-ಮುತ್ತಲ ಗ್ರಾಮಗಳಿಗೂ ಅನುಕೂಲವಾಗುತ್ತದೆ ಎಂದು ಆಶಯ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಿಣಿಯವರು, ಜಿಲ್ಲೆಯೇ ಬರಗಾಲಕ್ಕೆ ತುತ್ತಾಗಿದೆ; ಟ್ಯಾಂಕರ್ ನೀರಿಗೆ ಹಣ ನೀಡಲು ಬರಗಾಲದಿಂದ ಕರ ವಸೂಲಿಯಾಗಿಲ್ಲ ಎಂದು ಹೇಳುತ್ತಾರೆ; ಕೊಳವೆಬಾವಿ ಕೊರೆದ ಬಾಬ್ತು ಸಮಯಕ್ಕೆ ಸರಿಯಾಗಿ ಹಣ ಪಾವತಿಸಬೇಕು; ಇನ್ನು ಹೇಮಾವತಿ ನೀರು ಹರಿಸುವ ಸಂಬಂಧ ಚಾನಲ್ ಗಳಲ್ಲಿ ತೆಂಡೆ ಬೆಳೆದುಕೊಂಡಿರುದರಿಂದ ನೀರು ಫೋರ್ಸಾಗಿ ಬಿಟ್ಟಾಗ ಏರಿ ಒಡೆಯುತ್ತದೆ; ಆದುದರಿಂದ ಚಾನಲ್ ಕ್ಲೀನ್ ಮಾಡಿಸಲು ಕ್ರಮವಹಿಸಬೇಕು; ಇದರಿಂದ ಬೆಳೆಗೆ ಕಾಲ ಮೀರಿದೆಯಾದರೂ ಕುಡಿಯುವ ನೀರನ್ನಾದರೂ ಹರಿಸಿ, ನಮ್ಮ ಭಾಗದ ಕೊಳವೆಬಾವಿಗಳು ರಿ-ಚಾರ್ಜ್ ಆಗುತ್ತವೆ ಎಂದರು.

ಮಾನ್ಯ ಸದಸ್ಯರಾದ ಶ್ರೀಮತಿ ಗೌರಮ್ಮನವರು, ಹೇಮಾವತಿ ನೀರು ಪೋಲಾಗುತ್ತಿದೆ; ಈ ವರ್ಷ ಈ ಭಾಗಕ್ಕೆ (ಜಿಲ್ಲೆಗೆ) ಹೇಮಾವತಿ ನೀರು ಬಿಡದಿದ್ದರೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಸಭೆಗೆ ತಿಳಿಸಿದರು. ಪೂರಕವಾಗಿ ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬುರವರು, ಈ ಕಾರಣದಿಂದಾಗಿ ಈ ದಿನ ಗುಬ್ಬಿ ಬಂದ್ ನಡೆಸಲಾಯಿತು; ಈ ಹಿನ್ನೆಲೆಯಲ್ಲಿ ದಿನಾಂಕ 14-08-2014ರಂದು ಸಂಜೆ 6.00 ಗಂಟೆಗೆ ನೀರು ಬಿಡುವುದಾಗಿಯೂ ಅದು ದಿನಾಂಕ 18-08-2014ರಂದು ಗುಬ್ಬಿ ತಲುಪುತ್ತದೆ ಎಂದೂಅಧಿಕಾರಿಗಳು ತಿಳಿಸಿರು ತ್ತಾರೆ; ಗುಬ್ಬಿ ತಾಲ್ಲೂಕಿನ ಕಡಬ, ಕಲ್ಲೂರು, ಸಿ.ಎಸ್.ಪುರ, ಚೇಳೂರು ಗ್ರಾಮಗಳಿಗೆ ಕುಡಿಯುವ ನೀರಿಲ್ಲ; ತುರುವೇಕೆರೆ ಮತ್ತು ಶಿರಾ ತಾಲ್ಲೂಕುಗಳಿಗೆ ಬಿಟ್ಟು, ಗೇಟ್ಸ್ ಇವತ್ತು ತೆರೆಯುವುದಾಗಿ ಅಧಿಕಾರಿಗಳು ಹೇಳಿದರು

ಎಂದು ತಿಳಿಸಿ, ಹೀಗಿದ್ದೂ ಮತ್ತೇನಾದರೂ ಅಚಾತುರ್ಯ ನಡೆದರೆ ಹೇಮಾವತಿ ಅಚ್ಚುಕಟ್ಟಿನ ಎಲ್ಲರೂ ಮಾನ್ಯ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಮುಂದೆ ಬರುವುದಾಗಿ ತಿಳಿಸಿದರು. ನಂತರ, ಪ್ರತಿ ವರ್ಷ ಒಂದೇ ಜಾಗದಲ್ಲಿ ಏರಿ ಒಡೆಯುತ್ತಿದೆ, ಏಕೆ ಈ ಕುರಿತು ಯಾರೂ ಕೇಳುವುದಿಲ್ಲ ಎಂದು ಪ್ರಶ್ನಿಸಿದರಲ್ಲದೆ, ಜನರಲ್ಲಿ ಅರಿವು ಮೂಡಿಸಬೇಕು ಎಲ್ಲರೂ ಒಟ್ಟಾಗಿ ನೀರಿಗೆ ಒತ್ತಾಯಿಸಬೇಕು ಎಂದರು.

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್. ಕೃಷ್ಣಪ್ಪನವರು, ರೂ. 12.50 ಕೋಟಿ ಅಂದಾಜಿನಲ್ಲಿ 2010-11ನೇ ಸಾಲಿಗೆ ಸಿ.ಎಸ್.ಪುರ ಗ್ರಾಮಕ್ಕೆ ಮಂಜೂರಾಗಿದ್ದ ರಾಜೀವ್ ಗಾಂಧಿ ಕುಡಿಯುವ ನೀರಿನ (ಸಬ್ ಮಿಷನ್) ಯೋಜನೆ ಕಾಮಗಾರಿಯು ಪೂರ್ಣಗೊಂಡಿದ್ದು, ಪಂ.ರಾ.ಇಂ.ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಮತ್ತು ಹೇಮಾವತಿ ನಾಲಾ ಯೋಜನೆಯ ಅಧಿಕಾರಿಗಳು ಪರಸ್ಪರ ಸಮಾಲೋಚಿಸಿಕೊಂಡು ಸಿ.ಎಸ್.ಪುರ ಕೆರೆಗೆ ತ್ವರಿತವಾಗಿ ನೀರು ಹರಿಸಿದರೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರತಿಯಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪವಿಭಾಗ, ಗುಬ್ಬಿ ಇವರು, ಸಿವಿಲ್ ಕಾಮಗಾರಿ ಮುಗಿದಿದೆ, ಹೇಮಾವತಿ ನೀರು ಬರಬೇಕು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಜಿಲ್ಲಾಡಳಿತ ಮತ್ತು ಹೇಮಾವತಿ ವಿಚಾರವಾಗಿ ತುಮಕೂರು ನಾಲೆ ವ್ಯಾಪ್ತಿಯಲ್ಲಿ 85,428ಎಕರೆ ಮತ್ತು ಬಾಗೂರು ಏತ ನೀರಾವರಿ ವ್ಯಾಪ್ತಿಯಲ್ಲಿ 62,115 ಎಕರೆ ಸೇರಿ NBC ಅಡಿ ಸುಮಾರು 1,51,000 ಎಕರೆ ಹೇಮಾವತಿ ಅಚ್ಚುಕಟ್ಟು ವ್ಯಾಪ್ತಿಗೆ ಬರುತ್ತದೆ; ಪ್ರಸ್ತುತ 2.75ಲಕ್ಷ ಎಕರೆ ಪ್ರದೇಶ ಹೆಚ್ಚಾಗಿದೆ; ಇದಕ್ಕೆ 10.109 ಟಿ.ಎಂ.ಸಿ. ನೀರು ಬೇಕಾಗುತ್ತದೆ; ಕುಡಿಯುವ ನೀರಿಗೆ ತುಮಕೂರು, ಮಧುಗಿರಿ, ಶಿರಾ, ಕಳ್ಳಂಬೆಳ್ಳ, ವ್ಯಾಪ್ತಿಗೆ ಒಂದು ವರ್ಷಕ್ಕೆ 4.47 ಟಿ.ಎಂ.ಸಿ. ನೀರು ಬೇಕು; ಹಾಗೆಯೇ, ಕುಣಿಗಲ್ ನ ಮಂಗಳ ಮತ್ತು ಮಾರ್ಕೋನಹಳ್ಳಿ ಜಲಾಶಯಗಳಿಗೆ 3.03 ಟಿ.ಎಂ.ಸಿ. ನೀರು ಬೇಕು; ತುಮಕೂರು ನಾಲಾ ವಲಯದಡಿ 145 ಕೆರೆಗಳು ಇದ್ದು ಈಗ 250 ಕೆರೆಗಳು ಭರ್ತಿಯಾಗಿವೆ; ಇನ್ನೂ 6.3 ಟಿ.ಎಂ.ಸಿ ನೀರು ಬೇಕು ಎಂದು ತಿಳಿಸಿದ್ದಾರೆ; ಒಟ್ಟು (ತುಮಕೂರು ಮತ್ತು ಮಧುಗಿರಿ ವಿಭಾಗ ಸೇರಿ) 24.89 ಟಿ.ಎಂ.ಸಿ. ನೀರು ಬೇಕು; ಅಚ್ಚುಕಟ್ಟು ಹೆಚ್ಚು ಮಾಡುವವರಿಗೆ ನೀರು ಜಾಸ್ತಿ ಬೇಕಾಗುತ್ತದೆ ಎಂದು ಸರ್ಕಾರದ ಆದೇಶವಿದೆ; ಈ 24.89 ಟಿ.ಎಂ.ಸಿ. ನೀರನ್ನು ನೀಡಬೇಕು; 1996-97ರಲ್ಲಿ ಕೇವಲ 8.17 ಟಿ.ಎಂ.ಸಿ.ನೀರಿನ ಅಗತ್ಯವಿತ್ತು; ಆದರೆ ವರ್ಷದಿಂದ ವರ್ಷಕ್ಕೆ ಅಚ್ಚುಕಟ್ಟು ವ್ಯಾಪ್ತಿ ಹೆಚ್ಚಿರುವ ಮೇರೆಗೆ 2013-14ರಲ್ಲಿ 21 ಟಿ.ಎಂ.ಸಿ. ನೀರು ಸೆಳೆದಿದ್ದೇವೆ; ಈ ದಿನ ಹೇಮಾವತಿ ನೀರಿನ ಬಗ್ಗೆ ಎಲ್ಲರೂ ಆಸಕ್ತಿಯಿಂದ ಬೆಳಕು ಚೆಲ್ಲಿದ್ದಾರೆ; ಆದುದರಿಂದ ಈ ಬಗ್ಗೆ ಆರೋಪ ಪ್ರತ್ಯಾರೋಪ ಬೇಡ, 35 ವರ್ಷಗಳಷ್ಟು ಹಳೆಯದಾದ ನಾಲೆಗಳಿಗೆ ಹೇಮಾವತಿ ನಾಲಾ ಯೋಜನೆಯ ನಾಲಾ ನಿರ್ವಹಣಾ ಅನುದಾನದಲ್ಲಿ ರೂ. 2.00 ಕೋಟಿ ಅನುದಾನ ನೀಡುತ್ತಾರೆ, ಅದು ನಾಲಾ cleaningಗೆ ಸಾಕಾಗುವುದಿಲ್ಲ; ಆದುದರಿಂದ ನಾಲಾ ಆಧುನೀಕರಣ ಮತ್ತು ಅಗಲೀಕರಣ ಆಗದ ಹೊರತು ಜಿಲ್ಲೆಗೆ ನಿಗದಿತ ಪ್ರಮಾಣದಲ್ಲಿ ನೀರು ಪೂರೈಸಲು ಸಾಧ್ಯವಾಗುವುದಿಲ್ಲ; ನಾಲಾ ಸಾಮರ್ಥ್ಯವನ್ನು ಹೆಚ್ಚಿಸಬೇಕು(1500 ಕ್ಯೂಸೆಕ್ಸ್ ನಿಂದ 4000 ಕ್ಯೂಸೆಕ್ಸ್ ವರೆಗೆ); ಆಗ ಜಿಲ್ಲೆಗೆ ಬೇಕಾದ 24.89 ಟಿ.ಎಂ.ಸಿ. ನೀರು ಪೂರೈಸಲು ಸಾಧ್ಯವಾಗುತ್ತದೆ; ಈ ನಿಟ್ಟಿನಲ್ಲಿ ಸರ್ಕಾರವನ್ನು ಎಚ್ಚರಿಸುವ ರೀತಿಯಲ್ಲಿ ಜಿಲ್ಲಾ ಪಂಚಾಯತ್ ನ ಎಲ್ಲಾ 57 ಮಂದಿ ಮಾನ್ಯ ಸದಸ್ಯರುಗಳು ಕಂಕಣಬದ್ಧರಾಗಿ ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಸಭೆಯಲ್ಲಿ ಠರಾವು ಹೊರಡಿಸುವಂತೆ ಕೋರಿದರು.

ಮಾನ್ಯ ಅಧ್ಯಕ್ಷರು, ಹೇಮಾವತಿ ನೀರಿನ ಅಗತ್ಯತೆ/ಬಳಕೆಯ ಕುರಿತು ಮಾನ್ಯ ಸದಸ್ಯರಾದ ಶ್ರೀ ಸಿ.ಆರ್. ಉಮೇಶ್ ರವರು ಆಮೂಲಾಗ್ರವಾಗಿ ಸಭೆಗೆ ವಿವರಿಸಿದ್ದಕ್ಕಾಗಿ ಸಭೆಯ ಪರವಾಗಿ ಅವರಿಗೆ ಅಭಿನಂದನೆಗಳನ್ನು ತಿಳಿಸಿದರು. ನಂತರ, ನೀರಿನ ವಿಷಯದಲ್ಲಿ ತಾರತಮ್ಯ ಮಾಡಿದರೆ ನೀರು ಪಡೆಯಲು ವಿಫಲವಾದರೆ ತೊಂದರೆಯಾಗುತ್ತದೆ ಎಂದು ತಿಳಿಸಿದರು; ನಂತರ,ಸಿ.ಎಸ್.ಪುರ ಕೆರೆಗೆ ನೀರು ಹರಿಸುವ ಕುರಿತು AEEರವರನ್ನು ವಿಚಾರಿಸಲಾಗಿ AEEರವರು, ಸಾಲು ಕೆರೆಗಳು ತುಂಬಿದ ನಂತರ ಸಿ.ಎಸ್.ಪುರ ಕೆರೆಗೆ ನೀರು ಬರಬೇಕಾಗಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು, ಚಿ.ನಾ.ಹಳ್ಳಿ ತಾಲ್ಲೂಕಿನ ಮಾಜಿ ಮತ್ತು ಹಾಲಿ ಶಾಸಕರುಗಳೊಂದಿಗೆ ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ, ತುಮಕೂರು ಜಿಲ್ಲೆಗೆ ಅಗತ್ಯ ಪ್ರಮಾಣದಲ್ಲಿ ನೀರು ಕೊಡುವುದಾಗಿ ಅವರು ಭರವಸೆ ನೀಡಿರುತ್ತಾರೆ; ಆದುದರಿಂದ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಡಬೇಕು ಎಂದು ಸಭೆಗೆ ತಿಳಿಸಿದರು. ಪೂರಕವಾಗಿ ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ನಾಲಾ ವಿಭಾಗ ಹೆಬ್ಬೂರು ಇವರು, ಒಟ್ಟಾರೆ 43.67 ಟಿ.ಎಂ.ಸಿ. ನೀರು ಹಂಚಿಕೆಯಾಗಿದೆ; ತುಮಕೂರು ಜಿಲ್ಲೆಗೆ 24.817 ಟಿ.ಎಂ.ಸಿ. ನೀರು ಬರಬೇಕು; ಈ ವರೆಗೆ ಅಷ್ಟು ಪ್ರಮಾಣದ ನೀರನ್ನು ಪಡೆಯಲು ಸಾಧ್ಯವಾಗಿಲ್ಲ; ವರ್ಷವಾರು ಪ್ರಮಾಣವನ್ನು ಮಾನ್ಯ ಸದಸ್ಯರು ಈಗಾಗಲೇ ತಿಳಿಸಿದ್ದಾರೆ; 1996ರಲ್ಲಿ ಬುಗುಡನ ಹಳ್ಳಿ ಕೆರೆಗೆ ನೀರು ಬಂತು; ನಂತರ ಅಲ್ಲಿಂದ 2002ರಲ್ಲಿ ಕುಣಿಗಲ್ ದೊಡ್ಡ ಕೆರೆಗೆ ಹರಿದು 2010-11ರ ವರೆಗೆ ನೀರಿನ ಸಮಸ್ಯೆ ಇರುವುದಿಲ್ಲ; ಕುಣಿಗಲ್ ದೊಡ್ಡ ಕೆರೆಯಿಂದ ಮಂಗಳಾ ಜಲಾಶಯಕ್ಕೆ ನೀರು ಹರಿಸಿದ್ದೇವೆ; 2011-12ನೇ ಸಾಲನ್ನು ಹೊರತುಪಡಿಸಿ ಕಳೆದ ಎರಡು ವರ್ಷಗಳಿಂದ ಅಗತ್ಯ ನೀರು ಹರಿಯದೆ ತೊಂದರೆಯಾಗಿದೆ; ಪ್ರಸ್ತುತ ನಾಲಾ ಸಾಮರ್ಥ್ಯ 2400 ಕ್ಯೂಸೆಕ್ಸ್ ಇದೆ; ಹೇಮಾವತಿ ಜಲಾಶಯದಿಂದ 0-72 ಕಿ.ಮೀ. ವರೆಗಿನ ನಾಲೆಗೆ ನೀರು ಹರಿಯುತ್ತದೆ; ನಂತರ ಕೆ.ಆರ್.ಪೇಟೆಯಿಂದ ತುಮಕೂರು ಕಡೆಗೆ ನೀರು ಹರಿಯಬೇಕು; ಬಾಗೂರು ನವಿಲೆ ಸುರಂಗದಿಂದ 72ಕಿ.ಮೀ.ವರೆಗೆ 21 ಕಿ.ಮೀ.ವರೆಗೆ ನೀರು ಹರಿದ ನಂತರ ತುಮಕೂರು, ಕುಣಿಗಲ್ ಕೊನೆಯ ಭಾಗ 240 ಕಿ.ಮೀ.ವರೆಗೆ ನೀರು ಹರಿಯಬೇಕು; ಎರಡನೆ ಹಂತದಲ್ಲಿ 0-72 ಕಿ.ಮೀ.ನಿಂದ ಮುಂದೆ ಅಗತ್ಯ ಡಿಸೈನ್ ಗೆ ಎಕ್ಸಿಕ್ಯೂಷನ್ ಆಗಿದೆ; 0-72 ಕಿ.ಮೀ.ನಲ್ಲಿ ಒಟ್ಟು 3600(ತುಮಕೂರು 2400 + ಎನ್.ಬಿ.ಸಿ. 1200) ಕ್ಯೂಸೆಕ್ಸ್ ನೀರು ಹರಿವಿನ ಸಾಮರ್ಥ್ಯ ಆಗಬೇಕು; ತುಮಕೂರು ಜಿಲ್ಲೆಗೆ ಗರಿಷ್ಟ 2400 ಕ್ಯೂಸೆಕ್ಸ್ ನೀರು ಬೇಕು; ಆದರೆ ಈ ವರೆಗೆ 180 ಕ್ಯೂಸೆಕ್ಸ್ ನೀರು ಪಡೆಯಲು ಮಾತ್ರ ಸಾಧ್ಯವಾಗಿದೆ; ಆದುದರಿಂದ 3500 ಕ್ಯೂಸೆಕ್ಸ್ ನೀರು ಹರಿಸಲು ರೂ. 535.00 ಲಕ್ಷ ಅನುದಾನದಲ್ಲಿ 0-72 ಕಿ.ಮೀ. ನಾಲೆಯ ಆಧುನೀಕರಣ ಆಗಲೇಬೇಕಾಗಿದೆ; ನೀರಿನ ಮಟ್ಟ ಒಂದು ಮೀಟರ್ ವರೆಗೆ ಪೂರ್ಣ ಹರಿಸಿದಾಗ ಮಾತ್ರ ಅಗತ್ಯ ಪ್ರಮಾಣದ ನೀರು ಹರಿಸಲು ಸಾಧ್ಯವಾಗುತ್ತದೆ ಎಂದು ಸಭೆಗೆ ವಿವರವಾಗಿ ತಿಳಿಸಿದರಲ್ಲದೆ ಇನ್ನು ತುಮಕೂರು ಜಿಲ್ಲೆಯಲ್ಲಿ ಹೊಸ ಕಾಮಗಾರಿಯ ಯಾವುದೇ ಏರಿ ಒಡೆದಿದೆ ಎಂದು ದೂರು ಬಂದಿಲ್ಲ, ಹಾಗೂ ಇಂತಹುದೇ ಕಾರಣಕ್ಕೆ ಏರಿ ಒಡೆದಿದೆ ಎಂದು ಹೇಳಲು ಬರುವುದಿಲ್ಲ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಅಧಿಕಾರಿಗಳು ಹೇಮಾವತಿ ನೀರು ಹಂಚಿಕೆಯಲ್ಲಿ ತಾರತಮ್ಯ ಮಾಡದೆ ನೀರನ್ನು ಸದ್ಬಳಕೆ ಮಾಡಬೇಕು ಎಂದು ಸಲಹೆಯಿತ್ತರು. ಪ್ರತಿಯಾಗಿ ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ನಾಲಾ ವಿಭಾಗ ಹೆಬ್ಬೂರು ಇವರು, 24.817 ಟಿ.ಎಂ.ಸಿ. ನೀರಿನ ಪೂರ್ಣ

ಬೇಡಿಕೆಯನ್ನು ನೀರಾವರಿ ಸಲಹಾ ಸಮಿತಿಯ ಮುಂದೆ ಇಡಲಾಗಿದೆ; ಅಚ್ಚುಕಟ್ಟು ವ್ಯಾಪ್ತಿಯನ್ನು ಈ ವರೆಗೆ ಗೆಜೆಟ್ ನಲ್ಲಿ ಪ್ರಕಟಿಸಿರಲಿಲ್ಲ, ವಿವರಗಳನ್ನು ಸಲ್ಲಿಸಲಾಗಿದೆ; ಈ ವರೆಗೆ 1,57,255 ಹೆ. ಇದ್ದು, ಈಗ 87,462ಹೆ. ಗೆ ನೀರನ್ನು ಒದಗಿಸಬೇಕು ಎಂದು ಸರ್ಕಾರಕ್ಕೆ ವರದಿ ಮಾಡಿ ಗೆಜೆಟ್ ನಲ್ಲಿ ಪ್ರಕಟಿಸಲು ಕ್ರಮವಹಿಸಲಾಗಿದೆ; ಈಗ 11 ಟಿ.ಎಂ.ಸಿ. ನೀರು ಬೇಕಾಗಿದೆ, ಕುಡಿಯುವ ನೀರಿನ 18 ಯೋಜನೆಗಳಿಗೆ ನೀರು ಅಲೋಕೇಟ್ (ಹಂಚಿಕೆ) ಆಗಿದೆ; ಈಗ 3.13 ಟಿ.ಎಂ.ಸಿ. ನೀರು ಹರಿಸಿದರೆ ವ್ಯವಸಾಯಕ್ಕೆ ನೀರು ಕೊಡಬಹುದು; ಪೂರ್ಣವಾಗಿ 1,57,255 ಹೆ. ಗೆ ಅಗತ್ಯವಿರುವ ಉಳಿಕೆ 500 ಟಿ.ಎಂ.ಸಿ. ನೀರನ್ನು ಹೇಮಾವತಿ ನಾಲೆಯಿಂದ 251 ಕೆರೆಗಳಿಗೆ ಹಂಚಿಕೆ ಮಾಡಲು ಪ್ರಸ್ತಾವನೆ ಇಡಲಾಗಿದೆ; ಇದರಿಂದ ಒಟ್ಟಾರೆ 25 ಟಿ.ಎಂ.ಸಿ. ನೀರು ತುಮಕೂರು ಜಿಲ್ಲೆಗೆ ಲಭ್ಯವಾಗುತ್ತದೆ; ಯೋಜನೆಯಲ್ಲಿ ಯಾವುದೇ ಕೆರೆಗೆ ನೀರು ಕೊಡುವ ಪ್ರಶ್ನೆಯೇ ಇಲ್ಲ; ಮಾನ್ಯ ಸದಸ್ಯರಿಗೆ ಈ ವಿಷಯವನ್ನು ತಿಳಿಸಲಾಗಿದೆ; ನೀರಾವರಿಗೆ 18.983 ಟಿ.ಎಂ.ಸಿ., ಮತ್ತು ಕುಡಿಯುವ ನೀರಿಗೆ 550 ಕ್ಯೂಸೆಕ್ಸ್ ಎಲ್ಲ ಸೇರಿ 5.384 ಟಿ.ಎಂ.ಸಿ ನೀರು ಬೇಕು ಒಟ್ಟು 24.817 ಟಿ.ಎಂ.ಸಿ. ನೀರು ಸಂಪೂರ್ಣವಾಗಿ ಹರಿದಂತಾಗುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಗುಬ್ಬಿ ತಾಲ್ಲೂಕು ಹಾಗಲ್ವಾಡಿ, ಬಿಕ್ಕೆಗುಡ್ಡ, ಸಿ.ಎಸ್.ಪುರ, ಚೇಳೂರು ಎಲ್ಲವೂ ಸೇರಿವೆಯೇ? ಎಂದು ಪ್ರಶ್ನಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಸಾಕಮ್ಮ ನಾಗರಾಜು ರವರು, ಮೈದಾಳ ಕೆರೆ ಪೈಪ್ ಲೈನ್ ನ ಪೈಪ್ ರಸ್ತೆಯಲ್ಲಿ ಬಿದ್ದಿದೆ ಎಂದು ಆಕ್ಷೇಪಿಸಿದ್ದಕ್ಕೆ ಕಾರ್ಯಪಾಲಕ ಇಂಜಿನಿಯರ್ ರವರು ಹೇಮಾವತಿ ಯೋಜನೆಗೆ ಸಂಬಂಧಿಸಿದ್ದಲ್ಲವೆಂದು ತಿಳಿಸಿದರು. ನಂತರ, ಇಡಗೂರು 166 ಕಿ.ಮೀ. ತುಂಬಿದ ನಂತರ ಸಿ.ಎಸ್.ಪುರ ಕೆರೆಗೆ ನೀರು ಹೋಗಬೇಕು, ಇಡಗೂರು ಕೆರೆ ತೂಬು ತುಂಬಾ ಚಿಕ್ಕದಿದೆ; ನೀರು ಬಿಡುಗಡೆ ಕಾರ್ಯ ದಿನಾಂಕ 18-08-2014ರೊಳಗೆ ಪೂರ್ಣಗೊಳ್ಳುತ್ತದೆ; ಪ್ರಾಮುಖ್ಯವಾಗಿ ಕುಣಿಗಲ್ ಮತ್ತು ಬಿಗಿನೇನ ಹಳ್ಳಿಗೆ ಕುಡಿಯುವ ನೀರು ಪೂರೈಸಿ ನಂತರ ಸಮಿತಿಯ ಸೂಚನೆ ಮೇರೆಗೆ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಪಂಚಾಕ್ಷರಿಯವರು, 2012-13ರಲ್ಲಿ ಏತ ನೀರಾವರಿ ಯೋಜನೆಯಡಿ through gravity ಕೊಳವೆಯಲ್ಲಿ 22 ಕೆರೆಗಳನ್ನು ತುಂಬಿಸಲು ರೂ. 126.00 ಕೋಟಿ ಮೊತ್ತದ ಕಾರ್ಯಕ್ರಮ ಮಾಡಿದ್ದರು; ಈ ಯೋಜನೆಯಡಿ ಪ್ರಸ್ತುತ ನಾಲ್ಕು ಕೆರೆಗಳಿಗೆ ಮಾತ್ರ ಪೈಪ್ ಲೈನ್ ನಲ್ಲಿ ನೀರು ಹರಿಯುತ್ತಿದೆ, ಕೆಲಸ ಮಂದಗತಿಯಲ್ಲಿ ನಡೆಯುತ್ತಿದೆ; ಮೇಘಾ ಕನ್ಸ್ಟ್ರಕ್ಷನ್ ನವರು ಕೆಲಸ ಮಾಡುತ್ತಿದ್ದಾರೆ; ಒಂದು ತಿಂಗಳ ಹಿಂದೆ ಸ್ಥಳಕ್ಕೆ ಭೇಟಿ ನೀಡಿ ವೀಕ್ಷಿಸಲಾಗಿ ಕೇವಲ 20% ಮಾತ್ರ ಕೆಲಸವಾಗಿರುತ್ತದೆ ಎಂದು ಆಕ್ಷೇಪಿಸಿದರು. ಪ್ರತಿಯಾಗಿ ಕಾರ್ಯಪಾಲಕ ಇಂಜಿನಿಯರ್ ರವರು, 4 ಕೆರೆಗಳ ಕೆಲಸ ಪ್ರಗತಿಯಲ್ಲಿದೆ; ಭೂಸ್ವಾಧೀನ ಸಮಸ್ಯೆ ಇದ್ದು, ಅನೇಕ ಕಡೆ ಭೂಸ್ವಾಧೀನ ಮಾಡಬೇಕಾಗಿರುತ್ತದೆ ಆದರೆ ಏತ ನೀರಾವರಿ ಭಾಗದ ಕೆಲಸಗಳು 80% ಮುಗಿದಿವೆ, ಮುಂದಿನ 2 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ಈ ವರ್ಷದಲ್ಲಿಯೇ ನೀರು ಹರಿಸಲಾಗುವುದು ಎಂದು ಸಭೆಗೆ ಭರವಸೆಯಿತ್ತರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಎರಡು ತಿಂಗಳಲ್ಲಿ ಕೆಲಸ ಮುಗಿಸಿ, ನೀರು ಹರಿಸಿ, ಸಮಸ್ಯೆಯನ್ನು ಬಗೆಹರಿಸಿಕೊಡುವಂತೆ ತಿಳಿಸಿದರು. ನಂತರ, ಸಿ.ಎಸ್.ಪುರ ಕೆರೆಯಿಂದ ಸಿ.ಎಸ್.ಪುರಕ್ಕೆ ರಾಜೀವ್ ಗಾಂಧಿ ಸಬ್ ಮಿಷನ್ ಯೋಜನೆ ಮಂಜೂರಾಗಿದ್ದರೂ ಕೂಡ ಹೇಮಾವತಿ ನಾಲೆಯ ನೀರು ಹರಿಸುವ ಕಾಲುವೆಯಿಂದ 154ನೇ ಕಿ.ಮೀ. ನಿಂದ ಲಿಂಗಾಪುರ, ಚೆಂಗಾವಿ, ಮಾವಿನಹಳ್ಳಿ ಕೆರೆಗಳ ಮೂಲಕ ಸಿ.ಎಸ್.ಪುರಕ್ಕೆ

ನೀರು ಹರಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವಂತೆ ಸರ್ಕಾರವನ್ನು ಕೋರಲು ಸಭೆಯು ಸರ್ವಾನುಮತದಿಂದ ನಿರ್ಧರಿಸಿತು.

ಮಾನ್ಯ ಅಧ್ಯಕ್ಷರು, ಹೇಮಾವತಿ ಯೋಜನೆಯಿಂದ ತುಮಕೂರು ಜಿಲ್ಲೆಗೆ;, ಕುಡಿಯುವ ನೀರು ಮತ್ತು ಅಚ್ಚುಕಟ್ಟಿಗೆ 24.817 ಟಿ.ಎಂ.ಸಿ. ನೀರನ್ನು ಕಡ್ಡಾಯವಾಗಿ ಹರಿಸಬೇಕು, ಮತ್ತು ಈ ನಿಟ್ಟಿನಲ್ಲಿ ಇಲಾಖೆ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ನಂತರ, 0-72ನೇ ಕಿ.ಮೀ. ವರೆಗೆ ನಾಲೆಯ ಸಾಮರ್ಥ್ಯ ಹೆಚ್ಚಿಸುವ ಕೆಲಸದ ಜೊತೆಗೆ 0-183 ಕಿ.ಮೀ. ವರೆಗೆ ನಾಲೆಯ ಆಧುನೀಕರಣ ಮಾಡಲೇಬೇಕು; ಇದಕ್ಕೆ ಬೇಕಾಗುವ ಅನುದಾನವನ್ನು ಸರ್ಕಾರ ಒದಗಿಸಿಕೊಡಬೇಕು ಎಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

(ಕ್ರಮ : ಕಾರ್ಯ ಪಾಲಕ ಇಂಜಿನಿಯರ್, ಹೇಮಾವತಿ ನಾಲಾ ವಿಭಾಗ, ಹೆಬ್ಬೂರು)

ವಿಷಯ ಸೂಚಿ 03 :- ಈಗಾಗಲೇ ಬರಗಾಲ ಪ್ರದೇಶವೆಂದು ಜಿಲ್ಲೆಯನ್ನು ಘೋಷಣೆ ಮಾಡಿರುವುದರಿಂದ ಬರಪರಿಸ್ಥಿತಿ ನಿರ್ವಹಣೆಗಾಗಿ ಕಾಮಗಾರಿ ನಡೆಸಲು ಜಾನುವಾರಿಗಳಿಗೆ ಗೋಶಾಲೆ ತೆರೆಯಲು ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಬೇಕಾಗಿರುವ ವಿಶೇಷ ಅನುದಾನವನ್ನು ಮಂಜೂರು ಮಾಡುವಂತೆ ಸರ್ಕಾರವನ್ನು ಕೋರುವ ವಿಚಾರ.

ಮಾನ್ಯ ಸದಸ್ಯರಾದ ಶ್ರೀಮತಿ ಸಿ.ಆರ್.ಮಂಜುಳ ರವರು, ಪುರವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರು-ಮೇವು ಇಲ್ಲದೆ ಜಾನುವಾರುಗಳ ಪಾಲನೆಗೆ ಬಹಳ ತೊಂದರೆಯಾಗಿದೆ, ಆದುದರಿಂದ ಹೋಬಳಿಗೆ 3 ರಂತೆ ಗೋ-ಶಾಲೆಗಳನ್ನು ಪ್ರಾರಂಭಿಸಬೇಕು ಎಂದು ಒತ್ತಾಯಿಸಿದರು.

ಮಾನ್ಯ ಅಧ್ಯಕ್ಷರು, ಜನರಿಗೆ ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ನೀರು-ಮೇವಿಗೆ ಸಧ್ಯಕ್ಕೆ ಯಾವುದೇ ತೊಂದರೆಯಿಲ್ಲದಿರುವುದರಿಂದ ಪರಿಸ್ಥಿತಿ ಎದುರಾದಾಗ ಚಿಂತನೆ ಮಾಡಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರತಿಯಾಗಿ ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮ ಮಹಲಿಂಗಪ್ಪನವರು, ಈಗಾಗಲೇ ಪರಿಸ್ಥಿತಿ ಚಿಂತಾಜನಕವಾಗಿದೆ; ಒಂದು ತಿಂಗಳು ಮಳೆ ಬಾರದೆ ಹೋದರೆ ಗೋಶಾಲೆ ತೆರೆಯಲೇಬೇಕಾಗುತ್ತದೆ, ಜಾನುವಾರುಗಳ ಮೇವಿಗೆ ವ್ಯವಸ್ಥೆ ಮಾಡಬೇಕಾಗುತ್ತದೆ; ಕುಡಿಯುವ ನೀರಿಗೆ ತೊಂದರೆಯಾಗುತ್ತದೆ; ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಯಾವ ರೀತಿ ಕ್ರಮವಹಿಸಿದ್ದೀರಿ? ಎಂದು ಪ್ರಶ್ನಿಸಿದರು

ಉಪ ನಿರ್ದೇಶಕರು ಪಶುಪಾಲನಾ ಇಲಾಖೆ ಇವರು, ಪರಿಸ್ಥಿತಿಯ ಕುರಿತು ಇಲಖಾ ಆಯುಕ್ತರ ಕಛೇರಿಗೆ ದಿನ ನಿತ್ಯ ಮತ್ತು ಮಾನ್ಯ ಜಿಲ್ಲಾಧಿಕಾರಿಯವರಿಗೆ ಸಾಪ್ತಾಹಿಕವಾಗಿ ವರದಿ ಮಾಡಲಾಗುತ್ತಿದೆ; 02-08-2014ರ ವರದಿ ಮೇರೆಗೆ 2,49,879 ಮೆಟ್ರಿಕ್ ಟನ್ ಹುಲ್ಲು ದಾಸ್ತಾನು ಇದೆ; ಇದು ಮುಂದಿನ ಏಳು ವಾರಗಳ ವರೆಗೆ ಸಾಕಾಗುತ್ತದೆ; ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 24,000 ಮಿನಿ ಕಿಟ್ ಗಳನ್ನು ವಿತರಿಸಲಾಗಿದೆ; ಪ್ರಸಕ್ತ ಮಾಹೆಯಲ್ಲಿ 22,000 ಮಿನಿಕಿಟ್ ಗಳು ಬಿಡುಗಡೆಯಾಗುತ್ತವೆ; ಜೊತೆಗೆ ಒಟ್ಟಾರೆ ರೂ. 3.00 ಕೋಟಿ ವೆಚ್ಚದಲ್ಲಿ ಒಂದು ಲಕ್ಷ ಮಿನಿಕಿಟ್ ಗಳನ್ನು ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಯವರನ್ನು ಕೋರಲಾಗಿದೆ; ಏಳು ವಾರಗಳ ನಂತರ ಮುಂದಿನ ವ್ಯವಸ್ಥೆಯ ಬಗ್ಗೆ ಯೋಜಿಸಲಾಗುವುದು; ಎಲ್ಲ ಸಹಾಯಕ ಪಶು ನಿರ್ದೇಶಕರುಗಳನ್ನು ಕರೆದು, ಗೋ-ಶಾಲೆ /ಮೇವಿನ ಬಗ್ಗೆ ಮುಂದಿನ ಎರಡು ದಿನಗಳಲ್ಲಿ ವಿವರವಾದ ವರದಿ ನೀಡುವಂತೆ ಈಗಾಗಲೇ

ತಿಳಿಸಲಾಗಿದೆ; ತುಮಕೂರು ತಾಲ್ಲೂಕಿನಲ್ಲಿ 22 ಸಂಸ್ಥೆಗಳಿಗೆ ಭೇಟಿ ನೀಡಿ ವೀಕ್ಷಿಸಲಾಗಿದೆ; ಸಾಕಷ್ಟು ಹುಲ್ಲು ಬೆಳೆದಿದ್ದಾರೆ; ಉಳಿದ ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ ವರದಿ ನೀಡಲಾಗುವುದು; ಕೆ.ಎಂ.ಎಫ್., ವತಿಯಿಂದ 1000 ಕ್ವಿಂಟಾಲ್ ಬೀಜ ನೀಡಿದ್ದಾರೆ ಎಂದು ಸಭೆಗೆ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಚಿಕ್ಕನಾಯಕನಹಳ್ಳಿ, ಶಿರಾ, ಮಧುಗಿರಿ, ಪಾವಗಡ ತಾಲ್ಲೂಕುಗಳಲ್ಲಿ ಈಗಿನ ಪರಿಸ್ಥಿತಿ ಕಷ್ಟವಾಗಿದೆ; ಕೊರಟಗೆರೆ ತಾಲ್ಲೂಕಿನಲ್ಲಿ ಸ್ವಲ್ಪ ಮಟ್ಟಿಗೆ ಪರವಾಗಿಲ್ಲ; ಆದುದರಿಂದ ಪ್ರಥಮಾಧ್ಯತೆ ಮೇಲೆ ಪರಿಗಣಿಸಿ ಸಹಾಯಕ ಪಶು ನಿರ್ದೇಶಕರು ಮತ್ತು ಗ್ರಾಮ ಪಂಚಾಯಿತಿ ಸದಸ್ಯರುಗಳನ್ನು ಕರೆದು ಮನವರಿಕೆ ಮಾಡಿಸಬೇಕು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮಾ ಮಹಲಿಂಗಪ್ಪನವರು, ಅರಣ್ಯ ಇಲಾಖೆಯ ಜಮೀನಿನಲ್ಲಿ ಮೇವು ಬೆಳೆಸಲು ಕ್ರಮವಹಿಸುವಂತೆ ಸಾಕಷ್ಟು ಬಾರಿ ತಿಳಿಸಿದ್ದರೂ ಸಹ ಈ ವರೆಗೆ ಯಾವುದೇ ಪ್ರಯೋಜನವಾಗಿಲ್ಲ; ರೈತರಿಗೆ ಮಿನಿಕಿಟ್ ಗಳನ್ನು ಕೊಟ್ಟರೆ ಬೋರ್ ವೆಲ್ ಇದ್ದು ನೀರಿನ ಆಶ್ರಯ ಇರುವವರು ಮಾತ್ರ ಮೇವು ಬೆಳೆಯುತ್ತಾರೆ, ಇಲ್ಲದವರು ಕಿಟ್ ಗಳನ್ನು ಸುಮ್ಮನೆ ಮನೆಯಲ್ಲಿ ಇಟ್ಟುಕೊಳ್ಳುತ್ತಾರೆ ಎಂದು ಆಕ್ಷೇಪಿಸಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಮಳೆಗಾಲದಲ್ಲಿ ಬೆಳೆದುಕೊಳ್ಳಬೇಕು, ಬೇರೆ ಕಾಲದಲ್ಲಿ ಪ್ರಯೋಜನವಾಗು ವುದಿಲ್ಲ, ಆದುದರಿಂದ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಸಂಪರ್ಕದಲ್ಲಿದ್ದು, ಹೆಚ್ಚಿನ ಹಣ ನೀಡುವಂತೆ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಬೇಕು, ಜೊತೆಗೆ ಯಾವ-ಯಾವ ಜಿಲ್ಲೆಗಳಲ್ಲಿ ಗಂಗಾವತಿ, ರಾಯಚೂರು, ದಾವಣಗೆರೆ ಅಕ್ಕ-ಪಕ್ಕದ ಜಿಲ್ಲೆಗಳಲ್ಲಿ ಮೇವು ಸಿಗುವ ಜಾಗಗಳಲ್ಲಿ ಮುಂಜಾಗ್ರತೆಯಾಗಿ ಯಾವ ರೀತಿ ಮೇವು ಪಡೆದುಕೊಳ್ಳಬಹುದು, ಎಷ್ಟು ಹಣ ಬೇಕಾಗುತ್ತದೆ ಎಂಬ ಬಗ್ಗೆ ಯೋಜನೆ ಸಿದ್ಧಪಡಿಸಿಕೊಂಡು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕುಮಟ್ಟದ ಅಧಿಕಾರಿಗಳ ಸಂಪರ್ಕದಲ್ಲಿದ್ದು, ಕೆಲಸ ಸಾಧಿಸಬೇಕು ಎಂದು ಕಿವಿಮಾತು ಹೇಳಿದರು.

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಮಾನ್ಯ ಸದಸ್ಯರುಗಳು ಬರೀ ಕುಡಿಯುವ ನೀರು ಎನ್ನುತ್ತಾರೆ; ಬರೀ ನೀರಿನಿಂದ ಜನ-ಜಾನುವಾರುಗಳು ಬದುಕಲು ಸಾಧ್ಯವಿಲ್ಲ; ಅಚ್ಚುಕಟ್ಟು ಅಭಿವೃದ್ಧಿ ಯಾದರೆ ಮೇವು ಬೆಳೆಯಲು ಸಾಧ್ಯವಾಗುತ್ತದೆ; ಅಕ್ಕ-ಪಕ್ಕದ ತಾಲ್ಲೂಕುಗಳಲ್ಲಿ ಎಲ್ಲೋ ಒಂದು ಕಡೆ ಮೇವು ಬೆಳೆದರೆ ಇತರರಿಗೂ ಅನುಕೂಲವಾಗುತ್ತದೆ; ಇಂದಿನ ದಿನಗಳಲ್ಲಿ ಸಾಕಷ್ಟು ಜನ ಬೆಂಗಳೂರಿಗೆ ಗುಳೆ ಹೋಗಿದ್ದಾರೆ; ಕುಡಿಯುವ ನೀರಿಗೆ ಮಾತ್ರ ಗಮನಹರಿಸಿದರೆ ರೈತರ ಪಾಡೇನಾಗಬೇಕು? ಎಂದು ಪ್ರಶ್ನಿಸಿ, ಅಚ್ಚುಕಟ್ಟು ಪ್ರದೇಶಕ್ಕೆ ನೀರು ಕೊಟ್ಟರೆ ಅಧಿಕ ಪರಿಮಾಣದಲ್ಲಿ ಮೇವು ಬೆಳೆದು ಮೇವು ಸಾಗಣೆ ಮಾಡಲು ಸಹ ಸುಲಭವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

(ಕ್ರಮ : ಉಪ ನಿರ್ದೇಶಕರು, ಪಶುಪಾಲನೆ ಮತ್ತು ಪಶು ವೈದ್ಯ ಸೇವಾ ಇಲಾಖೆ, ತುಮಕೂರು)

ವಿಷಯ ಸೂಚಿ 04 :- ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿಯಮಾನುಸಾರ ಯಾವುದೇ ಲೋಪವಿಲ್ಲದೆ ನಿರ್ವಹಿಸಿರುವ ಕಾಮಗಾರಿಗಳಿಗೆ ಹಣ ಪಾವತಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ಕೋರುವ ವಿಚಾರ.

ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ಎನ್.ಆರ್.ಇ.ಜಿ.ಎ.ಯೋಜನೆ ಯಡಿ ಕಳೆದ ಸಾಲಿಗೆ ಸಂಬಂಧಿಸಿದಂತೆ ಸರ್ಕಾರದಿಂದ ರೂ.39.00 ಕೋಟಿ ಅನುದಾನ ಬಾಕಿ ಬರಬೇಕಾಗಿದೆ; ಸಾಮಾಜಿಕ ಲೆಕ್ಕ ಪರಿಶೋಧಕರು 86 ಗ್ರಾಮ ಪಂಚಾಯಿತಿಗಳಲ್ಲಿ ಲೆಕ್ಕ ತಪಾಸಣೆ ಮಾಡಿ ಲೋಪದೋಷಗಳನ್ನು ಗುರುತಿಸಿ ಬಿಲ್

ಗಳನ್ನು (ಹಣ) ಬಾಕಿ ಇಟ್ಟಿದ್ದರು; ಈ ಕುರಿತು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರುಗಳು ಹೋಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಸಚಿವರನ್ನು ಮತ್ತು ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಿ ವಾಸ್ತವಿಕತೆಯನ್ನು ಮನದಟ್ಟು ಮಾಡಿಸಿದ್ದಾರೆ; ಪ್ರಸಕ್ತ ಸಾಲಿನ ಫೆಬ್ರವರಿ ಮಾಹೆಯಿಂದ ಇಲ್ಲಿಯವರೆಗೆ ರೂ.2.61 ಕೋಟಿ ಬಿಲ್ ಪಾವತಿಗೆ ಬಾಕಿ ಇತ್ತು; ಗ್ರಾಮ ಪಂಚಾಯಿತಿಗಳಿಗೆ ಒಟ್ಟು ರೂ. 41.00 ಕೋಟಿ ಅನುದಾನ ಬಿಡುಗಡೆಯಾಗಿರಲಿಲ್ಲ; ಮಾನ್ಯ ಸದಸ್ಯರುಗಳು ಗ್ರಾಮ ಪಂಚಾಯಿತಿಗಳಲ್ಲಿ ತೊಂದರೆಯಾಗಿದೆ, ನಿಯಮ ಉಲ್ಲಂಘನೆ ಮಾಡಿರುವವರ ವಿರುದ್ಧ ಕ್ರಮವಹಿಸಲಾಗಿದೆ ಎಂದು ಸರ್ಕಾರದ ಗಮನಕ್ಕೆ ತಂದರೂ ಸಹ, ಎಲ್ಲ ಅನುಷ್ಠಾನಾಧಿಕಾರಿಗಳ ವಿರುದ್ಧ ಕ್ರಮವಹಿಸಿದ ನಂತರ ಹಣ ಬಿಡುಗಡೆ ಮಾಡುವುದಾಗಿ ಸರ್ಕಾರ ಹೇಳಿತ್ತು; ಅದರಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಸಚಿವರ ಮತ್ತು ಮಾನ್ಯ ಮುಖ್ಯ ಮಂತ್ರಿಯವರ ಜೊತೆ ಮಾತನಾಡಿದ ನಂತರ ಕಳೆದ 4-5 ದಿನಗಳ ಹಿಂದೆ ರೂ. 3.00 ಕೋಟಿ ಅನುದಾನ ಬಿಡುಗಡೆ ಮಾಡಿದ್ದಾರೆ; ಉಳಿಕೆ ಹಣವನ್ನು ಹಂತ-ಹಂತವಾಗಿ ಬಿಡುಗಡೆ ಮಾಡುವುದಾಗಿ ಹೇಳಿರುತ್ತಾರೆ; ಪೂರ್ಣ ಪ್ರಮಾಣದ ಹಣ ಬಿಡುಗಡೆಯಾದರೆ ಕೂಲಿಕಾರರು ಬಂದು ಕೆಲಸ ಮಾಡಲು ಅನುಕೂಲವಾಗುತ್ತದೆ ಎಂದು ಸರ್ಕಾರಕ್ಕೆ ಮನವಿ ಮಾಡಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಗ್ರಾಮ ಪಂಚಾಯಿತಿಗಳಲ್ಲಿ ನಿಯಮಾನುಸಾರವೇ ಕ್ರಿಯಾ ಯೋಜನೆ ಮಾಡಬೇಕೆಂದು ಸಂಬಂಧಪಟ್ಟವರಿಗೆ ಸೂಕ್ತ ಸೂಚನೆ ನೀಡಬೇಕು ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀ ಉಗ್ರಪ್ಪನವರು, ತುರುವೇಕೆರೆ ತಾಲ್ಲೂಕು ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅವ್ಯವಹಾರ ನಡೆದಿರುವುದಾಗಿ ದೂರದರ್ಶನದಲ್ಲಿ ವರದಿಯಾಗಿರುತ್ತದೆ; ಆದರೆ ಸಂಬಂಧಪಟ್ಟ ಪಿ.ಡಿ.ಓ., ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರ ವಿರುದ್ಧ ಕ್ರಮಕೈಗೊಳ್ಳಲು ಸ್ಥಳೀಯ ಲೆಕ್ಕ ತಪಾಸಣಾ ವರದಿಯಲ್ಲಿ ಹಣ ದುರುಪಯೋಗದ ಕುರಿತು ಎಲ್ಲಿಯೂ ನಮೂದಾಗಿರುವುದಿಲ್ಲ; ಕೊಟ್ಟೂರನ ಕೊಟ್ಟಿಗೆ ಗ್ರಾಮದಲ್ಲಿ ಸಿಮೆಂಟ್ ರಸ್ತೆ ಸಂಪರ್ಕವಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ, ಆದರೂ ಪಿ.ಡಿ.ಓ., ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲು ಕಾರಣವೇನು? ಎಂದು ಪ್ರಶ್ನಿಸಿದರು.

ಉಪಕಾರ್ಯದರ್ಶಿ(ಅಭಿವೃದ್ಧಿ)ರವರು, procedure lapses and documentation incomplete ಆಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸದರಿ ದೂರನ್ನು ಪಡೆದುಕೊಂಡು ಪರಿಶೀಲಿಸಿ, ವರದಿಯ ಪ್ರತಿಯೊಂದನ್ನು ಮಾನ್ಯ ಸದಸ್ಯರಿಗೆ ಒದಗಿಸುವಂತೆ ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರಿಗೆ ತಿಳಿಸಿದರು ಹಾಗೂ, ಹೋಂಬಡ್ಸ್ ಮನ್ ರವರು ನೀಡಿರುವ ವರದಿಯಲ್ಲಿ ಆ ರೀತಿ ಆಕ್ಷೇಪಣೆ ವ್ಯಕ್ತವಾಗಿದ್ದು ಕಾಮಗಾರಿ ಪೂರ್ಣಗೊಂಡಿದೆಯಾದರೆ ಸದರಿ ವರದಿಯನ್ನು ಹಿಂಪಡೆದು ಮಾರ್ಪಾಡು ಮಾಡುವುದಾಗಿ ಸಭೆಗೆ ಭರವಸೆಯಿತ್ತರು. ಹಾಗೂ ಮಾನ್ಯ ಅಧ್ಯಕ್ಷರು, ತ್ವರಿತವಾಗಿ ಪರಿಶೀಲಿಸಿ ಸದರಿ ವರದಿಯನ್ನು ಹಿಂಪಡೆದು ಮಾರ್ಪಾಡು ಮಾಡಲು ತಿಳಿಸುವುದಾಗಿ ಮಾನ್ಯ ಸದಸ್ಯರಿಗೆ ಭರವಸೆಯಿತ್ತರು.

ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯನವರು, ಬಂಡವಾಳ ಹಾಕಿ ಕೊಟ್ಟಿಗೆ ಮನೆ ಕಟ್ಟಿರುವ ರೈತರುಗಳಿಗೆ ಹಣ ಪಾವತಿಯಾಗಿಲ್ಲ, ಅವರುಗಳು ನಮ್ಮನ್ನು ದೂಷಣೆ ಮಾಡುತ್ತಾರೆ; ಶೌಚಾಲಯ, ಕಾಂಕ್ರೀಟ್ ರಸ್ತೆ, ಕೊಟ್ಟಿಗೆ ಮನೆ ನಿರ್ಮಾಣ ಮಾಡಿರುವವರಿಗೆ ಹಣ ಪಾವತಿಸಲು ಕೂಡಲೇ ಕ್ರಮವಹಿಸಬೇಕು ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಅಧ್ಯಕ್ಷರು, ಕೂಲಿಕಾರರ ಕೆಲಸಕ್ಕೆ ಅಭ್ಯಂತರವಿಲ್ಲ; ಕಾಯಕಬಂಧು/ಮೇಟಿಗಳಿಂದ ಮಾಡಿದರೆ ಅಭಿವೃದ್ಧಿ ಕೆಲಸಗಳು ಆಗುತ್ತವೆ; ಆದರೆ ಇಲ್ಲಿ ಪಿ.ಡಿ.ಓ.ಗಳಿಗೆ ಚೆಕ್ ಅಧಿಕಾರ ನೀಡಿದ ನಂತರ ಕಾರ್ಯನಿರ್ವಾಹಕ ಅಧಿಕಾರಿಗಳು ಅಸಹಾಯಕರಾಗಿದ್ದಾರೆ; ಕಾರ್ಯನಿರ್ವಾಹಕ ಅಧಿಕಾರಿಗಳು, ಅಕ್ರಮ ಎಸಗಿದ ಪಿ.ಡಿ.ಓ., ಗಳ ಮೇಲೆ ಕ್ರಮವಹಿಸಿದ್ದರೆ ಈ ರೀತಿ ಆಗುತ್ತಿರಲಿಲ್ಲ; ಈ ಜಿಲ್ಲಾ ಪಂಚಾಯ್ತಿಯು ಗ್ರಾಮ ಪಂಚಾಯಿತಿಗಳ ಮೇಲೆ ಸಾಕಷ್ಟು ನಿಗಾ ವಹಿಸಿದೆ; ಕಾರ್ಯನಿರ್ವಾಹಕ ಅಧಿಕಾರಿಗಳು ಗಮನಹರಿಸಿ ಡಾಟಾ ಎಂಟ್ರಿ ಆಪರೇಟರ್ ಗಳು ಮತ್ತು ಇಂಜಿನಿಯರ್ ಗಳನ್ನು ಸೇವೆಗೆ ವಾಪಸ್ ಪಡೆಯಬೇಕು ಎಂದು ತಿಳಿಸಿದರು.

(ಕ್ರಮ : ಉಪಕಾರ್ಯದರ್ಶಿ(ಅಭಿವೃದ್ಧಿ), ಜಿ.ಪಂ., ತುಮಕೂರು)

ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಿಣಿಯವರು, ಅಧಿಕಾರಿಗಳು ತಮಗೆ ದತ್ತವಾದ ಅಧಿಕಾರವನ್ನು ಯಾವುದೇ ಒಂದು ಯೋಜನೆಯ ಅನುಷ್ಠಾನದಲ್ಲಿ ಒಳ್ಳೆಯ ಉದ್ದೇಶಕ್ಕೆ ಬಳಸಿಕೊಂಡಲ್ಲಿ ಮಾತ್ರ ಯಾವುದೇ ಪಂಚಾಯಿತಿಗಳಲ್ಲಿಯೂ ಅವ್ಯವಹಾರ ನಡೆಯುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಉಮೇಶ್ ರವರು, ಎನ್.ಆರ್.ಇ.ಜಿ.ಎ., ಯೋಜನೆಯಡಿ ಪ್ರಸ್ತುತ ಸಂದರ್ಭದಲ್ಲಿ ಕೂಲಿ ಮಾಡುವವರು ಮತ್ತು ಕೂಲಿ ಮಾಡಿಸುವವರು ಯಾರೂ ಕಾಮಗಾರಿ ನಿರ್ವಹಿಸಲು ತಯಾರಿಲ್ಲ; ಸಾಮಾಜಿಕ ಲೆಕ್ಕ ಪರಿಶೋಧಕರುಗಳಿಂದಾಗಿ ಯಾವ ಅಧಿಕಾರಿಗಳಿಗೂ ಕಾಮಗಾರಿ ನಿರ್ವಹಿಸಲು ಸಾಧ್ಯವಾಗಿಲ್ಲ; ಆದುದರಿಂದ ಸಾಮಾಜಿಕ ಲೆಕ್ಕ ಪರಿಶೋಧಕರ ಲೆಕ್ಕ ತಪಾಸಣಾ ವರದಿಯನ್ನು ಸಾರಾಸಗಟಾಗಿ ರದ್ದುಪಡಿಸಿ ಮರುಪರಿಶೀಲನೆ ಮಾಡಿಸಿ ಎಂದು ಕಳೆದ ಸಭೆಯಲ್ಲಿ ತಿಳಿಸಿದ್ದರೂ ಸಹ ಈ ವರೆಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ; ಹಿಂದಿನ ಬಿಲ್ ಪಾವತಿಸುವವರೆಗೆ ಹೊಸ ಕಾಮಗಾರಿಗಳನ್ನು ಪ್ರಾರಂಭಿಸಲು ಸಾಧ್ಯವಿಲ್ಲ; ಆದುದರಿಂದ ಹಳೇ ಬಿಲ್ ಪಾವತಿಗೆ ಕ್ರಮವಹಿಸಿ, ಕೂಲಿಕಾರರು ಮತ್ತು ಅಧಿಕಾರಿಗಳಲ್ಲಿ ಮಾನಸಿಕ ಸ್ಥೈರ್ಯ ತುಂಬಿ ಹೊಸದಾಗಿ ಕೆಲಸ ಪ್ರಾರಂಭ ಮಾಡಿಸಿ ಇಲ್ಲವಾದಲ್ಲಿ ಯಾವುದೇ ಪ್ರಯೋಜನವಾಗುವುದಿಲ್ಲ, ಇದು ವಾಸ್ತವಾಂಶ ಎಂದು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು, ಯೋಜನೆಯಡಿ ಕಾಮಗಾರಿ ನಿರ್ವಹಿಸಿದ ಬಾಬ್ತು ರೂ. 36.00 ಕೋಟಿ ಹಣ ಪಾವತಿಯಾಗಿಲ್ಲ ಎಂದರೆ ಗುತ್ತಿಗೆದಾರರುಗಳ ಪಾಡೇನಾಬೇಕು ಎಂದು ಪ್ರಶ್ನಿಸಿದರು.

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಈಗ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಮಾತಿನ ಪ್ರಕಾರ ಬಂದಿರುವ ರೂ. 3.00 ಕೋಟಿ ಹಣವನ್ನು ಮಾರ್ಗಸೂಚಿ ಪ್ರಕಾರ ಹಂಚುತ್ತೀರೋ? ಅಥವಾ ಯಾವ ಆಧಾರದಲ್ಲಿ ಹಂಚುತ್ತೀರಿ? ಎಂದು ಪ್ರಶ್ನಿಸಿದರು.

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು, ಎನ್.ಆರ್.ಇ.ಜಿ., ಯೋಜನೆಯ ಬಗ್ಗೆ ಸಭೆಯಲ್ಲಿ ಮಾನ್ಯ ಸದಸ್ಯರುಗಳು ಕಾಳಜಿ ಮತ್ತು ಕಳಕಳಿ ಪ್ರದರ್ಶಿಸಿದ್ದು ಸಂತೋಷದ ವಿಷಯ; ಗ್ರಾಮೀಣ ಪ್ರದೇಶಗಳಲ್ಲಿ

ಯಾರೂ ಗುಳೆ ಹೋಗಬಾರದು, ಅವರುಗಳಿಗೆ ಕೆಲಸ ಕೊಟ್ಟು ಕೂಲಿ ನೀಡಿ ಅವರು ಗ್ರಾಮಗಳಲ್ಲಿಯೇ ನೆಲೆ ನಿಲ್ಲುವಂತೆ ಮಾಡಬೇಕು ಎನ್ನುವ ಸದುದ್ದೇಶದಿಂದ ಭಾರತ ಸರ್ಕಾರ ಜಾರಿಗೆ ತಂದ ಈ ಯೋಜನೆಯನ್ನು 100% ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು ಹೊತ್ತಿದ್ದಾರೆ; 2009-10ನೇ ಸಾಲಿನಲ್ಲಿ ಶಿರಾ, ಪಾವಗಡ ಮತ್ತು ಮಧುಗಿರಿ ತಾಲ್ಲೂಗಳಲ್ಲಿ ಜರುಗಿದ ಪ್ರಕರಣಗಳು ಎಲ್ಲರಿಗೂ ತಿಳಿದೇ ಇದೆ; ನಮ್ಮಗಳ ಉದ್ದೇಶ ವಿಶೇಷವಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶಾಶ್ವತ ಆಸ್ತಿ ಸೃಜನೆಯಾಗಬೇಕು ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ಅನುಷ್ಠಾನ ಮಾಡಲಾಗಿದೆ; ಈ ಯೋಜನೆಯಡಿ 2012-13ನೇ ಸಾಲಿನಲ್ಲಿ ರೂ.60.00 ಕೋಟಿ ಖರ್ಚುಮಾಡಲಾಗಿದೆ; 2013-14ನೇ ಸಾಲಿನಲ್ಲಿ ರೂ. 152.00 ಕೋಟಿ ಮೊತ್ತದ ಆಯವ್ಯಯ ನಿಗಧಿಯಾಗಿತ್ತು, ಅಷ್ಟು ಅನುದಾನವನ್ನು ನೀಡಿದ್ದರೆ ಸಮಸ್ಯೆಯಾಗುತ್ತಿರಲಿಲ್ಲ; ಆದರೆ, ಮುಖ್ಯ ಮಂತ್ರಿಯವರ 15 ಅಂಶಗಳ ಕಾರ್ಯಕ್ರಮದಡಿ ಎನ್.ಆರ್.ಇ.ಜಿ., ಯೋಜನೆಯಡಿ ಖರ್ಚಿಗೆ ಮಿತಿಯಿಲ್ಲ, ಎಷ್ಟು ಬೇಕಾದರೂ ಖರ್ಚು ಮಾಡಿ ಎಂದು ಹೇಳಿದರು; ಅದರಿಂದಾಗಿ ಈ ರೀತಿ ಸಮಸ್ಯೆಯಾಗಿದೆ; ಯೋಜನೆಯ ಅರಿವಿನ ಕುರಿತು ಜಿಲ್ಲಾ / ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸ್ಯಾಟ್ ಕಾಮ್ ತರಬೇತಿಯನ್ನು ನೀಡಿದರು; ಯೋಜನೆಯ ಉಸ್ತುವಾರಿಗಾಗಿ 2 ತಾಲ್ಲೂಕುಗಳಿಗೆ ಒಬ್ಬರಂತೆ ನೋಡಲ್ ಅಧಿಕಾರಿಯನ್ನು ನೇಮಕ ಮಾಡಲಾಗಿದ್ದು, ಗ್ರಾಮ ಪಂಚಾಯಿತಿಗಳಲ್ಲಿ ಸಣ್ಣ ರೈತರು ಮತ್ತು ಪ.ಜಾ/ಪ.ಪಂ ರೈತರ ಸಂಬಂಧ ಎನ್.ಎಂ.ಆರ್ ತೆಗೆಯಲು ಹೇಳಿದರೆ ಯಾರ ಅನುಮತಿಯಿಲ್ಲದೆ, ಯಾರ ಗಮನಕ್ಕೂ ತರದೆ ರಾತ್ರೋ-ರಾತ್ರಿ ಒಂದು ದಿನಕ್ಕೆ ಕನಿಷ್ಟ ರೂ. 30-40 ಲಕ್ಷ ಮೊತ್ತದವರೆಗೆ ಗಣಕ ಯಂತ್ರದಲ್ಲಿ ಫೀಡ್ ಮಾಡಿದ್ದಾರೆ; ಹೀಗಾಗಿ ನಂತರ ಸರ್ಕಾರ ಎಚ್ಚೆತ್ತುಕೊಂಡಿತು; ಸಾಮಾಜಿಕ ಲೆಕ್ಕ ಪರಿಶೋಧನೆ ಜಾರಿಗೊಳಿಸಿತು; ಆದುದರಿಂದ ಈಗಲೂ ಎಷ್ಟು ಚರ್ಚೆ ಮಾಡಿ ನಿರ್ಣಯ ಕೈಗೊಂಡರೂ ಪ್ರಯೋಜನವಿಲ್ಲ; ಕೆಲಸ ಆಗಬೇಕೆಂದರೆ ಕೂಲಿಕಾರರನ್ನು ಕರೆತರಬೇಕು; ಗುತ್ತಿಗೆ ನಿಲ್ಲಿಸಬೇಕು; ಈ ನಿಟ್ಟಿನಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ಅವಲಂಬಿತರಾಗಲು ಸಾಧ್ಯವಿಲ್ಲ; ಇಂಜಿನಿಯರ್ ಗಳು ತೊಂದರೆಯಲ್ಲಿ ಸಿಲುಕುತ್ತಿದ್ದಾರೆ; ಎಲ್ಲೆಡೆ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸಿರಬಹುದೆಂದು ಸರ್ಕಾರದ ಗಮನಕ್ಕೆ ತಂದರು ಕೆಲವೆಡೆ ಪ್ರತಿಭಟನೆ ಮಾಡಿದರು; ಆದರೆ ರಕ್ಷಣೆ ನೀಡುವ ಕೆಲಸ ಆಗಲಿಲ್ಲ; ಪ್ರಸ್ತುತ ಕನಿಷ್ಟ ಕೂಲಿ ದಿನಕ್ಕೆ ರೂ.191/- ನಿಗಧಿಯಾಗಿದೆ, ಕೂಲಿಕಾರರನ್ನು ಕರೆತಂದರೆ ಕೆಲಸ ಕೊಡಲು ನಾವು ಸಿದ್ಧರಿದ್ದೇವೆ; ಯಾವುದೇ ಗ್ರಾಮ ಪಂಚಾಯಿತಿ ಖಾತೆಗೆ ಹಣ ನೀಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಸಾಮಾನ್ಯ ಖಾತೆಗೆ ಸರ್ಕಾರ ಹಣ ತುಂಬುತ್ತದೆ; ಅದನ್ನು ನೋಡಿಕೊಂಡು ಹಣ ಸೆಳೆಯಬೇಕಾಗುತ್ತದೆ; ಈ ನಿಟ್ಟಿನಲ್ಲಿ ಕೆಲವು ಪಂಚಾಯಿತಿಗಳಲ್ಲಿ ಪದೇ-ಪದೇ ಡ್ಯಾಂಗಲ್ ಹಾಕಿ ಹಣ ಸೆಳೆಯುವ ಕೆಲಸ ಮಾಡಿದ್ದಾರೆ; ಸರ್ಕಾರದವರು ತನಿಖೆಗೆ ಬರುತ್ತಾರೆಂದಾಗ 84 ಗ್ರಾಮ ಪಂಚಾಯಿತಿಗಳಲ್ಲಿ ಅಧಿಕಾರಿಗಳ ತಂಡ (Eos, AEEs, DLOs & TLOs) ಅತ್ಯಂತ ಶ್ರಮಪಟ್ಟು ರಾತ್ರಿ 12 ಗಂಟೆಯಲ್ಲಿ ದಾಖಲೆಗಳನ್ನು ಸರಿಪಡಿಸಲು ಕ್ರಮವಹಿಸಿರುತ್ತಾರೆ; 12 ವಿವಿಧ ರೀತಿಯ ದಾಖಲೆಗಳನ್ನು ಸಿದ್ಧಪಡಿಸಲಾಗಿರುತ್ತದೆ; ಆದರೆ ಕೆಲಸದ ಅತಿ ಒತ್ತಡದಿಂದಾಗಿ ಕೆಲವೆಡೆ ವಿಫಲವಾಗಿದೆ; ಗುತ್ತಿಗೆದಾರರುಗಳ ಮನೆ ಬಾಗಿಲಿಗೆ ಹೋಗಿ ಅಳತೆ ಪುಸ್ತಕ ಮತ್ತು ಕಡತಗಳನ್ನು ಕಿತ್ತು ತಂದ ಪರಿಸ್ಥಿತಿ ಸಹ ಇದೆ; ಹಣ ಬಂದಾಗ ಶೌಚಾಲಯ/ವೈಯಕ್ತಿಕ ಫಲಾನುಭವಿಗಳ ಬಿಲ್ ಗಳನ್ನು ಪ್ರಥಮಾಧ್ಯತೆಯ ಮೇಲೆ ಪಾವತಿಸಿ, ಸಮುದಾಯ ಕಾಮಗಾರಿ ಮತ್ತು ಸಾಮಗ್ರಿ ಗಳ ಬಿಲ್ ನ್ನು ನಂತರ ಪಾವತಿಸಲಾಗುವುದು; ಎನ್.ಎಂ.ಆರ್. ಕೆಲಸಕ್ಕೆ ಹಣ ಪಾವತಿ ಮಾಡಲಾಗುವುದು; ಕೂಲಿ

ಕೆಲಸಕ್ಕೆ ಮಾತ್ರ ಹಣ ಪಾವತಿಸಲಾಗುವುದು; ಗುತ್ತಿಗೆ ನಿರ್ವಹಿಸಿರುವ ಕಾಮಗಾರಿಗಳ ಬಿಲ್ ನ್ನು ತಡೆಹಿಡಿಯಲಾಗುವುದು; ಈಗಾಗಲೇ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮವಹಿಸಲಾಗಿದೆ; ಕ್ರಮವಹಿಸದಿದ್ದರೆ ಎಷ್ಟೋ ಅಧಿಕಾರಿಗಳ ಆತ್ಮಹತ್ಯೆಯಾಗುತ್ತಿತ್ತು; ಜಿಲ್ಲೆಗೆ ಒಳ್ಳೆಯ ಹೆಸರು ಬರಬೇಕೆಂದರೆ ಮತ್ತು ಕೂಲಿಕಾರರ ಹಣ ಬೇರೆಯವರಿಗೆ ನೀಡಿ ದುರುಪಯೋಗವಾಗಬಾರದು ಎಂದರೆ ಎಲ್ಲರೂ ಪರಸ್ಪರ ಸಹಕಾರದಿಂದ ಕೆಲಸ ಮಾಡಬೇಕು ಎಂದು ಸಭೆಗೆ ವಿವರವಾಗಿ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಈ ಯೋಜನೆಯಡಿ ಇನ್ನು ಮುಂದಾದರೂ ನಿಯಮಾನು ಸಾರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವಂತೆ ಸಲಹೆಯಿತ್ತರು.

ಮಾನ್ಯ ಅಧ್ಯಕ್ಷರು, ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಒಟ್ಟಾಗಿ ಸೇರಿ ಕೂಲಿಕಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕರೆತಂದು ಯೋಜನೆಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕು ಎಂದು ಕರೆ ನೀಡಿದರು.

ಮಾನ್ಯ ಉಪಾಧ್ಯಕ್ಷರು, ಪ್ರಸ್ತುತ ಶೇಕಡ 10% ಹಣ ಬಂದಿದೆ; ಜಿಲ್ಲೆಗೆ ಒಂದೇ ಖಾತೆಯಿದ್ದು, ಕೆಲವು ಪಂಚಾಯಿತಿಗಳಲ್ಲಿ ಡಾಟಾ ಎಂಟ್ರಿ ಆಪರೇಟರ್ ಗಳು ಮಹಿಳೆಯರಾದ್ದರಿಂದ ಹಣ ಸೆಳೆಯಲು ರಾತ್ರೋ-ರಾತ್ರಿ ಬರಲಾಗುವುದಿಲ್ಲ; ಆದುದರಿಂದ ತಾಲ್ಲೂಕುವಾರು ಹಣ ಬಿಡುಗಡೆಯಾದರೆ ಒಳ್ಳೆಯದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರತಿಯಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಎಲ್ಲ ಮಾನ್ಯ ಸದಸ್ಯರೂ ಒಪ್ಪುವುದಾದರೆ ಮನೆಯೆ ಮೊದಲ ಪಾಠಶಾಲೆ ಎಂಬಂತೆ ಎಲ್ಲ (ಪ್ರಸ್ತುತ 56 ಮಂದಿ) ಮಂದಿ ಸದಸ್ಯರುಗಳು ಆಸಕ್ತಿ ವಹಿಸಿ (ತಾವು ಹುಟ್ಟಿದ ಗ್ರಾಮಗಳಲ್ಲಿ) 1-2 ತಿಂಗಳುಗಳಲ್ಲಿ ಎಲ್ಲ ಕುಟುಂಬಗಳಿಗೂ ಪೂರ್ಣ ಪ್ರಮಾಣ ದಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಕ್ರಮವಹಿಸಿದಲ್ಲಿ ಎನ್.ಆರ್.ಇ.ಜಿ.ಎ., ಮತ್ತು ಎನ್.ಬಿ.ಎ., ಸಮೀಕರಣದಡಿ ಹಣ ಪಾವತಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಹಾಗೂ ಈ ಬಗ್ಗೆ ತಾಲ್ಲೂಕುವಾರು ಒಂದು ಕಾರ್ಯಕ್ರಮ ಹಮ್ಮಿಕೊಂಡರೆ ನಾನೂ ಬರುತ್ತೇನೆ ಎಂದರು.

ಮಾನ್ಯ ಸದಸ್ಯರಾದ ಶ್ರೀಮತಿ ಯಶೋಧ ರವರು, ಅವರ ಮಧುಗಿರಿ ತಾಲ್ಲೂಕು ಜಕ್ಕೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಂದ್ರಗಿರಿ ಗ್ರಾಮದಲ್ಲಿ ದೇವಸ್ಥಾನದ ಹೆಸರಿನಲ್ಲಿ ಅಕ್ರಮ ನಡೆದಿರುವುದಾಗಿ ಸಭೆಯ ಗಮನಕ್ಕೆ ತಂದರು. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಪರಿಶೀಲಿಸಿ ನೋಟೀಸ್ ನೀಡುವಂತೆ ಸಂಬಂಧಪಟ್ಟ ಅಧಿಕಾರಿಯವರಿಗೆ ತಿಳಿಸಿದರು

(ಕ್ರಮ : ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿ.ಪಂ., ತುಮಕೂರು)

ಮಾನ್ಯ ಅಧ್ಯಕ್ಷರು, ಅಧಿಕಾರಿಗಳ ಜವಾಬ್ದಾರಿಯ ಜೊತೆಗೆ ಚುನಾಯಿತ ಪ್ರತಿನಿಧಿಗಳ ಜವಾಬ್ದಾರಿಯೂ ಸೇರಿದಂತೆ ನಮ್ಮ-ನಮ್ಮ ಗ್ರಾಮಗಳಲ್ಲಿ100% ಪ್ರತಿ ಮನೆಗಳಲ್ಲಿಯೂಶೌಚಾಲಯ ನಿರ್ಮಾಣ ಮಾಡಲು ಗಮನಹರಿಸೋಣ; ಮಾದರಿ ಗ್ರಾಮಗಳನ್ನು ಮಾಡಲು ಎಲ್ಲ ಮಾನ್ಯ ಸದಸ್ಯರು ಸಹಕರಿಸಬೇಕು ಎಂದು ಕರೆ ನೀಡಿದರು.

ಪಾವಗಡ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು, ನರೇಗಾ ಯೋಜನೆಯಡಿ ನಿರ್ಮಾಣ ಮಾಡುವ ಶೌಚಾಲಯಗಳಿಗೆ ಒಂದೇ ಹಂತದಲ್ಲಿ ಹಣ ನೀಡಲು ವ್ಯವಸ್ಥೆಗೊಳಿಸಿಕೊಡಬೇಕೆಂದು ಕೋರಿದರು.

ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಆಗಬಹುದೆಂದು ತಿಳಿಸಿದರು, ನಂತರ ನರೇಗಾ ಯೋಜನೆಯಡಿ ಆಗಿರುವ ಕೆಲಸಕ್ಕೆ ದಾಖಲೆಗಳನ್ನು ಸರಿಪಡಿಸಲಾಗಿದೆ ಎಂದು ತಿಳಿಸಿ ಅಧಿಕಾರಿಗಳು ತೊಂದರೆ ಅನುಭವಿಸುತ್ತಿದ್ದಾರೆ ಎಂದು ವಿಷಾಧ ವ್ಯಕ್ತಪಡಿಸಿದರು. ನಂತರ ಲೋಪವಿಲ್ಲದೆ ಕೆಲಸ ಮಾಡಿರುವವರಿಗೆ ಹಣ ಬಿಡುಗಡೆ ಮಾಡಲು ಸರ್ಕಾರವನ್ನು ಕೋರಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

(ಕ್ರಮ : ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿ.ಪಂ., ತುಮಕೂರು)

ಮಾನ್ಯ ಸದಸ್ಯರಾದ ಶ್ರೀಮತಿ ಯಶೋಧ ರವರು, ಮಧುಗಿರಿ ತಾಲ್ಲೂಕು ದೊಡ್ಡೇರಿ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಗ್ರಾಮ ಸಭೆಯಲ್ಲಿ ಆಯ್ಕೆಯಾಗಿರುವ ಫಲಾನುಭವಿಯ ಹೆಸರನ್ನು ವೈಟ್ ಲೆಡ್ ಹಾಕಿ ತಿದ್ದಿರುತ್ತಾರೆ, ಅದನ್ನು ಸರಿಪಡಿಸಿ ಮೂಲ ನಿರ್ಣಯವನ್ನೇ ಅಂಗೀಕರಿಸಬೇಕು; ಅಲ್ಲದೆ, ವಸತಿ ಫಲಾನುಭವಿಗಳ ಪಟ್ಟಿಯನ್ವಯ ಮನೆ ಕಟ್ಟಿ ಒಂದು ವರ್ಷವಾದರೂ ಸಂಬಂಧಪಟ್ಟ ಫಲಾನುಭವಿಗೆ ಈ ವರೆಗೆ ಬಿಲ್ ಪಾವತಿಯಾಗಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಅಧ್ಯಕ್ಷರು, ದೊಡ್ಡೇರಿ ಗ್ರಾಮ ಸಭೆಯಲ್ಲಿ ಅನುಮೋದನೆಯಾಗಿರುವ ವಸತಿ ಫಲಾನುಭವಿಯ ಹೆಸರನ್ನು ತದನಂತರ ವೈಟ್ ಲೆಡ್ ಹಾಕಿ ಬೇರೆ ಹೆಸರನ್ನು ನಮೂದಿಸಿದ್ದಾರೆ, ಇದು ಗ್ರಾಮಸಭೆ ನಿರ್ಣಯಕ್ಕೆ ವಿರುದ್ಧವಾಗಿದೆ, ಎಂದ ಶ್ರೀಮತಿ ಯಶೋಧ ಶ್ರೀನಿವಾಸ್ ರ ಹೇಳಿಕೆಯ ಮೇರೆಗೆ ಗ್ರಾಮಸಭೆ ನಿರ್ಣಯವನ್ನೇ ಅಂಗೀಕರಿಸಲು ಸಭೆಯು ಸರ್ವಾನುಮತದಿಂದ ನಿರ್ಧರಿಸಿತು ಹಾಗೂ ನೋಡಲ್ ಅಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಅಧಿಕಾರಿಯವರು ಕೂಡಲೇ ಪರಿಶೀಲಿಸಿ ಜಿಲ್ಲಾ ಪಂಚಾಯತ್ ಗೆ ವರದಿ ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸರ್ವಾನುಮತದ ಸೂಚನೆ ನೀಡಿತು.

(ಕ್ರಮ : ನೋಡಲ್ ಅಧಿಕಾರಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ., ಮಧುಗಿರಿ)

ವಿಷಯ ಸೂಚಿ 05 :- ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಕ್ಕೆ ನಿಗಧಪಡಿಸಿರುವ ಸಂಖ್ಯೆಗಿಂತ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶ ಕೋರಿರುವುದರಿಂದ ಅವರಿಗೂ ಕೂಡ ವ್ಯಾಸಂಗದ ದೃಷ್ಟಿಯಿಂದ ಅವಕಾಶ ಕಲ್ಪಿಸಲು ಪರ್ಯಾಯ ಕ್ರಮಕ್ಕಾಗಿ ಚರ್ಚಿಸಿ ಸರ್ಕಾರವನ್ನು ಕೋರುವ ವಿಚಾರ.

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಕ್ಕೆ ನಿಗಧಿಪಡಿಸಿರುವ ಸಂಖ್ಯೆಗಿಂತ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶ ಕೋರಿರುವುದರಿಂದ ಅವರಿಗೂ ಕೂಡ ವ್ಯಾಸಂಗದ ದೃಷ್ಟಿಯಿಂದ ಊಟದ ವ್ಯವಸ್ಥೆಗೆ ಅವಕಾಶ ಕಲ್ಪಿಸಿಕೊಡಬೇಕು; ವಿದ್ಯಾರ್ಥಿಗಳು ಬೀದಿಯಲ್ಲಿ ಅಲೆದಾಡುತ್ತಿದ್ದಾರೆ; ನಾಳೆಯಿಂದಲೇ ಅವರುಗಳಿಗೆ ಊಟ ನೀಡಲು ಸಂಬಂಧಪಟ್ಟವರಿಗೆ ಆದೇಶ ನೀಡಬೇಕು ಎಂದು ಸಭೆಯ ಗಮನಕ್ಕೆ ತಂದರು.

ಜಿಲ್ಲಾ ಅಧಿಕಾರಿ, ಬಿ.ಸಿ.ಎಂ. ರವರು, ಜಿಲ್ಲೆಯಲ್ಲಿ 59 ಪ್ರೀ-ಮೆಟ್ರಿಕ್ ಹಾಸ್ಟೆಲ್ ಗಳಿದ್ದು, ಇವುಗಳಲ್ಲಿ ಮಂಜೂರಾದ 2565ಸಂಖ್ಯಾಬಲಕ್ಕೆ 2244 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು ಇನ್ನೂ 320 ಸೀಟುಗಳು ಖಾಲಿ ಇರುತ್ತವೆ; ಪ್ರೀ-ಮೆಟ್ರಿಕ್ ಹಾಸ್ಟೆಲ್ ಗಳಲ್ಲಿ ಯಾವುದೇ ಗೊಂದಲವಿರುವುದಿಲ್ಲ; ಆದರೆ ಜಿಲ್ಲೆಯಲ್ಲಿ 40 ಪೋಸ್ಟ್-ಮೆಟ್ರಿಕ್ ಹಾಸ್ಟೆಲ್ ಗಳಿದ್ದು, ಇವುಗಳಲ್ಲಿ ಮಂಜೂರಾದ 4162 ಸಂಖ್ಯಾಬಲಕ್ಕೆ 5136 ಅರ್ಜಿಗಳು ಬಂದಿದ್ದು, ಈ ಪೈಕಿ3381 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ಇನ್ನು 874 ವಿದ್ಯರ್ಥಿಗಳಿಗೆ ಮಾತ್ರ ಅವಕಾಶ ವಿರುತ್ತದೆ; ಪ್ರವೇಶಾತಿ ಮುಂದುವರೆದಿದ್ದು, 1313 ಅರ್ಜಿಗಳು ಬಾಕಿ ಉಳಿಯುತ್ತವೆ; ಹೆಣ್ಣು ಮಕ್ಕಳಿಗೆ ಮಾತ್ರ ವಸತಿಗೆ ವ್ಯವಸ್ಥೆ ಮಾಡಿ ಗಂಡು ಮಕ್ಕಳಿಗೆ ಕೇವಲ ಊಟದ ವ್ಯವಸ್ಥೆ ಮಾಡಬಹುದು; ಪ್ರಸ್ತುತ ಹಾಸ್ಟೆಲ್ ಗಳನ್ನು

ವಿಭಜನೆ ಮಾಡಲಾಗಿದ್ದು, ಪ್ರೀ-ಮೆಟ್ರಿಕ್ ಹಾಸ್ಟೆಲ್ ನಲ್ಲಿ ಬಾಕಿ ಉಳಿದಿರುವ 320 ಸೀಟುಗಳನ್ನು ಬದಲಾವಣೆ ಮಾಡಿ ಪೋಸ್ಟ್-ಮೆಟ್ರಿಕ್ ನಲ್ಲಿ ಪ್ರವೇಶಕ್ಕೆ ಬಾಕಿ ಉಳಿದಿರುವ 1313 ವಿದ್ಯಾರ್ಥಿಗಳ ಪೈಕಿ 320 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಬಹುದು ಎಂದು ಸಭೆಗೆ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸರ್ಕಾರದ ನಿಗಧಿಯ ಪ್ರಕಾರ ಊಟ-ವಸತಿ ಸೇರಿ ಒಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ವಾರ್ಷಿಕ ಎಷ್ಟು ಹಣ ವೆಚ್ಚ ಮಾಡಲಾಗುತ್ತಿದೆ ಎಂದು ಪ್ರಶ್ನಿಸಿದರು. ಪ್ರತಿಯಾಗಿ, ಜಿಲ್ಲಾಧಿಕಾರಿ, ಬಿ.ಸಿ.ಎಂ.ರವರು, ಒಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ವಾರ್ಷಿಕ ಸುಮಾರು ರೂ. 1,500/- ವೆಚ್ಚ ಮಾಡಲಾಗುವುದು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್. ಉಮೇಶ್ ರವರು, ವಿದ್ಯಾಸಿರಿ ಯೋಜನೆಯಡಿ ಕೆಲವು ಶ್ರೀಮಂತ ಮಕ್ಕಳಿಗೆ ಪ್ರವೇಶ ದೊರೆತು ಬಡ ಮಕ್ಕಳು ಸೌಲಭ್ಯ ವಂಚಿತರಾಗಿದ್ದಾರೆ; ಈ ಹೆಚ್ಚುವರಿಪ ವಿದ್ಯಾರ್ಥಿಗಳ ಪೈಕಿ ಕೆಲವರು ಊಟ-ವಸತಿ ಎರಡಕ್ಕೂ ಸೇರಿ ಅರ್ಜಿ ಹಾಕಿದ್ದಾರೆ, ಮತ್ತೆ ಕೆಲವರು ಕೇವಲ ಊಟಕ್ಕಾಗಿ ಮಾತ್ರ ಅರ್ಜಿ ಹಾಕಿದ್ದಾರೆ; ಆದುದರಿಂದ ಪ್ರಸ್ತುತ ಹೆಚ್ಚುವರಿ ಇರುವ 1313 ಮಕ್ಕಳಿಗೆ ಮಕ್ಕಳಿಗೆ ವಿದ್ಯಾಸಿರಿ ಯೋಜನೆಯಡಿ ಪ್ರಥಮ ಪ್ರಾಶಸ್ತ್ಯ ನೀಡಿ ಸೌಲಭ್ಯ ನೀಡುವಂತೆ ಸರ್ಕಾರಕ್ಕೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಮಾನ್ಯ ಸಚಿವರಿಗೆ ಮನವಿ ಮಾಡಬಹುದಲ್ಲವೇ? ಎಂದು ಸಭೆಯ ಗಮನ ಸೆಳೆದರು.

ಮಾನ್ಯ ಅಧ್ಯಕ್ಷರು, ಹೆಚ್ಚುವರಿ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳಿಗೆ ಕೊರತೆಯಾಗುತ್ತದೆಯೇ ವಿನ: ಊಟಕ್ಕೆ ಕೊರತೆಯಾಗುವುದಿಲ್ಲ; ಬಾಲಕಿಯರ ಹಾಸ್ಟೆಲ್ ಗಳಲ್ಲಿ 8 ಮಕ್ಕಳು ಇರುವೆಡೆ ಇನ್ನೂ 4 ಮಕ್ಕಳನ್ನು ಸೇರಿಸಿ ವಸತಿ ವ್ಯವಸ್ಥೆ ಕಲ್ಪಿಸಲು ಕ್ರಮವಹಿಸುವಾ; ಹೆಣ್ಣು ಮಕ್ಕಳಿಗೆ ಊಟ-ವಸತಿ ಸೌಲಭ್ಯ ನೀಡಿ, ಗಂಡು ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಿ, ಬಿಲ್ಡಿಂಗ್ ಹುಡುಕಿ ವ್ಯವಸ್ಥೆ ಮಾಡಲು ಕ್ರಮವಹಿಸುವಾ ಎಂದು ಸಭೆಗೆ ಭರವಸೆಯಿತ್ತರು.

ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿ, ಮಧುಗಿರಿ ಇವರು, ಗಂಡು ಮಕ್ಕಳಿಗೆ ಊಟ ಮಾತ್ರ ಕೊಟ್ಟರೆ, ಬಾಡಿಗೆಗೆ ರೂಂ ಮಾಡಿಕೊಂಡು ಬಾಡಿಗೆ ಕಟ್ಟಲು ಕಷ್ಟವಾಗುತ್ತದೆ; ಆದುದರಿಂದ ಗಂಡು ಮಕ್ಕಳಿಗೂ ಸಹ ಎರಡೂ (ಊಟ-ವಸತಿ) ಸೌಲಭ್ಯಕ್ಕೆ ವ್ಯವಸ್ಥೆ ಮಾಡಿಕೊಡಬೇಕು ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಇದು ಕೂಡಲೇ ಬಗೆಹರಿಸಬೇಕಾದ ವಿಚಾರ; ಪೋಸ್ಟ್-ಮೆಟ್ರಿಕ್ ಹಾಸ್ಟೆಲ್ ಗೆ ಬೇಡಿಕೆ ಇದೆ; ಮಂಜೂರಾದ ಸಂಖ್ಯಾಬಲಕ್ಕೆ ಸರ್ಕಾರ ಹಣ ನೀಡುತ್ತದೆ; ವಿದ್ಯಾಸಿರಿ ಯೋಜನೆಯಡಿ ಈ ಹೆಣ್ಣು ಮಕ್ಕಳಿಗೆ ಅನುಕೂಲವಾಗುವುದೇ ಇಲ್ಲ; ಹಳ್ಳಿಯಿಂದ ಬಂದಿರುವ ಹೆಣ್ಣು ಮಕ್ಕಳು ಅವರದೇ ಆದ ಕೆಲವೊಂದು ವೈಯಕ್ತಿಕ ಸಮಸ್ಯೆಗಳಿಂದಾಗಿ ಯಾರ ಮನೆಯಲ್ಲಿಯೂ ಇರಲು ಸಾಧ್ಯವಾಗುವುದಿಲ್ಲ; ಅಲ್ಲದೆ, ಈ ಮಕ್ಕಳಿಗೆ ಪ್ರೀ-ಮೆಟ್ರಿಕ್ ಹಾಸ್ಟೆಲ್ ಗಳಲ್ಲಿ ವ್ಯವಸ್ಥೆ ಕಲ್ಪಿಸಿದಲ್ಲಿ ಪ್ರೀ-ಮೆಟ್ರಿಕ್ ಮತ್ತು ಪೋಸ್ಟ್-ಮೆಟ್ರಿಕ್ ಹಾಸ್ಟೆಲ್ ಗಳಲ್ಲಿ ಪ್ರತಿ ವಿದ್ಯಾರ್ಥಿಗೆ ನೀಡುವ ಹಣದಲ್ಲಿ ವ್ಯತ್ಯಾಸವಾಗುತ್ತದೆ, ಈ ರೀತಿ ಆಗಬಾರದು; ಆದುದರಿಂದ ಈ ನಿಟ್ಟಿನಲ್ಲಿ ಪ್ರಸ್ತುತ ಪೋಸ್ಟ್-ಮೆಟ್ರಿಕ್ ಹಾಸ್ಟೆಲ್ ಮಂಜೂರಾದ ಸಂಖ್ಯಾಬಲಕ್ಕೆ ಪ್ರವೇಶ ಪಡೆದು ಹೆಚ್ಚುವರಿಯಾಗಿ ಬಾಕಿ ಉಳಿದಿರುವ ವಿದ್ಯಾರ್ಥಿಗಳನ್ನು ಪೋಸ್ಟ್-ಮೆಟ್ರಿಕ್ ಹಾಸ್ಟೆಲ್ ಗಳಿಗೆ ತಾತ್ಕಾಲಿಕವಾಗಿ ಷಿಫ್ಟ್ ಮಾಡಿದರೆ ಅನುಕೂಲವಾಗುತ್ತದೆ; ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಮಗ್ರ ಚರ್ಚೆಯ ನಂತರ, ಪ್ರಸಕ್ತ ಸಾಲಿನಲ್ಲಿ ಪೋಸ್ಟ್-ಮೆಟ್ರಿಕ್ ಹಾಸ್ಟೆಲ್ ಗೆ ಪ್ರವೇಶ ಕೋರಿರುವ ಹೆಚ್ಚುವರಿ 1313 ವಿದ್ಯಾರ್ಥಿಗಳಿಗೆ ಊಟ-ವಸತಿ ಸೌಲಭ್ಯ ಒದಗಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು

ಮತ್ತು, ಪ್ರೀ-ಮೆಟ್ರಿಕ್ ವಿದ್ಯಾರ್ಥಿನಿಲಯಗಳಲ್ಲಿನ ಉಳಿಕೆ ಸ್ಥಾನಗಳನ್ನು ಪೋಸ್ಟ್-ಮೆಟ್ರಿಕ್ ವಿದ್ಯಾರ್ಥಿ ನಿಲಯಗಳಲ್ಲಿ ತುಂಬಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

(ಕ್ರಮ : ಜಿಲ್ಲಾ ಅಧಿಕಾರಿ, ಬಿ.ಸಿ.ಎಂ. ಇಲಾಖೆ, ತುಮಕೂರು)

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಪ್ರೀ-ಮೆಟ್ರಿಕ್ ಮತ್ತು ಕಾಲೇಜು ಹಾಸ್ಟೆಲ್ ಗಳಲ್ಲಿಒಟ್ಟಾರೆ ಇನ್ನೂ 685 ಸೀಟುಗಳು ಖಾಲಿ ಇವೆ ಅಲ್ಲಿ ಅಡ್ಜಸ್ಟ್ ಮಾಡಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪೂರಕವಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಹೆಚ್ಚುವರಿ ಹಾಸ್ಟೆಲ್ ಗಳಿಗೆ ವ್ಯವಸ್ಥೆ ಮಾಡಲೇಬೇಕು; ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸರ್ಕಾರದ ಹಂತದಲ್ಲಿ ವ್ಯವಹರಿಸಬೇಕು; ಆದುದರಿಂದ ಈ ಕುರಿತು ಈ ಸಭೆಯ ಬಳಿಕ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಅಧಿಕಾರಿ ಬಿ.ಸಿ.ಎಂ., ಜಿಲ್ಲಾ ಸಮಾಜ ಕಲ್ಯಾಣಾಧಿ ಕಾರಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಎಲ್ಲರೂ ಕುಳಿತು ಕೂಲಂಕುಷವಾಗಿ ಸಮಾಲೋಚಿಸಿ ಅಂತಿಮ ಗೊಳಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಉಗ್ರಪ್ಪನವರು, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಅರೆ ಅಲೆಮಾರಿ ಜನಾಂಗದ 56 ಮಕ್ಕಳನ್ನು ನೇರವಾಗಿ ಸೇರಿಸಿಕೊಳ್ಳಲು ಅವಕಾಶವಿದ್ದು ಈ ಬಗ್ಗೆ ಸ್ಪಷ್ಟ ಮಾಹಿತಿ ನೀಡಬೇಕು ಎಂದು ಜಿಲ್ಲಾ ಅಧಿಕಾರಿ ಬಿ.ಸಿ.ಎಂ.ರವರನ್ನು ಕೇಳಿದರು. ಪ್ರತಿಯಾಗಿ ಜಿಲ್ಲಾ ಅಧಿಕಾರಿ ಬಿ.ಸಿ.ಎಂ.ರವರು, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ಮಾನ್ಯ ಸದಸ್ಯರು ಮುಂದುವರಿದು, ಮಾರ್ಗಸೂಚಿಯನ್ವಯ ಅರೆ ಅಲೆಮಾರಿ ಜನಾಂಗದವರಿಗೆ ವಸತಿ ಯೋಜನೆಯಡಿ ಮನೆ ಮಂಜೂರು ಮಾಡಲು ಸಂಬಂಧಪಟ್ಟ ಫಲಾನುಭವಿಗೆ ಗ್ರಾಮ ಠಾಣಾದಲ್ಲಿ ನಿವೇಶನವಿರಬೇಕು ಎಂಬ ಷರತ್ತು ವಿಧಿಸಲಾಗಿದೆ; ಈ ರೀತಿಯಾದರೆ ಅವರುಗಳು ಮನೆ ಕಟ್ಟಲು ಸಾಧ್ಯವೇ ಇಲ್ಲ; ಲಭ್ಯ ಮಾಹಿತಿ ಪ್ರಕಾರ 350 ಫಲಾನುಭವಿಗಳ ಅರ್ಜಿಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಕಳುಹಿಸಲಾಗಿದೆ; ಅದರ ಬದಲು ಇಂದಿರಾ ಆವಾಸ್ ಅಥವಾ ಬಸವ ವಸತಿ ಯೋಜನೆಯಡಿ ಸಮೀಕರಿಸಿ ಸೌಲಭ್ಯ ನೀಡಿ ತಾಲ್ಲೂಕು ಪಂಚಾಯಿತಿಗೆ ನೀಡಿದರೆ ಅನುಕೂಲವಾಗುತ್ತದೆ; ಯಾವುದೇ ಒಂದು ಪಂಚಾಯಿತಿಯಲ್ಲಿ ಅಲೆಮಾರಿ/ಅರೆ ಅಲೆಮಾರಿ ಫಲಾನುಭವಿಗಳು ಇಲ್ಲವೆಂದಾಗ ಅದೇ ತಾಲ್ಲೂಕಿನ ಬೇರೆ ಗ್ರಾಮ ಪಂಚಾಯಿತಿಗೆ ವರ್ಗಾಯಿಸುತ್ತಾರೆ; ಜಿಲ್ಲಾ ಅಧಿಕಾರಿ ಬಿ.ಸಿ.ಎಂ.ರವರಿಗೆ ಕೆಲಸ ನಿರ್ವಹಿಸಲು ತೊಂದರೆಯಾಗುತ್ತದೆ; ಆದುದರಿಂದ ಗ್ರಾಮ ಪಂಚಾಯಿತಿ ವಶಕ್ಕೆ ನೀಡಲಿ; ಆಗ ಕೇವಲ 10 ಮನೆಗಳನ್ನು ನೀಡಿದರೂ ಸಮಸ್ಯೆಯಾಗುವುದಿಲ್ಲ ಎಂದು ಸಭೆಗೆ ವಿವರಿಸಿದರು.

ನಂತರ, ಮಧುಗಿರಿ ತಾಲ್ಲೂಕಿನಲ್ಲಿ 99% scholarship ಹಣವನ್ನು ಸಂಬಂಧಪಟ್ಟ ವಿದ್ಯಾರ್ಥಿಗಳ ಖಾತೆಗೆ ಜಮೆಗೊಳಿಸಿದ್ದಾರೆ; ಆದರೆ ಬೇರೆ ತಾಲ್ಲೂಕುಗಳಲ್ಲಿ ನೀಡಿರುವುದಿಲ್ಲ; ಆದುದರಿಂದ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಜಿಲ್ಲಾ ಅಧಿಕಾರಿ ಬಿ.ಸಿ.ಎಂ., ಡಿ.ಡಿ.ಪಿ.ಐ ತುಮಕೂರು/ಮಧುಗಿರಿ ಇವರುಗಳ ಕೋ-ಆರ್ಡಿನೇಷನ್ ನಲ್ಲಿ ಪ್ರೀ-ಮೆಟ್ರಿಕ್ ಸ್ಕಾಲರ್ ಷಿಪ್ ನ್ನು 100% ಆನ್ ಲೈನ್ ನಲ್ಲಿ ಅಪ್ ಲೋಡ್ ಮಾಡಬೇಕು; ಹಾಗೂ ಈ ವರೆಗೆ ಪಾವತಿಯಾಗದಿರುವ ಕುರಿತು ವರದಿ ನೀಡಬೇಕು

ಮತ್ತು ಈ ಬಗ್ಗೆ ಕಳೆದ ವರ್ಷ ಕೆಲವು ತಾಲ್ಲೂಕುಗಳಲ್ಲಿ ವ್ಯಪಗತವಾಗಿರುವ ಕುರಿತು ವಿವರ ನೀಡಬೇಕು ಎಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು, 2014-15ನೇ ಸಾಲಿಗೆ 100% ಸ್ಕಾಲರ್ಷಿಪ್ ನ್ನು ಸಂಬಂಧಪಟ್ಟ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮೆಗೊಳಿಸಲು ತುರ್ತು ಅಗತ್ಯ ಕ್ರಮವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

(ಕ್ರಮ : DSW & DO BCM, ತುಮಕೂರು)

ಮಾನ್ಯ ಸದಸ್ಯರಾದ ಶ್ರೀ ಅರುಣ್ ಕುಮಾರ್ ರವರು, ಕುಣಿಗಲ್ ತಾಲ್ಲೂಕು ಹೊನ್ನ ನಾಯಕನಹಳ್ಳಿ ಗ್ರಾಮದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯವತಿಯಿಂದ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಹಾಸ್ಟೆಲ್ ಗಳಿಗೆ ಒಬ್ಬ ಮಹಿಳಾ ಮತ್ತು ಒಬ್ಬ ಪುರುಷ ವಾರ್ಡನ್ ರನ್ನು ನಿಯೋಜಿಸಬೇಕು ಎಂದು ಕೇಳಿದರು. ಪ್ರತಿಯಾಗಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರ ಪರವಾಗಿ ಸಭೆಗೆ ಹಾಜರಾಗಿದ್ದ ಅಧಿಕಾರಿ ಯವರು, ವಾರ್ಡನ್ ರನ್ನು ನೇಮಿಸಿಲ್ಲದ ಕಾರಣ ಎರಡೂ ಹಾಸ್ಟೆಲ್ ನಿಂದ ಒಬ್ಬ ಮಹಿಳಾ ಶಿಕ್ಷಕಿಯವರನ್ನು ನೇಮಿಸಿರುವುದಾಗಿಯೂ ಅವರು ಎರಡೂ ಹಾಸ್ಟೆಲ್ ಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿಯೂ ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು, ಈ ಕುರಿತು ಕ್ರೈಸ್ಟ್ ಸಂಸ್ಥೆಗೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸುವಂತೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.

(ಕ್ರಮ : ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ತುಮಕೂರು)

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಹೊಸ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ನೀಡಿರುವುದಿಲ್ಲ; ಶಿರಾ ತಾಲ್ಲೂಕಿನಲ್ಲಿ ನಡೆಯುತ್ತಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಡೆಸ್ಕ್ ಗಳು ಮಂಚ ಇತ್ಯಾದಿ ಪೀಠೋಪಕರಣಗಳನ್ನು ನೀಡಿರುವುದಿಲ್ಲ, ಆದುದರಿಂದ ಇಡೀ ಜಿಲ್ಲೆಯಲ್ಲಿ ಮೂಲಭೂತ ಸೌಕರ್ಯವಿಲ್ಲದ ವಸತಿ ಶಾಲೆಗಳ ಪಟ್ಟಿ ಪಡೆದು ಕೂಡಲೇ ಸರ್ಕಾರಕ್ಕೆ ಸಲ್ಲಿಸಬೇಕು; ಸದರಿ ಶಾಲೆಗಳಲ್ಲಿ ನೀರಿನ ಕೊರತೆ ಇರುವ ಕುರಿತು ಜಿಲ್ಲಾ ಪಂಚಾಯಿತಿ ವತಿಯಿಂದ ಪರಿಶೀಲಿಸಿ ಕ್ರಮವಹಿಸಬೇಕು ಹಾಗೆಯೇ ಕ್ರೈಸ್ಟ್ ಸಂಸ್ಥೆಗೂ ಪತ್ರ ಬರೆದು ಸರ್ಕಾರಕ್ಕೂ ಮನವಿ ಸಲ್ಲಿಸಬೇಕು ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಮಧುಗಿರಿ ತಾಲ್ಲೂಕು ಬೇಡತ್ತೂರು ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ 240 ಮಕ್ಕಳ ಸಂಖ್ಯಾಬಲಕ್ಕೆ ಕೇವಲ 3 ಶೌಚಾಲಯಗಳಿದ್ದು, ಮಾರ್ಗಸೂಚಿ ಪ್ರಕಾರ ಹೆಚ್ಚುವರಿ ಶೌಚಾಲಯ ನಿರ್ಮಾಣಕ್ಕೆ ಕ್ರಮವಹಿಸಬೇಕು ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಶೌಚಾಲಯಗಳನ್ನು ನಿರ್ಮಿಸಲು ಈಗಾಗಲೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಿರುವುದಾಗಿ ಮಾನ್ಯ ಸದಸ್ಯರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಅರುಣ್ ಕುಮಾರ್ ರವರು, ಕುಣಿಗಲ್ ತಾಲ್ಲೂಕು ಎಡೆಯೂರು ಹೋಬಳಿ ದೊಡ್ಡಬಿದರೆ ಗ್ರಾಮದಲ್ಲಿ ನಿರ್ಮಾಣಗೊಂಡಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಕಟ್ಟಡವನ್ನು

ನಿರ್ಮಿತಿ ಕೇಂದ್ರದವರು ಈ ವರೆವಿಗೂ ಸಹ ಇಲಾಖೆಯ ವಶಕ್ಕೆ ನೀಡಿರುವುದಿಲ್ಲ; ಸದರಿ ಕಟ್ಟಡದಲ್ಲಿ ಮೂಲಭೂತ ಸೌಕರ್ಯಗಳು ಇರುವುದಿಲ್ಲ; ಆವರಣ ಗೋಡೆ ನಿರ್ಮಾಣವಾಗಿರುವುದಿಲ್ಲ, ರಸ್ತೆ ನಿರ್ಮಾಣವಾಗಿರು ವುದಿಲ್ಲ; ಹೀಗಿದ್ದಾಗ್ಯೂ ಸಹ ವಿದ್ಯಾರ್ಥಿಗಳ ಪ್ರವೇಶಾತಿ ನಡೆಯುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು.

(ಕ್ರಮ : ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಜಿಲ್ಲಾ ಅಧಿಕಾರಿ ಬಿ.ಸಿ.ಎಂ., ತುಮಕೂರು)

ವಿಷಯ ಸೂಚಿ 06 :- ಪ್ರೌಢಶಾಲೆಗಳಿಗೆ ಗಣಕಯಂತ್ರ ಯೋಜನೆ ಅನುಷ್ಠಾನದಲ್ಲಿ ವಿಳಂಬವಾಗಿರುವ ಬಗ್ಗೆ ಚರ್ಚಿಸಿ ಗಣಕಯಂತ್ರಗಳನ್ನು ತುರ್ತು ಸರಬರಾಜು ಮಾಡಲು ಕ್ರಮವಹಿಸುವ ಕುರಿತು.

ವಿಷಯಕ್ಕೆ ಸಂಬಂಧಿಸಿದಂತೆ ಐ.ಸಿ.ಟಿ.-3ನೇ ಹಂತದ ಯೋಜನೆಯಡಿ ಪ್ರೌಢಶಾಲೆಗಳಿಗೆ ಗಣಕ ಯಂತ್ರಗಳನ್ನು ಅಳವಡಿಸಿ ಗಣಕ ಮತ್ತು ಗಣಕ ಆಧಾರಿತ ಶಿಕ್ಷಣ ನೀಡುವಲ್ಲಿ ವಿಳಂಬವಾಗಿರುವುದಕ್ಕೆ ಕಾರಣವೇನು? ಎಂದು ಮಾನ್ಯ ಅಧ್ಯಕ್ಷರು ಪ್ರಶ್ನಿಸಲಾಗಿ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯ ಪ್ರಾಂಶುಪಾಲರು, ಐ.ಸಿ.ಟಿ. ಯೋಜನೆಯಡಿ ತುಮಕೂರು ಮತ್ತು ಮಧುಗಿರಿ ಶೈಕ್ಷಣಿಕ ಜಿಲ್ಲೆಗಳಲ್ಲಿ ಐದು ವರ್ಷಗಳಫ ಕರಾರು ಒಪ್ಪಂದದ ಮೂಲಕ ಈ ಕೆಳಕಂಡ ಸಂಸ್ಥೆಯವರಿಂದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಗಣಕ ಮತ್ತು ಗಣಕ ಆಧಾರಿತ ಶಿಕ್ಷಣವನ್ನು ಅನುಷ್ಠಾನಗೊಳಿಸಲಾಗಿರುತ್ತದೆ;

| ಕ್ರ ಸಂ | ಐ.ಸಿ.ಟಿ. ಯೋಜನೆ ಹಂತ | ಕರಾರು ಒಪ್ಪಂದದ ಅವಧಿ | ಸಂಸ್ಥೆಯ ಹೆಸರು | ಯೋಜನೆ ಅನುಷ್ಠಾನ ಗೊಳಿಸಲಾದ ಶಾಲೆಗಳ ಸಂಖ್ಯೆ | ಷರಾ |
|---|---|---|---|---|---|
| 1 | ಹಂತ - I | 2007-08 ರಿಂದ 2011-12 ರ ವರೆಗಿನ 5 ವರ್ಷಗಳು | ಮೆ:ಎವಿರಾನ್ ಸಂಸ್ಥೆ, ಚೆನ್ನೈ | 28 ಸರ್ಕಾರಿ ಪ್ರೌಢಶಾಲೆಗಳು | - |
| 2 | ಹಂತ – II | 04-09-2008 ರಿಂದ 30-09-2013 ರ ವರೆಗಿನ 5 ವರ್ಷಗಳು | ಮೆ:ಎಡುಕಾಂಪ್ ಸಲ್ಯೂಷನ್ ಲಿ., ಬೆಂಗಳೂರು | 76 ಸರ್ಕಾರಿ ಪ್ರೌಢಶಾಲೆಗಳು | - |
| 3 | ಹಂತ - III | - | ಮೆ:ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು | 341 ಪ್ರೌಢಶಾಲೆಗಳು (110 ಸರ್ಕಾರಿ + 231 ಅನುದಾನಿತ ಪ್ರೌಢಶಾಲೆಗಳು | ಮೆ:ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ಇವರೊಂದಿಗೆ ಮಾಡಿಕೊಳ್ಳಲಾಗಿದ್ದ 5 ವರ್ಷಗಳ ಕರಾರು ಒಪ್ಪಂದವು ಕಾರಣಾಂತರಗಳಿಂಮುರಿದು ಬಿದ್ದಿರುವುದರಿಂದ ಪ್ರಸ್ತುತ ಮೆ:ಎವೆರಾನ್ ಸಂಸ್ಥೆ, ಬೆಂಗಳೂರು ಇವರು ಮೆ:ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ಇವರೊಂದಿಗೆ ಮರುಒಪ್ಪಂದ ಮಾಡಿ ಕೊಂಡು ಒಂದು ತಿಂಗಳೊಳಗೆ ಗಣಕಯಂತ್ರಗಳನ್ನು ಸರಬರಾಜು ಮಾಡುವ ಸೂಚನೆಗಳು ಕಂಡುಬಂದಿರು ತ್ತವೆ |

ಎಂದು ಸವಿವರವಾಗಿ ಸಭೆಗೆ ತಿಳಿಸಿದರು.

ಆದರೆ ಈ ವಿವರಣೆಯನ್ನು ಒಪ್ಪದ ಮಾನ್ಯ ಅಧ್ಯಕ್ಷರು, ಈ ಬಗ್ಗೆ ತುರ್ತಾಗಿ ಸಂಬಂಧಿಸಿದ ಇಲಾಖೆಗೆ ಪತ್ರ ಬರೆದು ಗಣಕ ಯಂತ್ರ ತರಬೇತಿಗಳನ್ನು ಪ್ರಾರಂಭಿಸುವಂತೆ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯ ಪ್ರಾಂಶುಪಾಲರಿಗೆ ತಿಳಿಸಿದರಲ್ಲದೆ ಈ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಡಿ.ಡಿ.ಪಿ.ಐ., ತುಮಕೂರು/ಮಧುಗಿರಿ ರವರುಗಳಿಗೆ ತಿಳಿಸಿದ್ದನ್ನು ಸಭೆಯು ಸರ್ವಾನುಮತದಿಂದ ಒಪ್ಪಿತು.

(ಕ್ರಮ : ಡಿ.ಡಿ.ಪಿ.ಐ., ತುಮಕೂರು/ಮಧುಗಿರಿ)

ವಿಷಯ ಸೂಚಿ 07 :- ಗ್ರಾಮೀಣ ಪ್ರದೇಶಗಳಲ್ಲಿ ಸಮರ್ಪಕವಾಗಿ ಪಡಿತರ ಚೀಟಿ ವಿತರಣೆ ಆಗದಿರುವ ಬಗ್ಗೆ.

ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಅಧ್ಯಕ್ಷರು, ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟು ಕುಟುಂಬಗಳಿಗೆ ಯಾವ-ಯಾವ ಪಡಿತರ ಕಾರ್ಡ್ ಗಳನ್ನು ವಿತರಿಸಲಾಗಿದೆ ಎಂಬ ಬಗ್ಗೆ ನಿಖರವಾದ ಮಾಹಿತಿಯನ್ನು ನೀಡುವಂತೆ ಆಹಾರ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಹಾಜರಿದ್ದ ಆಹಾರ ಇಲಾಖೆಯ ಅಧಿಕಾರಿಗಳು, ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟು 6,41,080 ಕುಟುಂಬಗಳಿದ್ದು, ಈ ಪೈಕಿ 49268 ಅಂತ್ಯೋದಯ ಕಾರ್ಡುಗಳನ್ನು ನೀಡಲಾಗಿದೆ, 5,24,923 ಎ.ಪಿ.ಎಲ್ ಕಾರ್ಡುಗಳನ್ನು ವಿತರಿಸಲಾಗಿದೆ ಹಾಗೂ 84,888 ಬಿ.ಪಿ.ಎಲ್. ಕಾರ್ಡುಗಳನ್ನು ವಿತರಿಸಲಾಗಿದೆ; ಒಟ್ಟು 6,73,013 ಕಾರ್ಡುಗಳಿವೆ; ಇದಲ್ಲದೆ, ಪಡಿತರ ಚೀಟಿ ಕೋರಿ ಆನ್ ಲೈನ್ ಮೂಲಕ 1,76,035 ಅರ್ಜಿಗಳು ಬಂದಿದ್ದು, ಈ ಪೈಕಿ ಈ ವರೆಗೆ 73,878 ಪಡಿತರ ಚೀಟಿಗಳನ್ನು ವಿತರಿಸಲಾಗಿದ್ದು, ಸರ್ಕಾರ ಕಾರ್ಡುಗಳನ್ನು ನೀಡಿಲ್ಲವಾದ ಕಾರಣ ಇನ್ನೂ 76,191 ಪಡಿತರ ಚೀಟಿಗಳನ್ನು ನೀಡಬೇಕಾಗಿರುತ್ತದೆ;1-2 ಜನ ಇರುವ ಕುಟುಂಬಗಳಿಗೆ ಬಿ.ಪಿ.ಎಲ್. ಕಾರ್ಡ್ ನೀಡಿದರೆ ಪಡಿತರ waste ಆಗುತ್ತದೆ ಎನ್ನುವ ದೃಷ್ಟಿಯಿಂದ ಅಂತಹ ಕುಟುಂಬಕ್ಕೆ ಎ.ಪಿ.ಎಲ್. ಕಾರ್ಡ್ ನೀಡಲಾಗಿದೆ; 4-5 ಜನ ಇರುವ ಕುಟುಂಬಕ್ಕೆ ಬಿ.ಪಿ.ಎಲ್.ಕಾರ್ಡ್ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು, ಇನ್ನೂ 76,191 ಫಲಾನುಭವಿಗಳಿಗೆ ಪಡಿತರ ಚೀಟಿ ವಿತರಣೆಯಾಗಿಲ್ಲ ಎಂದರೆ ಆಹಾರ ಇಲಾಖೆ ನ್ಯಾಯಬೆಲೆ ಅಂಗಡಿಯವರೊಂದಿಗೆ ಸೇರಿ ಇಲಾಖೆ ಹದಗೆಟ್ಟಿದೆ ಎಂದು ತೀವ್ರವಾಗಿ ಆಕ್ಷೇಪಿಸಿದರಲ್ಲದೆ, ಸ್ಪಷ್ಟ ಅಂಕಿ-ಅಂಶಗಳನ್ನು ನೀಡಿದಲ್ಲಿ ಸಮಸ್ಯೆಯನ್ನು ಸರಿಪಡಿಸಲು ಕ್ರಮವಹಿಸುವುದಾಗಿ ಭರವಸೆಯಿತ್ತರು. ನಂತರ, ಪಡಿತರ ಚೀಟಿಗಾರಿ ಅರ್ಜಿ ಹಾಕಿರುವ ಎಲ್ಲ ಫಲಾನುಭವಿಗಳಿಗೆ ಪಡಿತರ ಕಾರ್ಡ್ ನೀಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

(ಕ್ರಮ : ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ತುಮಕೂರು)

ವಿಷಯ ಸೂಚಿ 08:- ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕಾಮಗಾರಿಗಳ ನಿರ್ವಹಣೆ ಅವ್ಯವಹಾರದಲ್ಲಿ ಕರ್ತವ್ಯ ಲೋಪವೆಸಗಿರುವ ಡಾಟಾ ಎಂಟ್ರಿ ಆಪರೇಟರ್ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ಇಂಜಿನಿಯರ್ ಗಳನ್ನು ತೆಗೆದು ಹಾಕಿರುವ ಬಗ್ಗೆ ಚರ್ಚೆ.

ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮ ಮಹಲಿಂಗಪ್ಪನವರು, ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕಾಮಗಾರಿಗಳ ನಿರ್ವಹಣೆ ಅವ್ಯವಹಾರದ ಸಂಬಂಧ ಕೊರಟಗೆರೆ ತಾಲ್ಲೂಕು ವ್ಯಾಪ್ತಿಯ 12 ಗ್ರಾಮ ಪಂಚಾಯಿತಿಗಳಲ್ಲಿ ಡಾಟಾ ಎಂಟ್ರಿ ಕಾರ್ಯವನ್ನು ಲಾಕ್ ಮಾಡಿದ್ದು, ಸದರಿ ಪಂಚಾಯಿತಿಗಳ ಡಾಟಾ ಎಂಟ್ರಿ ಆಪರೇಟರ್ ಗಳನ್ನು ಸೇವೆಯಿಂದ ತೆಗೆದು ಹಾಕಿರುವುದಾಗಿ ತಿಳಿಸಿರುತ್ತಾರೆ. ಇದರಿಂದಾಗಿ ಡಾಟಾ ಎಂಟ್ರಿ ಕೆಲಸಗಳಿಗೆ

ತೊಂದರೆಯಾಗುತ್ತದೆ; ಆದುದರಿಂದ ಈ ಕುರಿತು ಪರಿಶೀಲಿಸಿ ತಪ್ಪಾಗಿರುವೆಡೆಗಳಲ್ಲಿ ಮಾತ್ರ ಶಿಸ್ತು ಕ್ರಮವಹಿಸ ಬೇಕು ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಿಣಿಯವರು, 08 ಗ್ರಾಮ ಪಂಚಾಯಿತಿಗಳಲ್ಲಿ ಡಾಟಾ ಎಂಟ್ರಿ ಆಪರೇಟರ್ ಗಳನ್ನು ಸೇವೆಯಿಂದ ವಜಾಗೊಳಿಸಲಾಗಿದೆ; ರೇಷನ್ ಕಾರ್ಡ್ ಮತ್ತಿತರ ದಾಖಲಾತಿಗಳನ್ನು ಪಡೆಯಲು ಪಂಚಾಯಿತಿಗಳಲ್ಲಿ ಡಾಟಾ ಎಂಟ್ರಿ ಆಪರೇಟರ್ ಗಳ ಅತ್ಯಾವಶ್ಯಕತೆ ಇದೆ; ಆದುದರಿಂದ ಸದರಿ ಡಾಟಾ ಎಂಟ್ರಿ ಆಪರೇಟರ್ ಗಳನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಬದಲಾಗಿ ಇತರೆ ಯಾವುದಾದರೂ ಯೋಜನೆಯಡಿ ಸೇವೆಗೆ ಮರು ನೇಮಿಸಬೇಕು ಎಂದು ಸಭೆಯ ಗಮನ ಸೆಳೆದರು.

ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು, ಚಿಕ್ಕನಾಯಕನಹಳ್ಳಿ ತಾಲ್ಲೂಕು ವ್ಯಾಪ್ತಿಯ 15 ಗ್ರಾಮ ಪಂಚಾಯಿತಿಗಳಲ್ಲಿ ಡಾಟಾ ಎಂಟ್ರಿ ಆಪರೇಟರ್ ಗಳನ್ನು ಸೇವೆಯಿಂದ ವಜಾಗೊಳಿಸಿದ್ದು, ಈ ಕುರಿತು ಮರುಪರಿಶೀಲಿಸಿ ಅವರುಗಳನ್ನು ಮರು ನೇಮಿಸಲು ಕ್ರಮವಹಿಸಬೇಕು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಅರುಣ್ ಕುಮಾರ್ ರವರು, ರಸ್ತೆ ಚರಂಡಿ ಇತ್ಯಾದಿ ಸಿವಿಲ್ ಕಾಮಗಾರಿಗಳಲ್ಲಿ ಅವ್ಯವಹಾರ ಆಗುತ್ತದೆ, ಆದರೆ ಶೌಚಾಲಯ ಕಾಮಗಾರಿಗಳಲ್ಲಿ ಅವ್ಯವಹಾರ ನಡೆಯಲು ಸಾಧ್ಯವೇ ಇಲ್ಲ; ಇತರೆ ಕಾಮಗಾರಿಗಳಲ್ಲಿನ ಅವ್ಯವಹಾರಕ್ಕೆ ಕುಣಿಗಲ್ ತಾಲ್ಲೂಕಿನ 12 ಪಂಚಾಯಿತಿಗಳಲ್ಲಿ ಅಮಾಯಕರು ಬಲಿಯಾಗುತ್ತಿದ್ದಾರೆ, ಈ ಬಡಪಾಯಿಗಳಿಗೇಕೆ ತೊಂದರೆಯಾಗಬೇಕು ಎಂದು ಪ್ರಶ್ನಿಸಿದರು.

ಚರ್ಚೆಯ ನಂತರ ಮಾನ್ಯ ಅಧ್ಯಕ್ಷರು, ತಪ್ಪಿತಸ್ಥರನ್ನು ಮಾತ್ರ ಶಿಕ್ಷಿಸಿ ನಿರಪರಾಧಿ ಡಾಟಾ ಎಂಟ್ರಿ ಆಪರೇಟರ್ ಗಳು ಮತ್ತು ಇಂಜಿನಿಯರ್ ಗಳನ್ನು ಸೇವೆಗೆ ಮರು ನೇಮಿಸಲು ನಿಯಮಾನುಸಾರ ಕ್ರಮಕೈಗೊಳ್ಳು ವುದಾಗಿ ಸಭೆಗೆ ಭರವಸೆಯಿತ್ತರು.

(ಕ್ರಮ : ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿ.ಪಂ., ತುಮಕೂರು)

ವಿಷಯ ಸೂಚಿ 09:- ವಸತಿ/ಶೌಚಾಲಯ/ಎನ್.ಆರ್.ಎಲ್.ಎಂ ಯೋಜನೆಗಳ ಪ್ರಗತಿ ಪರಿಶೀಲನೆ ಕುರಿತು ಚರ್ಚೆ.

ಸಭೆಯ ಮಾನ್ಯ ಅಧ್ಯಕ್ಷರು, ವಿವಿಧ ವಸತಿ ಯೋಜನೆಗಳಡಿ ಉತ್ತಮ ಪ್ರಗತಿ ಸಾಧಿಸುವಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಅಗತ್ಯ ಕ್ರಮವಹಿಸುತ್ತಿಲ್ಲ. ವಸತಿ ಯೋಜನೆಯು ಬಡವರಿಗೆ ಅತ್ಯಂತ ಉಪಯುಕ್ತ ಮತ್ತು ಅತ್ಯಗತ್ಯ ಯೋಜನೆಯಾಗಿದ್ದು ಈ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹೆಚ್ಚಿನ ಆದ್ಯತೆ ನೀಡಿ ವಸತಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕಾಗಿದೆ, ಎನ್.ಆರ್.ಎಲ್.ಎಂ. ಯೋಜನೆಯಡಿ ಸ್ವ-ಸಹಾಯ ಸಂಘಗಳು ಸಕ್ರಿಯವಾಗಿ ಕೆಲಸ ನಿರ್ವಹಿಸಬೇಕು; ಶೌಚಾಲಯ ನಿರ್ಮಾಣದೆಡೆಗೆ ತೀವ್ರ ಗಮನಹರಿಸಿ, ಫಲಾನುಭವಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸಬೇಕು ಎಂದು ಸಭೆಯಲ್ಲಿ ಹಾಜರಿದ್ದ ಜಿಲ್ಲೆಯ ಎಲ್ಲಾ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು .

(ಕ್ರಮ : ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ, ಜಿ.ಪಂ.ತುಮಕೂರು)

ವಿಷಯ ಸೂಚಿ 10 :- ಜಿಲ್ಲಾ ಪಂಚಾಯತ್ ವಿವಿಧ ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ಅನುಮೋದಿಸುವ ಬಗ್ಗೆ.

a) ದಿನಾಂಕ:16-07-2014ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.

ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ:16-07-2014ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

b) ದಿನಾಂಕ: 16-07-2014ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.

ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ಮಾನ್ಯ ಅಧ್ಯಕ್ಷರು, ದಿನಾಂಕ: 16-07-2014ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತ ದಿಂದ ಅನುಮೋದಿಸಿತು.

c) ದಿನಾಂಕ: 17-07-2014ರಂದು ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.

ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ: 17-07-2014ರಂದು ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಉಮೇಶ್ ರವರು ಮಾತನಾಡಿ ಜಿಲ್ಲಾ ಪಂಚಾಯತ್ ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಡಿ ವಿಕಲಚೇತನರಿಗಾಗಿ ಶೇ 3 ರಷ್ಟು ಅನುದಾನದ ಬಳಕೆ ಕುರಿತು ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿತ್ತು. ಈ ಬಗ್ಗೆ ಏನು ಕ್ರಮವಹಿಸಲಾಗಿದೆ ಎಂಬ ಬಗ್ಗೆ ಮಾಹಿತಿ ಕೋರಿದರು.

ಮುಖ್ಯಯೋಜನಾಧಿಕಾರಿಯವರು ಮಾತನಾಡಿ ಸಭೆಯ ನಿಗದಿಯಂತೆ 2011-12, 2012-13 ಹಾಗೂ 2013-14 ನೇ ಸಾಲುಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಲಭ್ಯವಾದ ಅನುದಾನಕ್ಕೆ ಶೇ 3 ರಷ್ಟು ಅನುದಾನವನ್ನು ಲೆಕ್ಕಾಹಾಕಿ ಅನುದಾನಕ್ಕೆ ಮಾರ್ಗಸೂಚಿ ಪ್ರಕಾರ ಕ್ರಿಯಾಯೋಜನೆ ತಯಾರಿಸಿ ಸಲ್ಲಿಸುವಂತೆ ಸೂಚಿಸಿ ಎರಡೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ಪತ್ರ ಬರೆಯಲಾಗಿದೆ.ಈ ಪ್ರಕಾರ ತುಮಕೂರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಒಟ್ಟು ರೂ.111.35 ಲಕ್ಷ ಅನುದಾನ ಲಭ್ಯವಿದ್ದು,ಇದರಲ್ಲಿ ಜಿಲ್ಲಾ ಪಂಚಾಯತ್ ಕಟ್ಟಡದ ಲಿಫ್ಟ್ ನಿರ್ಮಾಣಕ್ಕಾಗಿ ರೂ.10.00 ಲಕ್ಷಗಳನ್ನು ಕಾಯ್ದಿರಿಸಲಾಗಿದ್ದು ಉಳಿಕೆ ರೂ.101.35 ಲಕ್ಷಗಳಿಗೆ ವಿಕಲ ಚೇತನರಿಗಾಗಿ ಕಾರ್ಯಕ್ರಮ ರೂಪಿಸಬಹುದಾಗಿದೆ.ಇದೇರೀತಿ ಮಧುಗಿರಿ ಪಂಚಾಯತ್ ರಾಜ್ ಇಂಜಿನಿಯರಿಂಗ ವಿಭಾಗಕ್ಕೆ ರೂ.118.24 ಲಕ್ಷಗಳ ಅನುದಾನ ಲಭ್ಯವಾಗಿದ್ದು,ಇದರಲ್ಲಿ ಜಿಲ್ಲಾ ಪಂಚಾಯತ್ ಕಟ್ಟಡದ ಲಿಫ್ಟ್ ನಿರ್ಮಾಣಕ್ಕಾಗಿ ರೂ.10.00 ಲಕ್ಷಗಳನ್ನು ಕಾಯ್ದಿರಿಸಲಾಗಿದ್ದು ಉಳಿಕೆ ರೂ.108.24 ಲಕ್ಷಗಳಿಗೆ ವಿಕಲ ಚೇತನರಿಗಾಗಿ ಕಾರ್ಯಕ್ರಮ ರೂಪಿಸಬಹುದಾಗಿದೆ ಎಂದರು.

ಮಾನ್ಯ ಅಧ್ಯಕ್ಷರು, ಮಾತನಾಡಿ ಎರಡು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳಿಗೆ ಲಭ್ಯವಾಗುವ ಅನುದಾನಕ್ಕೆ ಸರ್ಕಾರದ ಮಾರ್ಗ ಸೂಚಿ ಪ್ರಕಾರ ವಿಕಲ ಚೇತನರ ಅನುಕೂಲಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿ ಕ್ರಿಯಾಯೋಜನೆಗಳನ್ನು ಒಂದು ವಾರದೊಳಗೆ ಜಿಲ್ಲಾ ಪಂಚಾಯತಿಗೆ ಸಲ್ಲಿಸುವಂತೆ ಎರಡು ವಿಭಾಗಗಳ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.

(ಕ್ರಮ: ಕಾರ್ಯಪಾಲಕ ಅಭಿಯಂತರರು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ ತುಮಕೂರು/ ಮಧುಗಿರಿ)

ಸಮಗ್ರ ಚರ್ಚೆಯ ನಂತರ ದಿನಾಂಕ:17-07-2014 ರ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**d) ದಿನಾಂಕ: 17-07-2014ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮಾನ್ಯ ಅಧ್ಯಕ್ಷರು, ದಿನಾಂಕ 17-07-2014 ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಸೂಚಿ 11 :- ದಿನಾಂಕ : 28-05-2014 ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಯ ಅನುಪಾಲನ ವರದಿ ಬಗ್ಗೆ.**

ದಿನಾಂಕ: 28-05-2014ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಯ ಅನ್ವಯ ಕೈಗೊಂಡ ಕ್ರಮದ ಬಗೆಗಿನ ಅನುಪಾಲನಾ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ ಸೂಚಿ 12** :-ಮುಖ್ಯಯೋಜನಾಧಿಕಾರಿಗಳು ಮಾತನಾಡಿ 2013-14ನೇ ಸಾಲಿನ 13ನೇ ಹಣಕಾಸು ಯೋಜನೆ ಸಾಮಾನ್ಯ ಮೂಲ ಅನುಧಾನದ 2ನೇ ಕಂತಿನ ಮೊತ್ತ ರೂ.213.18 ಲಕ್ಷ, ಸಾಮಾನ್ಯ ನಿರ್ವಹಣೆ ಮೊದಲ ಕಂತಿನ ಮೊತ್ತ ರೂ.152.00ಲಕ್ಷ ಹಾಗೂ 2ನೇ ಕಂತಿನ ಮೊತ್ತ ರೂ.265.77 ಲಕ್ಷಗಳಿಗೆ ತಾಲ್ಲೂಕುವಾರು ತಯಾರಿಸಲಾದ ಕ್ರಿಯಾ ಯೋಜನೆಗಳಿಗೆ ಸಾಮಾನ್ಯ ಸಭೆಯ ಅನುಮೋದನೆ ಕೋರಿದರು.

ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಯಿತು.

**ವಿಷಯ ಸೂಚಿ 13:- ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು:-**

ಚರ್ಚಿಸತಕ್ಕ ವಿಷಯಗಳು ಮುಕ್ತಾಯಗೊಂಡಿದ್ದರಿಂದ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸ ಲಾಯಿತು.

ಅಧ್ಯಕ್ಷರು,
ಜಿಲ್ಲಾ ಪಂಚಾಯತ್,
ತುಮಕೂರು